# ಕರ್ನಾಟಕ ವಿಧಾನಪರಿಷತ್ತಿನ ನಡವಳಿಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(01ನೇ ಜುಲೈ 2015)

**( 01st JULY 2015)**

ಸಂಪುಟ ೪೩೩ ಕ್ರಮಾಂಕ (೩)

Volume 433 No. (3)

ಕರ್ನಾಟಕ ವಿಧಾನಪರಿಷತ್ತಿನ ಕಾರ್ಯಾಲಯ, ಬೆಂಗಳೂರು

**Karnataka Legislative Council Secretariat, Bengaluru**

# ಕರ್ನಾಟಕ ವಿಧಾನಪರಿಷತ್ತಿನ ನಡವಳಿಗಳು
# KARNATAKA LEGISLATIVE COUNCIL DEBATES

ಅಧಿಕೃತ ವರದಿ

OFFICIAL REPORT

೧೨೯ನೇ ಅಧಿವೇಶನ

129th Session

(01ನೇ ಜುಲೈ 2015)

**( 01st JULY 2015)**

ಸಂಪುಟ ೪೩೩ ಕ್ರಮಾಂಕ (೩)

Volume 433 No. (3)


ಕರ್ನಾಟಕ ವಿಧಾನಪರಿಷತ್ತಿನ ಕಾರ್ಯಾಲಯ, ಬೆಂಗಳೂರು

**Karnataka Legislative Council Secretariat, Bengaluru**

# ಕರ್ನಾಟಕ ವಿಧಾನ ಪರಿಷತ್ತು

ದಿನಾಂಕ: 01ನೇ ಜುಲೈ 2015
ಬುಧವಾರ

## ವಿಷಯಾನುಕ್ರಮಣಿಕೆ

1. ರಾಜ್ಯದ ಕಬ್ಬು ಬೆಳೆಗಾರರಿಗೆ ಸರ್ಕಾರ ಪಾವತಿಸಬೇಕಾಗಿರುವ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಒತ್ತಾಯಿಸಿ ಧರಣಿ.

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)
ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು)

2. ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ.

ವಿಷಯ: ಕೊಪ್ಪಳ ಜಿಲ್ಲೆಯ ಕನಕಪುರ ಗ್ರಾಮದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಯಲ್ಲಾಲಿಂಗ ಎನ್ನುವ ಯುವಕನ ಹತ್ಯೆಯ ಬಗ್ಗೆ.

ಶ್ರೀ ಸೋಮಣ್ಣ ಮ. ಬೇವಿನಮರದ
ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)
ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

(ನಿಯಮ 68ಕ್ಕೆ ಪರಿವರ್ತಿಸಲಾಯಿತು)

**3. ನಿಯಮ 68ರ ಮೇರೆಗೆ ಚರ್ಚೆ.**

**ಕೊಪ್ಪಳ ಜಿಲ್ಲೆಯ ಕನಕಪುರ ಗ್ರಾಮದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಯಲ್ಲಾಲಿಂಗ ಎನ್ನುವ ಯುವಕನ ಹತ್ಯೆಯ ಬಗ್ಗೆ.**

ಶ್ರೀ ಸೋಮಣ್ಣ ಮ. ಬೇವಿನಮರದ

ಶ್ರೀ ಆಚಾರ್ ಹಾಲಪ್ಪ ಬಸಪ್ಪ

ಶ್ರೀ ಕೋಟ ಶ್ರೀನಿವಾಸ ಪೂಜಾರಿ

ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು)

ಡಾ. ಸಿ.ಎನ್. ಅಶ್ವಥ್ ನಾರಾಯಣ

ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು)

ಶ್ರೀ ಶರಣಪ್ಪ ಎನ್. ಮಟ್ಟೂರ

ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು)

ಶ್ರೀ ವಿ.ಎಸ್. ಉಗ್ರಪ್ಪ

ಶ್ರೀ ಕೃಷ್ಣಭೈರೇಗೌಡ (ಕೃಷಿ ಸಚಿವರು)

ಶ್ರೀ ಆರ್.ಕೆ. ಸಿದ್ದರಾಮಣ್ಣ

ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು)

ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು)

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು)

# ಕರ್ನಾಟಕ ವಿಧಾನ ಪರಿಷತ್ತು

*ಬುಧವಾರ, 1ನೇ ಜುಲೈ 2015*

ಸದನವು ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿರುವ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆ 18 ನಿಮಿಷಕ್ಕೆ ಸಮಾವೇಶಗೊಂಡಿತು.

ಸಭಾಪತಿ (ಶ್ರೀ ಡಿ.ಹೆಚ್.ಶಂಕರಮೂರ್ತಿ)ಅವರು ಪೀಠದಲ್ಲಿ ಉಪಸ್ಥಿತರಿದ್ದರು.

~ ~ ~ ~ ~ ~

1. ರಾಜ್ಯದ ಕಬ್ಬು ಬೆಳೆಗಾರರಿಗೆ ಸರ್ಕಾರ ಪಾವತಿಸಬೇಕಾಗಿರುವ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲು ಒತ್ತಾಯಿಸಿ ಧರಣಿ.

**(ಸದನ ಪ್ರಾರಂಭವಾಗುತ್ತಿದ್ದಂತೆ ಬಿ.ಜೆ.ಪಿ. ಮತ್ತು ಜೆ.ಡಿ.ಎಸ್. ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಗೆ ಆಗಮಿಸಿ ಧರಣಿ ಕುಳಿತರು)**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ನಿನ್ನೆ ದಿವಸ ಮಾನ್ಯ ಮುಖ್ಯಮಂತ್ರಿಗಳು 2013–14ರ ಕಬ್ಬಿನ ಸಮಸ್ಯೆ ಬಗ್ಗೆ ಒಂದು ರೂಪ ಕೊಟ್ಟಿದ್ದಾರೆ. ಆದರೆ 2014–15ನೇ ಸಾಲಿನ 2,120 ಕೋಟಿ ರೂಪಾಯಿಗಳ ಕೊಡಬೇಕಾಗಿರುವ ಬಾಕಿ ಹಣದ ಬಗ್ಗೆ ರೈತರಿಗೆ ಏನು ವ್ಯವಸ್ಥೆ ಮಾಡುತ್ತೇವೆ ಎನ್ನುವುದರ ಬಗ್ಗೆ ಪ್ರಸ್ತಾಪ ಸಹ ಮಾಡಲಿಲ್ಲ. ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, 2014–15ನೇ ಸಾಲಿನ ರೈತರ ಬಾಕಿ ಹಣ ಏನಿದೆ ಅದನ್ನು ನಾವು ಇಂತಹ ದಿವಸದಲ್ಲಿ ಸಕ್ಕರೆ ಕಾರ್ಖಾನೆಗಳ ಮಾಲೀಕರ ಹತ್ತಿರ ಕೊಡಿಸುತ್ತೇವೆ ಎಂದು ಹೇಳಿದರೆ ಇಡೀ ರಾಜ್ಯದ ರೈತರು ಸ್ವಲ್ಪ ನೆಮ್ಮದಿಯಿಂದ ಇರುತ್ತಾರೆ. ಇಲ್ಲವೆಂದರೆ ಕಲ್ಪನೆಯೇ ಇಲ್ಲದಂತೆ ಆಗುತ್ತದೆ. 2014–15ನೇ ಸಾಲಿನಲ್ಲಿ ಕಾರ್ಖಾನೆಗಳ ಮಾಲೀಕರು ರೈತರಿಂದ ಕಬ್ಬನ್ನು ಖರೀದಿ ಮಾಡಿ, ಆ ಕಬ್ಬಿನಿಂದ ಸಕ್ಕರೆಯನ್ನು ಉತ್ಪಾದನೆ ಮಾಡಿದ್ದಾರೆ. ಸುಮಾರು 1,575 ಕೋಟಿ ರೂಪಾಯಿಗಳಷ್ಟು ಬೆಲೆ ಬಾಳುವಂತಹ ಸಕ್ಕರೆಯನ್ನು ಕಾರ್ಖಾನೆಯ ಮಾಲೀಕರಿಂದ ವಶ ಪಡಿಸಿಕೊಂಡಿದ್ದಾರೆ. ಇನ್ನೂ ಕೆಲವು ಸಕ್ಕರೆ ಕಾರ್ಖಾನೆಗಳಲ್ಲಿ ಇರುವಂತಹ ಸಕ್ಕರೆಯನ್ನು ವಶಪಡಿಸಿಕೊಳ್ಳುತ್ತೇವೆಂದು ಹೇಳಿದ್ದಾರೆ. ವಶಪಡಿಸಿಕೊಂಡಿರುವಂತಹ ಸಕ್ಕರೆಯನ್ನು ಮಾರಾಟ ಮಾಡಿದರೆ ಸಾಕು ರೈತರ ಹಣವನ್ನು ಕೊಡಬಹುದು. ಅದಕ್ಕೋಸ್ಕರ ನಾನು ಸರ್ಕಾರದಲ್ಲಿ ಮನವಿ ಮಾಡುವುದೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ದಿವಸ ಘೋಷಣೆ ಮಾಡಿದಂತಹ ಸಂದರ್ಭದಲ್ಲಿ 2014–15ನೇ ಸಾಲಿನ ರೈತರ ಬಾಕಿ ಹಣದ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಆದುದರಿಂದ ತಮ್ಮ ವಶದಲ್ಲಿ ಇಟ್ಟುಕೊಂಡಿರುವಂತಹ ಸಕ್ಕರೆಯನ್ನು ಹರಾಜು ಹಾಕಿ ಅದರಿಂದ ಬಂದಂತಹ ಹಣವನ್ನು 2014–15ನೇಸಾಲಿನ ಬಾಕಿ ಹಣವನ್ನು ಖಂಡಿತ ಕೊಡಿಸುತ್ತೇವೆ ಎಂದು ಹೇಳಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ.

ನಿಲುವಳಿ ಸೂಚನೆಯನ್ನು ಪ್ರಶ್ನೋತ್ತರ ಅವಧಿಗಿಂತ ಮೊದಲು ತೆಗೆದುಕೊಂಡಿದ್ದು ಇದು ವಿಧಾನ ಪರಿಷತ್ತಿನ ಚರಿತ್ರೆಯಲ್ಲಿ ದಾಖಲಾಗಿದೆ. ನಮ್ಮ ಸರ್ಕಾರವೂ ಕೂಡ ಇದು ರೈತರ ಜ್ವಲಂತ ಸಮಸ್ಯೆ ಆಗಿರುವುದರಿಂದ ಸದನದ ಎಲ್ಲಾ ಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತನೆಯನ್ನು ಮಾಡಿ, ಚರ್ಚೆಗೆ ಅವಕಾಶ ಮಾಡಿಕೊಟ್ಟಿದೆ. ವಿರೋಧ ಪಕ್ಷದ ಬೇಡಿಕೆಗೆ ನಮ್ಮ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸಿದ್ದು ಹೀಗೆ ಪ್ರಶ್ನೋತ್ತರಅವಧಿಗಿಂತ ಮೊದಲು ನಿಯಮ 68ರ ಅಡಿಯಲ್ಲಿ ಚರ್ಚೆ ನಡೆಯಬೇಕೆಂದು ಈ ಪದ್ಧತಿ ಇದೇ ಮೊದಲು ಇದೇ ಕೊನೆ ಎಂದು ತಾವು ಕೂಡ ಒಂದು ನಿರ್ಣಯವನ್ನು ನೀಡಿದಿರಿ. ನಿಯಮ 59ರ ಅಡಿಯಲ್ಲಿ ನೀಡಿದಂತಹ ನಿಲುವಳಿ ಸೂಚನೆಯನ್ನು ನಿಯಮ 68ಕ್ಕೆ ಪರಿವರ್ತನೆಯನ್ನು ಮಾಡಿ, ಬಹಳಷ್ಟು ಸುದೀರ್ಘವಾದ ಚರ್ಚೆ 2 ದಿವಸಗಳ ಕಾಲ

ಕಬ್ಬು ಬೆಳೆಗಾರರ ಸಮಸ್ಯೆಗಳ ಬಗ್ಗೆ ಚರ್ಚೆಯನ್ನು ಮಾಡಿದೆವು. ಆ ಸಂದರ್ಭದಲ್ಲಿಅವರ ಬೇಡಿಕೆ ಇದ್ದದ್ದು ರೂ.2550, ರೂ.2500+150 ಕೊಡಬೇಕೆನ್ನುವ ನಿಲುವಳಿ ಸೂಚನೆಯ ಉದ್ದೇಶ ನಮ್ಮ ಗಮನಕ್ಕೆ ಬಂದಿದೆ. ನಿಲುವಳಿ ಸೂಚನೆಯಲ್ಲಿ ರೂ.2500 ಮತ್ತು ಪ್ರೋತ್ಸಾಹಧನ ಎಂದು ರೂ.150 ಎಂದರೆ ಒಟ್ಟು 2650 ರೂಪಾಯಿ ಕೊಡಬೇಕಾಗಿದ್ದು ಬಹುತೇಕ ಸಕ್ಕರೆ ಕಾರ್ಖಾನೆಯಲ್ಲಿ ರೂ.200 ರೂಪಾಯಿಗಳಷ್ಟು ಹಣ ಬಾಕಿ ಉಳಿದಿದ್ದು ಅದನ್ನು ಕೊಡಿಸಬೇಕೆನ್ನುವ ವಿಚಾರವನ್ನು ನಿಯಮ 68ರ ಅಡಿಯಲ್ಲಿ ಸಂಪೂರ್ಣವಾಗಿ ಚರ್ಚೆಯನ್ನು ಮಾಡಿದೆವು.

**ಶ್ರೀ ಬಸವರಾಜ ಹೊರಟ್ಟಿ:–** ಈಗ ನೀವು ಮಾಡುತ್ತೀರೋ ಇಲ್ಲವೋ ಎನ್ನುವುದನ್ನು ಎರಡರಲ್ಲಿ ಒಂದು ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ನಾನಿಲ್ಲಿ ಮಾತನಾಡಬಾರದೆಂದು, are you restricting me? Am I not allowed to speak?

**ಶ್ರೀ ಬಸವರಾಜ ಹೊರಟ್ಟಿ:–** ಈಗ ನಮ್ಮ ಪ್ರಶ್ನೆಗೆ ಉತ್ತರವನ್ನು ಹೇಳಿದರೆ ಮುಗಿಯಿತು. ನೀವು ಹೇಳಿದ್ದನ್ನೇ ಹೇಳಿ, ಈಗ ಸೆಟೆದುಕೊಂಡು ಕುಳಿತರೆ ಹೇಗೆ? ಸೆಟೆದುಕೊಂಡುಕೂರುವುದಕ್ಕೆ ನೀವಿನ್ನೂ ಹುಡುಗರಲ್ಲ, ಹೈಸ್ಕೂಲ್ ಮಕ್ಕಳು ಮಾಡಿದ ಹಾಗೆ ಮಾಡುವುದಕ್ಕೆಇದು ಮನೆಯಲ್ಲ, ಮನೆಯಲ್ಲಾದರೆ ಕಾಳಜಿ ಮಾಡುತ್ತಾರೆ, ಇಲ್ಲಿಯಾರು ಕಾಳಜಿಯನ್ನು ಮಾಡುತ್ತಾರೆ. ಸೆಟೆದುಕೊಳ್ಳಬೇಡಿ ಏಳಿ,

**ಶ್ರೀ ಕೆ.ಎಸ್. ಈಶ್ವರಪ್ಪ:–** 2013–14ನೇ ಸಾಲಿನ ಬಾಕಿ ಕೊಡುತ್ತೇವೆಎಂದು ಹೇಳಿಬಿಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ನಾನು ನನ್ನ ವಿಚಾರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಸಭಾನಾಯಕರನ್ನು ಏಕೆ ವ್ಯಂಗ್ಯ ಮಾಡುವುದು?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರು ನಮ್ಮ ಸಭಾನಾಯಕರು, ಅವರ ಮೇಲೆ ಸಾಕಷ್ಟು ಗೌರವ ಇಟ್ಟುಕೊಂಡಿದ್ದೇವೆ, ಇಲ್ಲಿ ವ್ಯಂಗ್ಯ ಮಾಡುವ ಪ್ರಶ್ನೆಯೇ ಇಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ಮಾನ್ಯ ಹೊರಟ್ಟಿಯವರು ಐಟಿ ಬಗ್ಗೆ ಒಂದು ಮಾತನ್ನು ಹೇಳಿದರು. ನಾನು ಮಾಹಿತಿ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನದ ಮಂತ್ರಿಯಾದಾಗ ನನ್ನ ಬಗ್ಗೆ ಕೆಲವು ಮಾಹಿತಿ ತಂತ್ರಜ್ಞಾನ, ವಿಜ್ಞಾನ ತಂತ್ರಜ್ಞಾನ ಕ್ಷೇತ್ರದ ದಿಗ್ಗಜರು ಕಾಮೆಂಟ್ಸ್ ಮಾಡಿದರು. ಆಗ ನಾನು ಅವರಿಗೆ ನನಗೆ ನನ್ನ ದೇಹಕ್ಕೆ ವಯಸ್ಸು ಆಗಿರಬಹುದು, my heart and mind is very young ಎಂದು ಹೇಳಿದೆನು. ಆ ಇಲಾಖೆಯನ್ನು ವಹಿಸಿಕೊಂಡು ನನ್ನ ಮೇಲೆ ಯಾರು ಟೀಕೆ ಟಿಪ್ಪಣಿಗಳನ್ನು ಮಾಡಿದ್ದಾರೆ, ಅವರು ಇವತ್ತು really ITBT Minister is good ಎಂದು ನನಗೆ ಅಭಿನಂದನಾ ಪತ್ರವನ್ನು ಬರೆದಿದ್ದಾರೆ. ಆ ದಿಶೆಯಲ್ಲಿ ನಾನು ಕೆಲಸ ಮಾಡಿದ್ದೇನೆ. ITBT ಕ್ಷೇತ್ರ ದಿಗ್ಗಜರು ಈ ಮಾತುಗಳನ್ನು ಹೇಳಿದ್ದಾರೆ.ಅದು ಈ ಸದನಕ್ಕೂ ಗೌರವ ತರತಕ್ಕದ್ದು.

**ಶ್ರೀ ಕೆ.ಎಸ್. ಈಶ್ವರಪ್ಪ:–** 2013–14ನೇ ಸಾಲಿನ ಬಾಕಿಯನ್ನು ಕೊಡುತ್ತೇವೆ ಎಂದು ಒಂದೇ ಮಾತಿನಲ್ಲಿ ಹೇಳಿಬಿಡಿ ಸರ್.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ರೂ.2500 ಮತ್ತು ರೂ.150 ಒಟ್ಟು 2650 ರೂಪಾಯಿ ಹಣದಲ್ಲಿ ರೂ.200 ಮಾತ್ರ ಬಾಕಿ ಉಳಿದಿದೆ. ವಿಠ್ಠಲ್ ಅರಬಾವಿಯವರು ಆತ್ಮಹತ್ಯೆಯನ್ನು ಮಾಡಿಕೊಂಡಂತಹ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು 150 ರೂಪಾಯಿಗಳನ್ನು ಪ್ರತಿ ಮೆಟ್ರಿಕ್‌ಟನ್‌ಗೆ ಪ್ರತಿಯೊಬ್ಬರ ಖಾತೆಗೆ ನೇರವಾಗಿ ಹಣ ಸಂದಾಯ ಮಾಡುತ್ತೇವೆ ಎಂದು ಘೋಷಣೆ ಮಾಡಿದ್ದರು, ನುಡಿದಂತೆ ನಡೆಯಬೇಕೆಂದು ನಾವು ಪ್ರತಿಯೊಬ್ಬ ರೈತರ ಖಾತೆಗೆ ಪ್ರತಿ ಮೆಟ್ರಿಕ್‌ಟನ್‌ಗೆ 150 ರೂಪಾಯಿಯಂತೆ ಹಣವನ್ನು ಜಮಾ ಮಾಡಿದ್ದೇವೆ.

**(ಗೊಂದಲ)**

ಮಾನ್ಯ ಸಭಾಪತಿಗಳೇ, 2500 ರೂಪಾಯಿಗಳಲ್ಲಿ ಗೌರವಾನ್ವಿತ ಮುಖ್ಯಮಂತ್ರಿಗಳು 100 ರೂಪಾಯಿಗಳನ್ನು ಹೆಚ್ಚಳವಾಗಿ ಕೊಟ್ಟರು. 2500 ರೂಪಾಯಿ ಜಾಸ್ತಿಯಾಗಿದೆ ಎನ್ನುವ ವಿಚಾರವನ್ನಿಟ್ಟುಕೊಂಡು ಸಕ್ಕರೆ ಕಾರ್ಖಾನೆಗಳಲ್ಲಿ ಸಕ್ಕರೆ ಬೆಲೆ ಕುಸಿದ ಕಾರಣ ಮತ್ತೆ 100 ರೂಪಾಯಿಗಳನ್ನು ಕೊಟ್ಟರು. ಅಂದರೆ 250 ರೂಪಾಯಿಗಳನ್ನು ನಾವು ಕೊಟ್ಟೆವು ಒಟ್ಟು 1700 ರೂಪಾಯಿಗಳನ್ನು ಸರ್ಕಾರದ ಬೊಕ್ಕಸದಿಂದ ಬಟವಾಡೆ ಮಾಡಲಾಗಿದೆ. ಬಹುತರವಾಗಿ ಭಾರತದೇಶದ ಯಾವ ರಾಜ್ಯದಲ್ಲಿಯೂ ಕೂಡ ಹೀಗೆ ನೇರವಾಗಿ ಕಬ್ಬು ಬೆಳೆಗಾರರ ಖಾತೆಗೆ ಪ್ರತಿ ಮೆಟ್ರಿಕ್‌ಟನ್‌ಗೆ 250 ರೂಪಾಯಿಯ ಹಾಗೆ ಜಮಾ ಮಾಡಿದ್ದು ಇದು ಕೂಡ ಒಂದು ಇತಿಹಾಸ. ಅದರ ಜೊತೆಗೆ ಸಕ್ಕರೆ ಬೆಲೆ ಕುಸಿದ ಕಾರಣ ಕಾರ್ಖಾನೆ ಮಾಲೀಕರಿಗೆ 100 ರೂಪಾಯಿಯತೆರಿಗೆ ವಿನಾಯಿತಿಯನ್ನು ನೀಡಲಾಗಿದೆ.

250+100 ಒಟ್ಟು 350 ರೂಪಾಯಿಯಷ್ಟು ಸಕ್ಕರೆ ಕಾರ್ಖಾನೆಯ ಮಾಲೀಕರಿಗೆ ಅನುಕೂಲವಾಗುವಂತಹ ದಿಟ್ಟವಾದ ಪ್ರಥಮ ನಿರ್ಣಯ ದೇಶದಲ್ಲಿಯೇ ಒಂದು ಚಾರಿತ್ರಕವಾದ ನಿರ್ಣಯವನ್ನು ನಾವು ಕೈಗೊಂಡಿದ್ದೇವೆ 350 ರೂಪಾಯಿಯ ಜೊತೆಗೆ ವಿರೋಧ ಪಕ್ಷದ ನಾಯಕರು ಉಳಿದವರೊಂದಿಗೆ ಸೇರಿ ನಿಲುವಳಿ ಸೂಚನೆಯನ್ನು ತಂದಂತಹ ಸಂದರ್ಭದಲ್ಲಿ ಉಳಿದಿದ್ದ 200 ರೂಪಾಯಿಗಳಲ್ಲಿ 100 ರೂಪಾಯಿ ನೀಡುವಂತಹ ನಿರ್ಣಯವನ್ನುಅವರ ನಿಲುವಳಿ ಸೂಚನೆಯ ಪ್ರಕಾರಕೈಗೊಂಡಿದ್ದೇವೆ. ಈ 100 ರೂಪಾಯಿಗಳನ್ನು ಜುಲೈ 10 ಒಳಗೆ ನೀಡುವುದಾಗಿ ಭರವಸೆಯನ್ನು ನೀಡಿದ್ದೇವೆ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಈಗ ಸರ್ಕಾರ ಕೊಡುತ್ತದೋ ಅಥವಾ ಇಲ್ಲವೋ ಎನ್ನುವುದನ್ನು ಹೇಳಿಬಿಡಲಿ, ಸುಮ್ಮನೆ ಮಾತನಾಡುವುದು ಬೇಡ.

**ಸಭಾಪತಿಯವರು:–** ನಾನು ಇಷ್ಟೇ ಮಾತನಾಡಿ ಇದನ್ನೇ ಮಾತನಾಡಿ ಎಂದು ಹೇಳುವುದಕ್ಕೆ ಆಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ವಿರೋಧ ಪಕ್ಷದ ನಾಯಕರಿಗೆ ಮತ್ತು ಸಭಾನಾಯಕರಿಗೆ ಇಷ್ಟೇ ಸಮಯ ಮಾತನಾಡಬೇಕೆಂದು ಸಮಯದ ನಿಗಧಿ ಏನಾದರೂ ಮಾಡಿದ್ದಲ್ಲಿ ಹೇಳಿ ನಾನು ಈಗಲೇ ಕುಳಿತು ಬಿಡುತ್ತೇನೆ.

(11–30 ಗಂಟೆ)

**ಶ್ರೀ ಬಸವರಾಜ ಹೊರಟ್ಟಿ:–** ಇವರು ರೈತರಿಗೆ ಬಿಟ್ಟು ಕಾರ್ಖಾನೆ ಮಾಲೀಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, 100 ರೂಪಾಯಿ ಎಂದರೆ 2300 ರೂಪಾಯಿಗಳವರೆಗೆ ಹಣ ಬಟವಾಡೆ ಆಗಿತ್ತು. 100 ರೂಪಾಯಿ ಕೂಡ . . .

(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ನಿನ್ನೆಯ ದಿವಸ ಮುಖ್ಯಮಂತ್ರಿಗಳು ಉತ್ತರ ನೀಡುವಂತಹ ಸಂದರ್ಭದಲ್ಲಿ 2500 ರೂಪಾಯಿಗಳನ್ನು ನೀಡಬೇಕಾಗಿದ್ದುಅದರಲ್ಲಿ 2300 ರೂಪಾಯಿಗಳನ್ನು ನೀಡಿದ್ದರಿಂದ ಇನ್ನೂ 200 ರೂಪಾಯಿಗಳ ಬಾಕಿ ಇದ್ದು ಅದರಲ್ಲಿ 100 ರೂಪಾಯಿಗಳನ್ನು ಜುಲೈ 10ರೊಳಗಾಗಿ ನೇರವಾಗಿ ಪ್ರತಿ ಮೆಟ್ರಿಕ್‌ಟನ್‌ಗೆ ಪ್ರತಿಯೊಬ್ಬರ ಖಾತೆಗೆ ನೇರವಾಗಿ ಹಣ ಸಂದಾಯ ಮಾಡುತ್ತೇವೆ ಎಂದು ದಿಟ್ಟ ಘೋಷಣೆ ಮಾಡಿದ್ದರು, ತದನಂತರ ಜುಲೈ

31ರೊಳಗಾಗಿ ಸಕ್ಕರೆಯನ್ನು ಜಪ್ತಿ ಮಾಡಿ, ಅದನ್ನು ಹರಾಜು ಮಾಡಲಿಕ್ಕೆ ಏನಾದರೂ ತೊಂದರೆ ಆಗಿ ನಿಧಾನ ಆದಲ್ಲಿ ಆ ಸಂದರ್ಭದಲ್ಲಿ ಸಕ್ಕರೆ ಕಾರ್ಖಾನೆಯ ಮಾಲೀಕರಿಂದ ಹಣ ಬರದಿದ್ದ ಸಂದರ್ಭದಲ್ಲಿ ಸರ್ಕಾರ ನುಣಚಿಕೊಳ್ಳುವ ಪ್ರಯತ್ನ ಮಾಡದೇ ಉಳಿದಂತಹ 100 ಪ್ರತಿ ಮೆಟ್ರಿಕ್‌ಟನ್‌ಗೆ ಪ್ರತಿಯೊಬ್ಬರ ಖಾತೆಗೆ ನೇರವಾಗಿ ಹಣ ಜಮಾ ಮಾಡಿ, ಜುಲೈ 31ರೊಳಗಾಗಿ 2550 ರೂಪಾಯಿಗಳನ್ನು ನೀಡುವುದಾಗಿ ಸರ್ಕಾರ ಏನು ಭರವಸೆಯನ್ನು ನೀಡಿತ್ತು ಆ ಪ್ರಕಾರ ನಡೆದುಕೊಳ್ಳುತ್ತೇವೆ ಎನ್ನುವ ದಿಟ್ಟವಾದ ಮತ್ತು ಅಚಲವಾದ ನಿರ್ಧಾರವನ್ನು ಈ ಸದನದ ಮೂಲಕ ಹೇಳಿ, ಬಹುತರವಾಗಿ ಈ ನಾಡಿನ ಎಲ್ಲಾ ಕಬ್ಬು ಬೆಳೆಗಾರರ ಹೃದಯ ಸಿಂಹಾಸನದಲ್ಲಿ ಶಾಶ್ವತವಾಗಿ ಮುಖ್ಯಮಂತ್ರಿಗಳು ಮತ್ತು ನಮ್ಮ ಸರ್ಕಾರ ಸ್ಥಾಪಿತವಾಗಿದ್ದಾರೆ ಎನ್ನುವಂತಹ ಮಾತನ್ನು ಹೇಳುವುದಕ್ಕೆ ನಾನು ಬಯಸುತ್ತೇನೆ.

ಮಾನ್ಯ ಸಭಾಪತಿಗಳೇ, ನಾನು ಯಾರನ್ನುಟೀಕೆ ಮಾಡುವುದಕ್ಕೆ ಈ ಮಾತನ್ನು ಹೇಳುವುದಿಲ್ಲ, ನಾನು ಆಳುವ ಪಕ್ಷ ಮತ್ತು ವಿರೋಧ ಪಕ್ಷದವರ ಜೊತೆಯಲ್ಲಿ ಯಾವಾಗಲೂ ಸ್ನೇಹದಿಂದಲೇ ಇರುತ್ತೇನೆ. ಸೌಹಾರ್ದಯುತವಾಗಿಯೇ ನಡೆದುಕೊಂಡು ಬರುತ್ತೇನೆ. ಆದರೆ ಯಾವಾಗ ಸಕ್ಕರೆ ಬೆಲೆ ಪ್ರತಿ ಕ್ವಿಂಟಾಲ್‌ಗೆ 3300 ರೂಪಾಯಿ ಇದ್ದಂತಹ ಸಂದರ್ಭದಲ್ಲಿ 2400 ರೂಪಾಯಿಗಳನ್ನು ಕೊಟ್ಟಂತಹ ಸಂದರ್ಭ ಇತ್ತು. ಇವತ್ತು ನಮ್ಮ ಸರ್ಕಾರ ಸಕ್ಕರೆ ಬೆಲೆ 2600 ರೂಪಾಯಿಗಳಿದಿದ್ದು ಇವತ್ತು 1900 ರೂಪಾಯಿಗಳಿಗೆ ಬಂದಿದ್ದರೂ ಕೂಡ ನಾವು 2650 ರೂಪಾಯಿಗಳನ್ನು ಪ್ರತಿ ಮೆಟ್ರಿಕ್ ಟನ್‌ಗೆ ನೇರವಾಗಿ ರೈತರಿಗೆ ಬಟವಾಡೆ ಮಾಡಿರುವ ಸರ್ಕಾರದ ಕೆಲಸವನ್ನು ಮೆಚ್ಚಿಕೊಳ್ಳಬೇಕಾಗುತ್ತದೆ. ನಾವು ಈ ವಿಚಾರವನ್ನು ಘೋಷಣೆ ಮಾಡಿದ ಕೂಡಲೇ ನಮಗೆ ತುಂಬು ಹೃದಯದ ಅಭಿನಂದನೆಯನ್ನು ಸಲ್ಲಿಸಬೇಕಾಗಿತ್ತು. ಕೃತಜ್ಞತೆಯನ್ನು ಸಲ್ಲಿಸಬೇಕಾಗಿತ್ತು. ಇದರಿಂದ ಒಂದು ಒಳ್ಳೆಯ ಸಂದೇಶ ಹೋಗುತ್ತದೆ. ವಿರೋಧಕ್ಕಾಗಿ ವಿರೋಧವನ್ನು ಮಾಡದೆ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸವನ್ನು ಮಾಡಬಾರದು. ದೇವರು ಅದನ್ನು ಮೆಚ್ಚುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಈಗ ಸಕ್ಕರೆ ಕಾರ್ಖಾನೆ ಮಾಲೀಕರ ಕೈಯಲ್ಲಿ ಎಲ್ಲಾ ಕೀಲಿಯನ್ನು ಇವರು ಕೊಟ್ಟುಬಿಟ್ಟಿದ್ದಾರೆ. ಕೀಲಿ ಕೊಟ್ಟು ಬೇಕಾದ್ದು ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಇವರು ಅತ್ತಂಗೆ ಅವರು ಕರದಂಗೆ ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ಇವರು ತಂದಿದ್ದ ನಿಲುವಳಿ ಸೂಚನೆಯ ಪ್ರಕಾರ, ನಿಯಮ 68ರ ಅಡಿಯಲ್ಲಿ ಏನು ಬೇಡಿಕೆಯನ್ನು ಇಟ್ಟಿದ್ದರು ಅದನ್ನು ಸಂಪೂರ್ಣವಾಗಿ ಈಡೇರಿಸಿರುವುದು ಮಾತ್ರವಲ್ಲದೇ ಸರ್ಕಾರದ ಬೊಕ್ಕಸದಿಂದ 1520 ಕೋಟಿ ರೂಪಾಯಿಗಳನ್ನು ಬಟವಾಡೆ ಮಾಡಲಿಕ್ಕೆ 1173 ಕೋಟಿಯನ್ನು ಮೊದಲೇ ನೀಡಿದ್ದೆವು ಮತ್ತೆ 100 ರೂಪಾಯಿಗಳನ್ನು

ಕೊಡುವುದರಿಂದ 1520 ಕೋಟಿಯಷ್ಟು ಹಣ ಸರ್ಕಾರದ ಬೊಕ್ಕಸದಿಂದ ಹಣ ಜುಲೈ 10ರ ಒಳಗಾಗಿ ರೈತರ ಖಾತೆಗೆ ಜಮಾ ಆಗುವಂತಹ ದಿಟ್ಟವಾದ ಐತಿಹಾಸಿಕವಾದ, ಚಾರಿತ್ರಿಕವಾದ ನಿರ್ಣಯವನ್ನು ನಾವು ಕೈಗೊಂಡಿದ್ದೇವೆ. ಜುಲೈ 31ರ ಒಳಗಾಗಿ 100 ರೂಪಾಯಿ ಸಕ್ಕರೆ ಕಾರ್ಖಾನೆ ಮಾಲೀಕರಿಂದ ಬರದಿದ್ದ ಸಂದರ್ಭದಲ್ಲಿ ನಿಶ್ಚಿತವಾಗಿ ಕರ್ನಾಟಕ ಸರ್ಕಾರ ಶ್ರೀಮಾನ್ ಸಿದ್ದರಾಮಯ್ಯನವರ ನೇತೃತ್ವದ ರೈತಪರ ಸರ್ಕಾರ 100 ರೂಪಾಯಿಗಳನ್ನು ಕೂಡ ರೈತರ ಖಾತೆಗೆ ಜಮಾ ಮಾಡುತ್ತೇವೆ ಎಂದು ದಿಟ್ಟವಾದ ನಿರ್ಧಾರ ಕೈಗೊಂಡಿದ್ದೇವೆ. ಈ ನಿರ್ಧಾರ "ನ ಭೂತೋ ನ ಭವಿಷ್ಯತಿ" ಹಿಂದೆ ಆಗಿಲ್ಲ ಮುಂದೆನೂ ಆಗುವುದಿಲ್ಲ ಎನ್ನುವಂತಹ ದೊಡ್ಡದಾದ ರೈತ ಪರ ಸರ್ಕಾರ, ರೈತರ ತೊಂದರೆಗೆ ರೈತರ ಸಂಕಷ್ಟಕ್ಕೆ ಧಾವಿಸಿ ಬಂದಂತಹ ಸರ್ಕಾರಯಾವುದಾದರೂ ಭಾರತದೇಶದಲ್ಲಿ ಇದೇ ಎಂದರೆ ಕಾಂಗ್ರೆಸ್ ಪಕ್ಷದ ಶ್ರೀಮಾನ್ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ಎಂದು ನಾನು ಹೇಳಬೇಕಾಗುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಅತ್ಯಂತ ಹಿರಿಯರು, ವಿಧಾನ ಪರಿಷತ್ತಿನಲ್ಲಿ ದೇಶದಲ್ಲಿಯೇ ಹಿರಿಯರು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಇವರನ್ನು ಜಗದ್ಗುರುಗಳನ್ನಾಗಿ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಯಾವ ಮಠ ಖಾಲಿ ಇದೆ, ಯಾವುದಾದರೂ ಮಠ ನೋಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ 2013–14ನೇ ಸಾಲಿನದ್ದು ಹೇಳಲಿ.

**ಸಭಾಪತಿಯವರು:–** ಈಗ ಸದಸ್ಯರು ಬಾವಿಯಲ್ಲಿದ್ದುಕೊಂಡೆ ಚರ್ಚೆ ನಡೆಸುತ್ತೀರೋ ಅಥವಾ ತಮ್ಮ ತಮ್ಮ ಸ್ಥಾನದಲ್ಲಿ ಕುಳಿತುಕೊಂಡು ಸದನದ ಕಲಾಪ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೀರೋ ಎನ್ನುವುದನ್ನು ನಾನು ಕೇಳಬೇಕು. ಬಾವಿಯಲ್ಲಿದ್ದ ಹಾಗೆ ಚರ್ಚೆ, ಪ್ರಶ್ನೋತ್ತರ ನಡೆಸುವುದು ಸಂಪ್ರದಾಯವೂ ಅಲ್ಲ ಸರಿಯೂ ಅಲ್ಲ. ಬಾವಿಯಲ್ಲಿರುವವರು ಮಾತನಾಡುತ್ತಿರುತ್ತಾರೆ. ಹೊರಗಡೆ ಇರುವವರೂ ಮಾತನಾಡುತ್ತಾ ಇರುತ್ತಾರೆ. ಇದು ಆಗುವುದಿಲ್ಲ. ದಯಮಾಡಿ ಸದಸ್ಯರು ತಮ್ಮತಮ್ಮ ಸ್ಥಾನಗಳಿಗೆ ತೆರಳಿ ಈ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, 2013–14ನೇ ಸಾಲಿನದ್ದು ಏನು ಎನ್ನುವುದನ್ನು ಮಾನ್ಯ ಸಚಿವರು ಸ್ಪಷವಾಗಿ ಹೇಳಲಿ. 2014–15ನೇ ಸಾಲಿನಲ್ಲಿಯೂ ಇನ್ನು ಎಷ್ಟು ಜನರು ಸಾಯಬೇಕು?

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ಇಷ್ಟು ತನಕ ಪೀಠಿಕೆ ಏನು ಹೇಳಬೇಕಾಗಿತ್ತು ಅದನ್ನು ಹೇಳಿದ್ದೇನೆ. ಈಗ ನಾನು ಮುಖ್ಯ ವಿಷಯಕ್ಕೆ ಬರುತ್ತೇನೆ. ಈಗ ವಿರೋಧ ಪಕ್ಷದವರು ಯಾವ ವಿಷಯದ ಮೇಲೆ ನಿಲುವಳಿ ಸೂಚನೆ ತಂದಿದ್ದರೂ ಅದನ್ನು ಈಗಾಗಲೇ ಸರ್ಕಾರ ಈಡೇರಿಸಿದೆ. ಆಮೇಲೆ ತಾವು ಪೀಠದಿಂದ ನಿಯಮ 68ರ ಅಡಿಯಲ್ಲಿ ಚರ್ಚೆ ಪೂರ್ಣಗೊಂಡಿದೆ ಎಂದು ತಾವು ಆದೇಶ ಮಾಡಿದಿರಿ. ಅದು ಮುಗಿದ ನಂತರ ಧರಣಿ ಮಾಡುವುದು ಸೂಕ್ತವಲ್ಲ. ಪ್ರಜಾಪ್ರಭುತ್ವದ ಸತ್ ಸಂಪ್ರದಾಯಕ್ಕೆ ಅನುಗುಣವಾಗಿ ಒಂದು ವಿಷಯದ ಮೇಲೆ ಚರ್ಚೆ ಮುಗಿದ ನಂತರ ಅದಕ್ಕೆ ಪೀಠದಿಂದ ಆದೇಶ ಆದ ನಂತರಧರಣಿ ಮುಂದುವರೆಸುವುದು ಒಳ್ಳೆಯದಲ್ಲ. ಈ ಬಗ್ಗೆ ಕೆಟ್ಟ ಸಂದೇಶ ಹೊರಗೆ ಹೋಗಬಾರದು. ಇವತ್ತು ವಿರೋಧ ಪಕ್ಷದ ನಾಯಕರು 2014–15ನೇ ಸಾಲಿನ ಬಗ್ಗೆ ಕೇಳಿದ್ದಾರೆ. ಆ ಬಗ್ಗೆ ಗೌರವಾನ್ವಿತ ಮುಖ್ಯಮಂತ್ರಿಗಳು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. Fair and Remunerative Price fixed by the Central Government is Rs.2200. 9.5 ಸಕ್ಕರೆ ಇಳುವರಿಗೆ Fair and Remunerative Price 2200 ಫಿಕ್ಸ್ ಮಾಡಿದ್ದು ಅದರ ಅಂದಾಜು ರೂ.2700, ರೂ.2800ರ ರೂಪಾಯಿಯವರೆಗೆ ಹೋಗುವುದರಿಂದ ಮತ್ತು ಈ ಬಾರಿ ಸಕ್ಕರೆ ಬೆಲೆ ಬಹಳಷ್ಟು ಬೆಲೆ ಕುಸಿದಿದ್ದು ಪ್ರತಿಕ್ವಿಂಟಾಲ್‌ಗೆ ರೂ.1900 ರವರೆಗೆ ಕುಸಿದಿದ್ದ ಹಿನ್ನಲೆಯಲ್ಲಿ ಅಂದಾಜು 397 ರೂಪಾಯಿಯಷ್ಟು ಗ್ಯಾಪ್ ನಿರ್ಮಾಣ ಆಗಿದೆ. Fair and Remunerative Price ಮತ್ತು ಇವತ್ತು ಮಾರುಕಟ್ಟೆಯಲ್ಲಿರುವ ಬೆಲೆಗೆ 397ರಿಂದ400 ರೂಪಾಯಿಯವರೆಗೆ ಗ್ಯಾಪ್ ನಿರ್ಮಾಣ ಆಗಿದೆ. ಇದನ್ನು ಹೇಗೆ fill up ಮಾಡಬೇಕೆಂದರೆ ಕೇಂದ್ರಸರ್ಕಾರದವರು Fair and Remunerative Price ಅನ್ನು ಫಿಕ್ಸ್ ಮಾಡುತ್ತಾರೆ. ಅವರು 3700 ರೂಪಾಯಿಗಳನ್ನು ಆಧಾರವಾಗಿಟ್ಟುಕೊಂಡು ಇದನ್ನು ಫಿಕ್ಸ್ ಮಾಡಿದ್ದಾರೆ. ಇವತ್ತು ಕೇಂದ್ರಸರ್ಕಾರ ನಮ್ಮ ಅನ್ನದಾತ ರೈತರ ಸಹಾಯಕ್ಕೆ ಧಾವಿಸಬೇಕು. We are in a federal structure.

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಗಳೇ, ಈ ಸಮಸ್ಯೆಗೆ ಏನು ಮಾಡಬಹುದು ಎನ್ನುವುದರ ಬಗ್ಗೆ ಮಾನ್ಯ ಸಚಿವರು ಬಹಳ ಸಮಂಜಸವಾಗಿ ಉತ್ತರ ನೀಡುತ್ತಿದ್ದಾರೆ.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, ಇದೊಂದು ಭಂಡ ಸರ್ಕಾರ, ನಮ್ಮ ಬೇಡಿಕೆಗೆ ಸರ್ಕಾರ ಸ್ಪಂದಿಸದ ಕಾರಣ ನಾವು ನಮ್ಮ ಧರಣಿಯನ್ನು ಹಿಂದಕ್ಕೆ ಪಡೆಯುತ್ತೇವೆ. ತಮಗೆ ಮುಂದಿನ ಕಲಾಪ ನಡೆಸುವುದಕ್ಕೆ ಅವಕಾಶ ಮಾಡಿಕೊಡುತ್ತೇವೆ.

(ಈ ಹಂತದಲ್ಲಿ ಬಾವಿಯಲ್ಲಿ ಧರಣಿಯಲ್ಲಿದ್ದ ಮಾನ್ಯ ಸದಸ್ಯರುಗಳು, ಧರಣಿ ನಿಲ್ಲಿಸಿ ತಮ್ಮ ತಮ್ಮ ಸ್ಥಾನಗಳಿಗೆ ಹಿಂದಿರುಗಿದರು.)

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ಈಗ 397 ರೂಪಾಯಿಗಳ ಗ್ಯಾಪ್ ಸೃಷ್ಟಿಯಾಗಿದೆ. ಇದನ್ನು ತುಂಬುವ ಸಲುವಾಗಿ ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಕೇಂದ್ರಸರ್ಕಾರಕ್ಕೆ ಹೋಗಬೇಕೆನ್ನುವ ನಿರ್ಧಾರವಿದೆ. 2014–15ನೇ ಸಾಲಿಗೆ ಏನು ಬೇಡಿಕೆ ಇದೆ, ಅದನ್ನು ಈಡೇರಿಸುವುದು ಕೇಂದ್ರಸರ್ಕಾರದ ಆದ್ಯಕರ್ತವ್ಯ. ಆದ್ದರಿಂದ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗಿ ಈಗ ಉಂಟಾಗಿರುವ ಗ್ಯಾಪ್ ಅನ್ನು ಈ ರಾಷ್ಟ್ರದ ಅನ್ನದಾತರಿಗೆ Fair and Remunerative Price 400 ರೂಪಾಯಿಗಳಷ್ಟು ಗ್ಯಾಪ್ ಇರುವುದರಿಂದ ಇದಕ್ಕೆ ಕೇಂದ್ರಸರ್ಕಾರ ಸಹಾಯ ಮಾಡಬೇಕೆನ್ನುವ ಉದ್ದೇಶದಿಂದ ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗುವವರಿದ್ದೇವೆ. ಇದು ಕೇಂದ್ರಸರ್ಕಾರದ ಕರ್ತವ್ಯ, ಅನ್ನದಾತರ ಕಷ್ಟಕ್ಕೆ ಕೇಂದ್ರಸರ್ಕಾರ, ನೆರವು ನೀಡಬೇಕು.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ಎರಡು ವರ್ಷಗಳ ಹಿಂದೆ ಕಬ್ಬಿನ ಸಮಸ್ಯೆ ಉಂಟಾದಾಗ ಕೇಂದ್ರಸರ್ಕಾರಕ್ಕೆ ಏಕೆ ಹೋಗಲಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಕೇಂದ್ರ ಸರ್ಕಾರಕ್ಕೆ ಅನ್ನದಾತನ ಬಗ್ಗೆ ತಿಳಿಸಬೇಕು. ನಮಗೆ ಆ ಕಾಳಜಿ ಕಕ್ಕುಲಾತಿ ಇರುವುದರಿಂದ ಈ ದೇಶದ ಅನ್ನದಾತರಿಗೆ ಕೇಂದ್ರಸರ್ಕಾರ ಸಹಾಯ ಮಾಡುತ್ತದೆ ಎನ್ನುವ ವಿಶ್ವಾಸದೊಂದಿಗೆ ನಾವು ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗುತ್ತೇವೆ. ಅದರ ಮೂಲಕ ಈ ರಾಜ್ಯದ ಕಬ್ಬು ಬೆಳೆಗಾರರಿಗೆ ನಿಶ್ಚಿತವಾಗಿ ಕೇಂದ್ರಸರ್ಕಾರ ಸಹಾಯ ಮಾಡುತ್ತಾರೆಂದು ಭಾವಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** 2013ರಲ್ಲಿ ಕೇಂದ್ರದಲ್ಲಿಯಾವ ಸರ್ಕಾರವಿತ್ತು?

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೇ, ಇಲ್ಲಿ 'ಹಮ್ ಪಾಂಚ್' ಎನ್ನುವವರಿದ್ದಾರೆ. ಅದರಲ್ಲಿ ಇಬ್ಬರು ಕೌನ್ಸಿಲ್‌ನವರು ಇದ್ದಾರೆ, ಅವರ ಸಲಹೆಯನ್ನು ಪಡೆಯಲಿ.

**ಸಭಾಪತಿಯವರು:–** ಈಗ ಪ್ರಶ್ನೋತ್ತರ ಪ್ರಾರಂಭ ಮಾಡೋಣ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, ಕೊಪ್ಪಳದಲ್ಲಿ ನಡೆದಂತಹ ಹೃದಯ ವಿದ್ರಾವಕವಾದ ಘಟನೆ ಬಗ್ಗೆ. ನಾನೊಂದು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೆನು.

**ಸಭಾಪತಿಯವರು:–** ವಿರೋಧ ಪಕ್ಷದ ನಾಯಕರು ಮತ್ತು ಇನ್ನಿತರ ಗೌರವಾನ್ವಿತ ಸದಸ್ಯರು ಸಹಿ ಮಾಡಿರುವಂತಹ ನಿಲುವಳಿ ಸೂಚನೆ ನನ್ನ ಬಳಿ ಬಂದಿದೆ. ಆದರೆ ನಾನು ಮೊನ್ನೆಯ ದಿವಸ ಹೇಳಿದ ಹಾಗೆ ವಿಷಯದ ಗಂಭೀರತೆಯನ್ನು ನೋಡಿ ಪ್ರಶ್ನೋತ್ತರದ ನಂತರ ಅವಕಾಶ ನೀಡುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೇ, ಯಲ್ಲಾಲಿಂಗ ಎನ್ನುವ ವಿದ್ಯಾರ್ಥಿಯನ್ನು ಕೊಲೆ ಮಾಡಿದ್ದಾರೆ. ಇದು ಬಹಳ ಪ್ರಮುಖವಾದುದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೇ, ತಾವು ಅಂದು ಪ್ರಶ್ನೋತ್ತರಕ್ಕೆ ಮೊದಲು ಬೇರೆ ವಿಷಯ ಚರ್ಚೆಗೆ ಅವಕಾಶ ನೀಡುವುದು ಇದೇ ಮೊದಲು ಹಾಗೂ ಇದೇ ಕೊನೆ ಎಂದು ಹೇಳಿದಿರಿ. ಅದನ್ನೇ ಇಂದು ಪುನರುಚ್ಚಾರ ಮಾಡಿದ್ದೀರಿ. ಪ್ರಶ್ನೋತ್ತರದ ನಂತರ ನಿಲುವಳಿ ಸೂಚನೆಗೆ ಅವರು preliminary submission ಮಾಡಲಿ, ಸರ್ಕಾರದಿಂದ ಉತ್ತರ ಕೊಡಲಾಗುವುದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಪೂರ್ವ ಪೀಠಿಕೆ ಪ್ರಸ್ತಾಪ ಮಾಡಲು 5 ನಿಮಿಷ ಅವಕಾಶ ಕೊಡುತ್ತಿದ್ದೀರಿ. ನಿನ್ನೆ ತಾವು, ಮಾನ್ಯ ಸಭಾನಾಯಕರು ಎಲ್ಲರೂ ತೀರ್ಮಾನ ತೆಗೆದುಕೊಂಡು ರೈತರ ಸಮಸ್ಯೆಗಳ ಬಗ್ಗೆ ಪ್ರಶ್ನೋತ್ತರ ವೇಳೆಗೂ ಮುಂಚೆ ಪ್ರಸ್ತಾಪಿಸಲು ಅವಕಾಶ ಮಾಡಿಕೊಟ್ಟಿರಿ. ಅದಕ್ಕೆ ನಾನು ಖಂಡಿತ ಅಭಿನಂದಿಸುತ್ತೇನೆ. ಈಗಲೂ ಪ್ರಶ್ನೋತ್ತರ ಮುನ್ನ ತೆಗೆದುಕೊಳ್ಳಿ ಎಂದು ನಾನು ಹೇಳುತ್ತಿಲ್ಲ. ಆದರೆ ಪೂರ್ವ ಪೀಠಿಕೆಗೆ ಅವಕಾಶ ಕೊಟ್ಟು, ನಂತರ ಪ್ರಶ್ನೋತ್ತರ ವೇಳೆಯನ್ನು ತೆಗೆದುಕೊಳ್ಳಬೇಕು.ಆ ಭಾಗದ ಶಾಸಕರಾದ ಹಾಲಪ್ಪ ಆಚಾರ್‌ರವರು 5 ನಿಮಿಷಗಳಲ್ಲಿ ಮಾತನಾಡುತ್ತಾರೆ.

**ಶ್ರೀ ಬಸವರಾಜ ಹೊರಟ್ಟಿ (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ನಾನು ಲೋಕಾಯುಕ್ತದ ಬಗ್ಗೆ ನಿಲುವಳಿ ಸೂಚನೆ ಕಳುಹಿಸಿದ್ದು, ಲೋಕಾಯುಕ್ತ ಬಗ್ಗೆ ನಮ್ಮದೇಶದಲ್ಲಿ ನಾಚಿಕೆ ಪಡುವಂತೆಆಗಿದೆ. ಲೋಕಾಯುಕ್ತದಲ್ಲಿ ಈ ರೀತಿ ನಡೆದರೆ ಹೇಗೆ?

**ಶ್ರೀ ಎಸ್.ಆರ್. ಪಾಟೀಲ್:–** ಒಂದು ದಿವಸಕ್ಕೆ ಎಷ್ಟು ನಿಲುವಳಿ ಸೂಚನೆ ಕೊಡಬೇಕು? ಎರಡು ಬಂದಾಗ ಯಾರಿಗೆ ಆದ್ಯತೆ ಕೊಡಬೇಕು.

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣ:–** ವಿಷಯದ ಗಂಭೀರತೆ ನೋಡಿಕೊಂಡು ಕೊಡಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಅವರು ಬೇಕಾದ್ದು ಚರ್ಚೆ ಮಾಡಲಿ, ನಾವು ಯಾವುದಕ್ಕೆ ಬೇಕಾದರೂ ರೆಡಿ ಇದ್ದೇವೆ. ಸರ್ಕಾರ ಬೆನ್ನು ತೋರಿಸದೇ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದರೂ ಸರ್ಕಾರ ಸಮರ್ಥತೆಯಿಂದ ಉತ್ತರ ಕೊಡುತ್ತದೆ. ಈ ತಾಕತ್ತು ಸರ್ಕಾರಕ್ಕೆ ಇದೆ ಎಂದು ತಮ್ಮ ಮುಖಾಂತರ ತಿಳಿಸಬಯಸುತ್ತೇನೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ರಕ್ಷಣೆ ಮಾಡುತ್ತಿದ್ದಾರೆ.

**ಶ್ರೀ ಎಸ್.ಆರ್. ಪಾಟೀಲ್:–** ನಾವು ರಕ್ಷಣೆ ಮಾಡುವುದಿಲ್ಲ, ಲೋಕಾಯುಕ್ತರ ನೇಮಕಾತಿ ಅವರ ಕಾಲದಲ್ಲಿಯೇ ಆಗಿದೆ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ಪ್ರಚಾರಕ್ಕಾಗಿ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಅವರು ನೀತಿ ನಿಯಮಗಳಂತೆ ಮಾತನಾಡುತ್ತಿಲ್ಲ.

**ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ, ಎಲ್ಲರೂ ಸಹಕಾರ ಕೊಡಿ.

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ಕುಳಿತುಕೊಳ್ಳಿ, ನಾನು ನೋಡುತ್ತಿದ್ದೇನೆ. ಎಲ್ಲರೂ ಮಾತನಾಡಿದರೆ ಸದನ ನಡೆಸುವುದಕ್ಕೆ ಆಗುವುದಿಲ್ಲ.

**ಶ್ರೀ ಆರ್.ವಿ. ವೆಂಕಟೇಶ್:–** ದೊಡ್ಡಿ ಮಾಡಿ ಬಿಟ್ಟಿದ್ದಾರೆ. ದನದ ದೊಡ್ಡಿಯಾಗಿದೆ. ದನ ಕಾಯುವವರು ಬೇಕಲ್ಲವೇ?

**ಸಭಾಪತಿಯವರು:–** ಬರವಣಿಗೆಯಲ್ಲಿ ನಮ್ಮ ನಿಯಮಾವಳಿ ಮತ್ತು ಸಂವಿಧಾನದಲ್ಲಿ ಕೆಲವು ನಿಯಮಗಳು ಇರುವುದಿಲ್ಲ. ನಾವು ಸಂಪ್ರದಾಯದಂತೆ ಕೆಲವು ವಿಷಯಗಳನ್ನು ನಡೆಸಿಕೊಂಡು ಬರುತ್ತಿದ್ದೇವೆ. ಬಹಳ ದಿವಸಗಳಿಂದ ನಮ್ಮ ಸದನದಲ್ಲಿ ಗೌರವಾನ್ವಿತ ಸದಸ್ಯರು ಅವರಿಗೆ ಅನಿಸಿದಂತಹ ಸಂದರ್ಭದಲ್ಲಿ ನಿಲುವಳಿ ಸೂಚನೆಯನ್ನು ಒಬ್ಬರು ಅಥವಾ ಇಬ್ಬರು ಅಥವಾ ನಾಲ್ಕಾರು ಜನ ಸಹಿ ಮಾಡಿಕೊಡುವುದಕ್ಕೆ Rule No. 15 ನಲ್ಲಿ ಅವಕಾಶವಿದೆ. ಆದರೆ ನಮ್ಮಲ್ಲಿ ನಡೆದುಕೊಂಡು ಬಂದಿರುವ ಪದ್ಧತಿಯಂತೆ ಒಂದಕ್ಕಿಂತ ಹೆಚ್ಚು ನಿಲುವಳಿ ಸೂಚನೆಗಳು ನನ್ನ ಕಛೇರಿಗೆ ಬಂದ ಸಂದರ್ಭದಲ್ಲಿ ಹಿಂದೆ ಮಾನ್ಯ ನಾಣಯ್ಯನವರೆಲ್ಲರೂ ಇದ್ದ ಸಂದರ್ಭದಲ್ಲಿ ನಡೆದುಕೊಂಡು ಬಂದಿರುವಂತೆ ಅಧಿಕೃತ ವಿಪಕ್ಷ ನಾಯಕರೂ ಕೊಟ್ಟು ಬೇರೆಯವರೂ ಕೊಟ್ಟಿದ್ದ ಸಂದರ್ಭದಲ್ಲಿ ವಿಪಕ್ಷ ನಾಯಕರ ನಿಲುವಳಿ ಸೂಚನೆ ಬೇರೆ ನಿಲುವಳಿ ಸೂಚನೆಗಳಿಗಿಂತ ಮೇಲೆ ಬರುತ್ತದೆ. ಅದನ್ನು ತೆಗೆದುಕೊಳ್ಳುವುದು ಬಿಡುವುದು ನಂತರದ ವಿಚಾರ. ಅದರ ಬಗ್ಗೆ ಚರ್ಚೆ ಮಾಡಬಹುದೇ ಹೊರತು ಬೇರೆಯವರು ಕೊಟ್ಟಿರುವುದು ಬಹಳ ಪ್ರಮುಖ ಇರಬಹುದು ಅಥವಾ ಇಲ್ಲದೇ ಇರಬಹುದು ಆ ವಿಷಯಅಲ್ಲ. ಇದರಲ್ಲಿ merit ವಿಷಯ ಅಲ್ಲ. ನಮ್ಮಲ್ಲಿ ನಡೆದುಕೊಂಡು ಬಂದ ಪದ್ಧತಿಯಂತೆ ವಿಪಕ್ಷ ನಾಯಕರ ಸಹಿ ಇದ್ದ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೋ, ಬೇಡವೋ ಎಂಬ ಚರ್ಚೆ ನಡೆಸುತ್ತೇವೆ. ಆದರೆ ಬೇರೆಯವರದ್ದನ್ನು ಏನೂ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಸದನದಲ್ಲಿ ನಡೆದುಕೊಂಡು ಬಂದಿರುವಂತೆ ಬೇರೆಯವರದ್ದನ್ನು ಪ್ರಸ್ತಾಪ ಮಾಡುವುದಕ್ಕೂ ಬಿಡುತ್ತಿಲ್ಲ. ಆ ಹಿನ್ನೆಲೆಯಲ್ಲಿ ಮಾನ್ಯ ಹೊರಟ್ಟಿಯವರು ಪ್ರಮುಖ ವಿಷಯ ಪ್ರಸ್ತಾಪಿಸಿರುವ ನಿಲುವಳಿ ಸೂಚನೆ ನನ್ನ ಕಛೇರಿಗೆ ಬಂದಿದ್ದು, ಅದರಂತೆ ವಿಪಕ್ಷ ನಾಯಕರ ನಿಲುವಳಿ ಸೂಚನೆಯೂ ಬಂದುಬಿಟ್ಟಿದೆ. ಆದ್ದರಿಂದ ನನ್ನ conventions ಪ್ರಕಾರ ಮತ್ತು ಪ್ರತೀ ಬಾರಿ conventions ಅನ್ನು ಮುರಿಯುವುದು ಕಷ್ಟವಾಗುತ್ತದೆ. ನಿನ್ನೆ–ಮೊನ್ನೆ ಬೇರೆಯಾಗಿದ್ದು, ಪ್ರತಿನಿತ್ಯ ಅದನ್ನೇ ಮಾಡುವುದಕ್ಕೆ ಆಗುವುದಿಲ್ಲ. ವಿಪಕ್ಷ ನಾಯಕರ ನಿಲುವಳಿ ಸೂಚನೆ ಬಂದಾಗ ವಿಷಯದ merit ನಂತರ ಬರುತ್ತದೆ. ಒಮ್ಮೆ ತೆಗೆದುಕೊಂಡ ಮೇಲೆ merit ಹೌದೋ–ಅಲ್ಲವೋ ಎಂದು ಬರುತ್ತದೆ. ಆದರೆ ಪರಿಗಣನೆಗೆ ಬಂದಾಗ ಒಂದನ್ನು ಪಕ್ಕಕ್ಕೆ ಇಡಬೇಕಾಗುತ್ತದೆ. ಆ ರೀತಿ ನನ್ನ ಕಛೇರಿಗೆ ಎರಡೂ ಬಂದಾಗ ವಿಪಕ್ಷ ನಾಯಕರ ನಿಲುವಳಿ ಸೂಚನೆ ನೋಡಿ, ಹೊರಟ್ಟಿಯವರ ವಿಷಯ ಏನು ಎಂದು ಸಹ ನೋಡಲಿಲ್ಲ. ಈಗ ಇದನ್ನು ನೋಡೋಣ. ಆದ್ದರಿಂದ ದಯವಿಟ್ಟು ಕ್ಷಮಿಸಬೇಕು. ಆದ್ದರಿಂದ ಒಂದು ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೋ ಇಲ್ಲವೋ ಎಂಬ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತೇನೆ.

**ಶ್ರೀ ಎಸ್. ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಲೋಕಾಯುಕ್ತರು ಕೊಳ್ಳೆ ಹೊಡೆಯುತ್ತಿದ್ದು, ಕರ್ನಾಟಕ ರಾಜ್ಯ ಹಾಳಾಗಿ ಹೋಗುತ್ತಿದೆ. ಇವೆರಡರಲ್ಲಿ ಯಾವುದು ಮುಖ್ಯ ಎಂದು ತಾವೇ ಯೋಚನೆ ಮಾಡಿ.

**ಸಭಾಪತಿಯವರು:–** ಈಗ ತಾವು convention ಮುರಿಯಬೇಕೆಂದು ಇದ್ದೀರಾ? ಆ ರೀತಿ ಆಗುವುದಿಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತಾವು ಈಗಾಗಲೇ ರೂಲಿಂಗ್ ಕೊಟ್ಟಿದ್ದು, ಅಧಿಕೃತ ವಿಪಕ್ಷ ನಾಯಕರ ನಿಲುವಳಿ ಸೂಚನೆ ಕೈಗೆತ್ತಿಕೊಳ್ಳುವ ಬಗ್ಗೆ ರೂಲಿಂಗ್ ಕೊಟ್ಟಿದ್ದೀರಿ. ಸರ್ಕಾರದ ಪರವಾಗಿ ನನ್ನ ಮನವಿ ಏನೆಂದರೆ ನಿಲುವಳಿ ಸೂಚನೆಯ ಪೂರ್ವಪೀಠಿಕೆಗೆ ಪ್ರಶ್ನೋತ್ತರ ಅವಧಿ ಮುಕ್ತಾಯಗೊಂಡ ನಂತರ ಅವಕಾಶ ಕೊಡಬೇಕೆಂದು ಕೋರುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಇದಕ್ಕೆ ನಮ್ಮ ವಿರೋಧ ಇಲ್ಲ. ಆದರೆ ಬಹಳ ಪ್ರಮುಖವಾದ ವಿಷಯ ಇದಾಗಿದೆ.

**ಸಭಾಪತಿಯವರು:–** ಅದರ ಬಗ್ಗೆ ತಾವು ವಿಪಕ್ಷ ನಾಯಕರ ಬಳಿ ಮಾತನಾಡಿ, ಇಬ್ಬರೂ ಒಂದನ್ನೇ ಕೊಟ್ಟಿದ್ದರೆ ನಾನು ಅದನ್ನೇ ಪರಿಗಣಿಸುತ್ತಿದ್ದೆನು. ಆದರೆ convention ಹಾಗೆ ಇರುವುದರಿಂದ ನಾನು ಏನೂ ಮಾಡುವುದಕ್ಕೆ ಆಗುವುದಿಲ್ಲ.

**ಶ್ರೀ ಬಸವರಾಜ ಹೊರಟ್ಟಿ:–** ಅದು ತಮಗೆ ಬಿಟ್ಟದ್ದು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಇಡೀ ದೇಶದಲ್ಲಿ ಇಂತಹ ಭ್ರಷ್ಟಾಚಾರ ನಡೆದಿಲ್ಲ ಮತ್ತು ಲೋಕಾಯುಕ್ತರನ್ನು ರಕ್ಷಣೆ ಮಾಡುವ ಪ್ರಯತ್ನ ನಡೆಯುತ್ತಿದೆ. ಇದನ್ನು ಸಿಬಿಐ ತನಿಖೆಗೆ ಕೊಡಬೇಕೆಂದು ಹೇಳಿದ್ದೆವು. ನಾಳೆ ನಾನು ಮತ್ತು ಮಾನ್ಯ ಹೊರಟ್ಟಿಯವರು ಇನ್ನೊಂದು ನಿಲುವಳಿ ಸೂಚನೆ ಕೊಡುತ್ತೇವೆ.

**ಸಭಾಪತಿಯವರು:–** ನಾಳೆ ಅಥವಾ ನಾಡಿದ್ದು ಎನ್ನುವುದು ತಮಗೆ ಬಿಟ್ಟದ್ದು. ಈಗ ಪ್ರಶ್ನೋತ್ತರ ಅವಧಿ ಮುಗಿದ ನಂತರ ಇದರ merit ಬಗ್ಗೆ ಹೋಗುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸಾರ್, ಇದು ಹೇಗೆ ಆಗುತ್ತದೆ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಒಬ್ಬ ವಿದ್ಯಾರ್ಥಿ ಕೊಲೆಯಾಗಿದೆ. ಒಬ್ಬ ಮಂತ್ರಿಯ ಬೆಂಬಲಿಗರು ಮಾಡಿರುವಂತಹದ್ದು.... ಮಾಧ್ಯಮಗಳಲ್ಲಿ ಬಂದ ನಂತರ..... 5 ನಿಮಿಷ.....

**Sri S.R. PATIL:-**You have already told and we will abide by your decision.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ಪ್ರಚಾರಕ್ಕೋಸ್ಕರ ಮಾಡುತ್ತಿದ್ದಾರೆ. ವಿಚಾರ ಮಾತನಾಡಲು ಸಿದ್ದ ಇಲ್ಲ.

**ಸಭಾಪತಿಯವರು:–** ನಾನು ನಡೆಸಿಕೊಂಡು ಬಂದಿರುವ ಪದ್ಧತಿಗಳನ್ನು ಪ್ರತೀ ಬಾರಿ break ಮಾಡುವುದಕ್ಕೆ ಆಗುವುದಿಲ್ಲ. ಕೆಲವು ಬಾರಿ ವಿಷಯಗಳ ಮಹತ್ವ ಮತ್ತು ಸರ್ಕಾರದ ಅಭಿಪ್ರಾಯಗಳನ್ನು ತೆಗೆದುಕೊಂಡು ಬೇರೆ ರೀತಿ ಮಾಡಿದ್ದೇವೆ. ನಾನು ಇದನ್ನು ಚರ್ಚೆಗೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಿಲ್ಲ, ಅವಕಾಶ ಕೊಡುತ್ತೇನೆ, ಪ್ರಶ್ನೋತ್ತರ ಅವಧಿ ಮುಗಿಯಲಿ. ನಾನು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** ತಾವು ruling ಕೊಟ್ಟಿರುವಂತೆ ಪ್ರಶ್ನೋತ್ತರ ವೇಳೆ ಮೊದಲು ತೆಗೆದುಕೊಳ್ಳಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ತಮ್ಮ ತೀರ್ಪನ್ನು ಅತ್ಯಂತ ಗೌರವ ಹಾಗೂ ವಿನೂತನ ಭಾವನೆಯಿಂದ ಸ್ವೀಕಾರ ಮಾಡುತ್ತೇವೆ ಎಂದು ಹೇಳಿದ್ದೇನೆ. You have already given a verdict that it should be taken up only after Question Hour. We will abide by your decision and it is binding on all the Members of this August House.

**ಶ್ರೀ ಕೆ.ಎಸ್. ಈಶ್ವರಪ್ಪ:–** ಇಲ್ಲ, ಇಲ್ಲ. ಬಿಎಸಿನಲ್ಲಿ ತೀರ್ಮಾನವಾಗಿರುವಂತೆ ಅದರ ಪ್ರಕಾರ ನಡೆಸಬೇಕು.

**ಶ್ರೀ ಆರ್.ವಿ. ವೆಂಕಟೇಶ್:–** ತಾವು ಕೊಟ್ಟಿರುವ ತೀರ್ಪಿನಂತೆ ನಡೆದುಕೊಳ್ಳುವ ಆದೇಶ ಮಾಡಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೀರ್ಮಾನವಾದ ಮೇಲೆ ಈ ರೀತಿ ಮಾಡಿದರೆ ಯಾವ ನ್ಯಾಯ? 5 ನಿಮಿಷ ಅವಕಾಶ ಕೊಡಿ. (ಗೊಂದಲ)

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧಪಕ್ಷದ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೀರ್ಮಾನವಾದ ಮೇಲೆ ಈ ರೀತಿ ಅಡ್ಡಿಪಡಿಸುವುದು ಯಾವ

ನ್ಯಾಯ? ನನಗೆ ಮಾತನಾಡಲು 5 ನಿಮಿಷಗಳ ಕಾಲಾವಕಾಶವನ್ನು ನೀಡಿ. ನಾನು 5 ನಿಮಿಷಗಳಿಗಿಂತ ಹೆಚ್ಚು ಸಮಯ ಮಾತನಾಡಿದರೆ ತಾವು ನನ್ನ ಮಾತುಗಳನ್ನು ನಿಲ್ಲಿಸಿಬಿಡಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಸನ್ಮಾನ್ಯ ಸಭಾಪತಿಯವರೇ, ತಾವು **'**ಪ್ರಶ್ನೋತ್ತರ ನಂತರ ಪೂರ್ವಭಾವಿ ಪ್ರಸ್ತಾವಕ್ಕೆ ಅವಕಾಶ ಮಾಡಿಕೊಡುತ್ತೇನೆ**'** ಎಂದು ಹೇಳಿದ್ದೀರಿ. ಆ ನಿರ್ಣಯವನ್ನು ನಾವು ಗೌರವದಿಂದ ಸ್ವೀಕಾರ ಮಾಡಿದ್ದೇವೆ. ಆ ನಿರ್ಣಯ ಅವರೆಲ್ಲರಿಗೂ ಅನ್ವಯವಾಗುತ್ತದೆ ಎನ್ನುವ ಮಾತನ್ನು ಮತ್ತೊಮ್ಮೆ ತಮ್ಮ ಗಮನಕ್ಕೆ ತರಲು ಬಯಸುತ್ತಿದ್ದೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾವು ತಮ್ಮ ನಿರ್ಣಯಕ್ಕೆ ಗೌರವವನ್ನು ಕೊಡುತ್ತೇವೆ. ದಯವಿಟ್ಟು ತಾವು ಕೊಟ್ಟಿರುವ ನಿರ್ಣಯವನ್ನು ಮರು ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಿದ್ದೇವೆ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಸನ್ಮಾನ್ಯ ಸಭಾಪತಿಯವರೇ, ಅವರುಗಳು ತಮ್ಮ ಮೇಲೆ ದಬ್ಬಾಳಿಕೆ ಮಾಡುತ್ತಿದ್ದಾರೆ. ಒತ್ತಡ ತರುತ್ತಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೀರ್ಮಾನವಾದ ನಂತರ, ಅಂದಿನಿಂದ ಇಂದಿನವರೆಗೆ ಅನೇಕ ನಿಲುವಳಿ ಸೂಚನೆಗಳನ್ನು ಮಂಡನೆ ಮಾಡಬೇಕಾದರೆ ಪೂರ್ವಭಾವಿ ಪ್ರಸ್ತಾವಕ್ಕೆ ಅನೇಕ ಬಾರಿ ಅವಕಾಶವನ್ನು ನೀಡಲಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಸನ್ಮಾನ್ಯ ಸಭಾಪತಿಯವರೇ, ತಮ್ಮ ನಿರ್ಣಯ ಅಚಲವಾಗಿರಬೇಕು, ಆ ಪೀಠದಿಂದ ಕೊಟ್ಟಿರುವ ನಿರ್ಣಯ ಅಚಲವಾಗಿರಬೇಕು ಮತ್ತು ನಮಗೆ ಆ ಪೀಠದ ಬಗ್ಗೆ ಗೌರವವಿದೆ ಎನ್ನುವ ಮಾತನ್ನು ಹೇಳುವುದಕ್ಕೆ ಬಯಸುತ್ತಿದ್ದೇನೆ. ತಾವು ನಿರ್ಣಯವನ್ನು ಕೊಟ್ಟಿದ್ದೀರಿ. You have given a ruling. That ruling is binding on Leader of the Opposition and all the Members of this House.

**ಶ್ರೀ ಕೆ.ಎಸ್. ಈಶ್ವರಪ್ಪ:–** ಸನ್ಮಾನ್ಯ ಸಭಾಪತಿಯವರೇ, ನಾವು ಪೀಠದ ಬಗ್ಗೆ ಗೌರವವಿಲ್ಲವೆಂದು ಖಂಡಿತ ಹೇಳುತ್ತಿಲ್ಲ. ತಾವು ಏನು ತೀರ್ಮಾನ ಮಾಡಿದ್ದೀರಿ, ಆ ತೀರ್ಮಾನಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ, ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ನಡೆದ ವಿದ್ಯಮಾನವನ್ನು ಸರ್ಕಾರಕ್ಕೆ ಮತ್ತು ತಮಗೆ ನೆನಪು ಮಾಡಿಕೊಡುವುದಕ್ಕೆ ಬಯಸುತ್ತಿದ್ದೇನೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್‌ಃ–** ಸನ್ಮಾನ್ಯ ಸಭಾಪತಿಯವರೇ, ತಾವುಕೊಟ್ಟ ನಿರ್ಣಯದ ಬಗ್ಗೆ ಚರ್ಚೆ ಮಾಡುವುದು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಸಾಧುವಲ್ಲ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್‌ಃ–** ಸನ್ಮಾನ್ಯ ಸಭಾಪತಿಯವರೇ, ಇವತ್ತು ಸದಸ್ಯರುಗಳು ಏನು ನಿರ್ಣಯವನ್ನು ತರುತ್ತಾರೆ ಅದರ ಮೇಲೆ ಚರ್ಚೆ ಮಾಡುವುದಕ್ಕೆ ಸಿದ್ಧವಾಗಿದೆಯೆಂದು ಸರ್ಕಾರ ಸ್ಪಷ್ಟವಾಗಿ ಹೇಳಿದೆ. ಇದು ಕೇವಲ ಪ್ರಚಾರಕ್ಕಾಗಿ ಮಾಡುವ ಗಿಮಿಕ್ಸ್ ಅಷ್ಟೇ, ಯಾವುದೇ ವಿಚಾರದ ಬಗ್ಗೆ ಅವರಿಗೆ ಚಿಂತನೆ ಇಲ್ಲ. ನಿಜಕ್ಕೂ ವಿಚಾರಗಳ ಮೇಲೆ ಮಾತನಾಡುವುದೇ ಆದರೆ ತಮ್ಮ ಆದೇಶ ಏನಿದೆ ಅದರಂತೆ ಪ್ರಶ್ನೋತ್ತರ ವೇಳೆ ನಡೆಯಲಿ, ಅದರ ನಂತರ ಚರ್ಚೆಯಾಗಲಿ, ಎಲ್ಲ ಚರ್ಚೆಗಳಿಗೂ ಉತ್ತರ ಕೊಡುವುದಕ್ಕೆ ಸರ್ಕಾರ ಸಿದ್ಧವಾಗಿದೆ ಎಂದು ಮಾನ್ಯ ಸಭಾ ನಾಯಕರು ಹೇಳಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಖಮರುಲ್ ಇಸ್ಲಾಂ ಅವರಿಗೆ ಸಂಬಂಧಪಟ್ಟ ನಿರ್ಣಯವನ್ನು ಮಂಡನೆ ಮಾಡಿ ಪುನಃ ವಾಪಸ್ಸು ತೆಗೆದುಕೊಳ್ಳಲಾಯಿತು. ಅದಕ್ಕೆ ತಮ್ಮ ಬಗ್ಗೆ ಗೌರವವಿದೆ ಎಂದು ಅವರು ಹೇಳುತ್ತಿದ್ದಾರೆ. ಆ ನಿರ್ಣಯ ಮಂಡನೆ ಮಾಡಬೇಕು ಎಂದು ಹೇಳಲಾಗಿತ್ತು ಅನಂತರ ಇವರುಗಳು ಮನವಿ ಮಾಡಿ ವಾಪಸ್ಸು ತೆಗಿಸಿದರು. ಆಗ ಇವರಿಗೆ ತಮ್ಮ ನಿರ್ಣಯದ ಬಗ್ಗೆ ನೆನಪಾಗಲಿಲ್ಲ. ಸಾವಿರಾರು ಕೋಟಿ ರೂಪಾಯಿಗಳು ಲೂಟಿ ಆಗಿತ್ತು. ಅದರ ಬಗ್ಗೆ ತಮ್ಮಲ್ಲಿ ಮನವಿ ಮಾಡಿ ಆ ನಿರ್ಣಯವನ್ನು ವಾಪಸ್ಸು ತೆಗೆಸಿದರು.

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣಃ–** ಸನ್ಮಾನ್ಯ ಸಭಾಪತಿಯವರೇ, ಲೂಟಿ ಅವರು ಮಾಡಿರುವುದು, ನಾವು ಮಾಡಿಲ್ಲ. ಇವರುಗಳು ಸಾವಿರ ಅಲ್ಲ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಲೂಟಿ ಮಾಡಿದ್ದಾರೆ.

**(ಗೊಂದಲ)**

**ಡಾ. ಸಿ.ಎನ್. ಅಶ್ವಥ್ ನಾರಾಯಣಃ–** ಸನ್ಮಾನ್ಯ ಸಭಾಪತಿಯವರೇ, ಲೂಟಿ ಮಾಡಿರುವವರುಅವರು.ನಾವಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್‌ಃ–** ಸನ್ಮಾನ್ಯ ಸಭಾಪತಿಯವರೇ, ಎಂತಹ ದುರ್ದೈವದ ಸಂಗತಿಯೆಂದರೆ, ಲೂಟಿಕೋರರಿಂದ ನಾವು ಪಾಠ ಕಲಿಯುವಂತಹ ಪರಿಸ್ಥಿತಿ ಬಂದಿದೆ. 5 ವರ್ಷಗಳ ಕಾಲ ನಿರಂತರವಾಗಿ ಲೂಟಿ ಮಾಡಿ ಇತಿಹಾಸದಲ್ಲಿ ಕೆಟ್ಟ ಹೆಸರು ತಂದವರಿಂದ ನಾವು ಪಾಠ ಕಲಿಯುವಂತಾಗಿದೆ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶಃ–** ಸನ್ಮಾನ್ಯ ಸಭಾಪತಿಯವರೇ, ಚರ್ಚೆ ಮಾಡುವುದಕ್ಕೆ ಅವರು ಸಿದ್ಧರಿಲ್ಲ. ಕೇವಲ ಪ್ರಚಾರಕ್ಕೆ ಸಿದ್ಧರಾಗಿದ್ದಾರೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಕೊಲೆ ಮಾಡಿ, ಹೆಣವನ್ನು ಸುಟ್ಟು ಹಾಕಿಬಿಡುತ್ತಾರೆ. ಹೂಳುವುದಕ್ಕೂ ಅವಕಾಶ ಕೊಡುವುದಿಲ್ಲ. ಇವರಿಗೆ ಕೊಲೆ ಮಾಡುವುದಕ್ಕೆ ಅಧಿಕಾರವಿದೆ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅಧಿಕಾರ ಇಲ್ಲವೇ?

**(ಗೊಂದಲ)**

**ಸಭಾಪತಿಯವರು:–** ಎಲ್ಲರೂ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಕೊಲೆಗಡುಕ ಮಂತ್ರಿಯ ಹೆಸರು ಹೊರಗೆ ಬರುತ್ತದೆ ಎನ್ನುವ ಕಾರಣದ ಹಿನ್ನೆಲೆಯಲ್ಲಿ ಅದನ್ನು ಮುಚ್ಚಿ ಹಾಕುವ ಪ್ರಯತ್ನ ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಅವರು ಈ ರೀತಿ ಮಾತನಾಡುತ್ತಿದ್ದರೆ, ನಾವು ಈಗ ಬೇರೇ ಮಾತನಾಡಬೇಕಾಗುತ್ತದೆ.

**ಶ್ರೀ ಕೃಷ್ಣಭೈರೇಗೌಡಃ–** ಸನ್ಮಾನ್ಯ ಸಭಾಪತಿಯವರೇ, ಇವರುಗಳು ಸದನದ ಸಮಯವನ್ನು ಹಾಳು ಮಾಡುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೆ. ಅಭಯಚಂದ್ರ (ಯುವಜನಸೇವೆ ಮತ್ತು ಮೀನುಗಾರಿಕೆ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ಭ್ರಷ್ಟ ಬಿ.ಜೆ.ಪಿ.ಯವರಿಗೆ, ರೈತ ವಿರೋಧಿಗಳಿಗೆ, ಡೋಂಗಿ ಮೋದಿಯವರಿಗೆ ಧಿಕ್ಕಾರ.

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರು ಸದನದ ಬಾವಿಯೊಳಗೆ ಧರಣಿ ಕುಳಿತರು)**

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಇದೊಂದು ದುರಂತ ತಾವು ಕೊಟ್ಟಂಥ ನಿರ್ಣಯವನ್ನು ಧಿಕ್ಕರಿಸಿ ಇವರು ಸದನದ ಬಾವಿಗೆ ಬರುವುದು, ಬಹುಶಃ ವಿಧಾನ ಪರಿಷತ್ತಿನ ನೂರು ವರ್ಷಗಳ ಇತಿಹಾಸದಲ್ಲಿ ಹೊಸದಾಗಿದೆ. They are disobeying the orders issued by the Chair……

**(ಗೊಂದಲ)**

**ಶ್ರೀ ಐವನ್ ಡಿ'ಸೋಜಾಃ–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಆದೇಶವನ್ನು ವಿರೋಧಿಸಿ ಅವರುಗಳು ಸದನದ ಬಾವಿಗೆ ಬಂದಿದ್ದಾರೆ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್ಃ–** ಸನ್ಮಾನ್ಯ ಸಭಾಪತಿಯವರೇ, ತಮ್ಮ ಮಾತನ್ನು ಧಿಕ್ಕರಿಸಿ ಯಾವುದೇ ಪಕ್ಷದವರಾಗಿರಲಿ, ಯಾರೇ ಸದಸ್ಯರಾಗಿರಲಿ, ತಮ್ಮ ವಿರುದ್ಧವಾಗಿ ನಡೆದುಕೊಂಡರೇ, ಮಾರ್ಷಲ್‌ಗಳನ್ನು ಕರೆಯಿಸಿ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕು ಆ ರೀತಿಯ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ದಯವಿಟ್ಟು ತಾವು ಈಗ ಮಾರ್ಷಲ್ ಅವರನ್ನು ಕರೆಯಿಸಿ, ಇದು ತಮ್ಮ ಪೀಠಕ್ಕೆ ತೋರಿಸುತ್ತಿರುವ ಅಗೌರವ ಮತ್ತು ತಮ್ಮ ಪೀಠದ ಮೇಲೆ ಹೇರುತ್ತಿರುವ ಒತ್ತಡವಾಗಿದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ತಾವು ಕೊಟ್ಟಂಥ ನಿರ್ಣಯವನ್ನು ಧಿಕ್ಕರಿಸಿ ತಮಗೆ ಮತ್ತು ಪೀಠಕ್ಕೆ ಅಗೌರವವನ್ನು ತೋರಿಸಿ ಸದನದ ಬಾವಿಯೊಳಗೆ ಧರಣಿ ಕೂರುವುದೆಂದರೇ ಏನರ್ಥ? ನನ್ನ 18 ವರ್ಷಗಳ ಅನುಭವದಲ್ಲಿ ಇಂತಹ ಘಟನೆಯನ್ನು ಮೊದಲನೆಯ ಬಾರಿ ನೋಡುತ್ತಿದ್ದೇನೆ. ಪೀಠದ ಬಗ್ಗೆ ನಮಗೆ ಅಪಾರವಾಗಿರುವ ಗೌರವವಿದೆ.

**(ಗೊಂದಲ)**

**ಸಭಾಪತಿಯವರುಃ–** ದಯಮಾಡಿ ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ತೀರ್ಮಾನವಾದ ಮೇಲೆ ಇವತ್ತು ಒಬ್ಬ ಮಂತ್ರಿಯನ್ನು... ಒಬ್ಬ ಕೊಲೆಗಡುಕ ಮಂತ್ರಿಯನ್ನು ರಕ್ಷಣೆ ಮಾಡುವ ಪ್ರಯತ್ನ ನಡೆಯುತ್ತಿದೆ. ಕೊಲೆಯಾಗಿ 5 ತಿಂಗಳಾದರೂ ಆ ಕೊಲೆಗಡುಕನನ್ನು ಅರೆಸ್ಟ್ ಮಾಡುವುದಿಲ್ಲ. ಪ್ರಕರಣವನ್ನು ಮುಚ್ಚಿ ಹಾಕುತ್ತಾರೆ. ಇವತ್ತು ಅದರ ಬಗ್ಗೆ ಚರ್ಚೆ ಮಾಡುತ್ತೇವೆ ಎಂದರೆ, . . . . .

**ಶ್ರೀ ಎಸ್.ಆರ್. ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಈ ರಾಜ್ಯದ ಜನರು ಇವರಿಗೆ ಮುಖಕ್ಕೆ ಮಂಗಳಾರತಿ ಮಾಡುತ್ತಾರೆ. ಇದು ಸರ್ಕಾರದ ವಿರುದ್ಧವಲ್ಲ, ಪೀಠದ ವಿರುದ್ಧ ಮಾತನಾಡುವಂತಹ ಮಾತುಗಳಾಗಿವೆ. ಇವರುಗಳು ಪೀಠದ ಆದೇಶವನ್ನು ಧಿಕ್ಕರಿಸಿದರೆ ಈ ಸದನ ನಡೆಸಿಕೊಂಡು ಹೋಗುವುದು ಬಹಳ ಕಷ್ಟ.

**(ಗೊಂದಲ)**

**ಸಭಾಪತಿಯವರುಃ–** ದಯಮಾಡಿ ಸದನ ನಡೆಸುವುದಕ್ಕೆ ಒಳ್ಳೆಯ ವಾತಾವರಣ ನಿರ್ಮಾಣವಾಗಬೇಕು. ತಾವೆಲ್ಲರೂ ಕುಳಿತುಕೊಳ್ಳಿ, ಬಾವಿಯಲ್ಲಿರುವ ಗೌರವಾನ್ವಿತ ಸದಸ್ಯರುಗಳು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ, ನಾನು ಸದನ ನಡೆಸುವುದಕ್ಕೆ ಉತ್ತಮ ವಾತಾವರಣವನ್ನು ನಿರ್ಮಾಣ ಮಾಡಿಕೊಡಿ. ಧರಣಿ ನಿರತರೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿ ಸದನ ನಡೆಸುವುದಕ್ಕೆ ಅವಕಾಶ ಮಾಡಿಕೊಡಿ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ಕೊಲೆ ದರೋಡೆ, ದಗಲ್ಬಾಜಿ ದೌರ್ಜನ್ಯ, ದಬ್ಬಾಳಿಕೆ ಈ ಎಲ್ಲ ಪದಗಳು ಅವರಿಗೇ ಅರ್ಥವಾಗುವುದು. ಲೂಟಿ ಮಾಡುವುದು ಭ್ರಷ್ಟಾಚಾರ ಮಾಡುವುದು. . . . . .

**(ಸದನದ ಬಾವಿಯೊಳಗೆ ಧರಣಿ ನಿರತ ಬಿ.ಜೆ.ಪಿ. ಸದಸ್ಯರು 'ಕೊಲೆಭಾಗ್ಯ' ಸರ್ಕಾರಕ್ಕೆ ಧಿಕ್ಕಾರ ಎಂದು ಘೋಷಣೆಯನ್ನು ಕೂಗಿದರು.)**

**ಶ್ರೀ ಆರ್.ವಿ. ವೆಂಕಟೇಶ್ಃ–** ಸನ್ಮಾನ್ಯ ಸಭಾಪತಿಯವರೇ, ಸದನದ ಬಾವಿಯೊಳಗೆ ನಿಂತುಕೊಂಡು ಈ ರೀತಿ ಕೂಗುವುದು ಸರಿಯಲ್ಲ. ನಮಗೂ ಕೂಗುವುದಕ್ಕೆ ಚೆನ್ನಾಗಿ ಬರುತ್ತದೆ.

**ಶ್ರೀ ಎಂ.ಬಿ. ಪಾಟೀಲ್ (ಭಾರೀ ಮತ್ತು ಮಧ್ಯಮ ನೀರಾವರಿ ಸಚಿವರು)ಃ–** ಸನ್ಮಾನ್ಯ ಸಭಾಪತಿಯವರೇ, ಪ್ರಶ್ನೋತ್ತರ ವೇಳೆಯಾದ ನಂತರ ಆ ವಿಚಾರವನ್ನು ಪ್ರಸ್ತಾಪ ಮಾಡುವಂತೆ ತಾವು ನಿರ್ಣಯ ಕೊಟ್ಟಿದ್ದೀರಿ. ತಮ್ಮ ಆದೇಶವಾದ ನಂತರವೂ ಇವರುಗಳು ಸದನದ ಬಾವಿಯೊಳಗೆ ಬರುವುದು ಸರಿಯಲ್ಲ. ಈ ರೀತಿಯ ವರ್ತನೆ ತಮಗೆ ಅಗೌರವ ತೋರಿಸಿದಂತಾಗುತ್ತದೆ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್ಃ–** ಸನ್ಮಾನ್ಯ ಸಭಾಪತಿಯವರೇ, ನಾನು ಈ ಸದನ ಪ್ರವೇಶ ಮಾಡಿ 17 ವರ್ಷಕ್ಕಿಂತ ಹೆಚ್ಚಾಗಿದೆ. ಪೀಠದ ಆದೇಶವನ್ನು ಉಲ್ಲಂಘನೆ ಮಾಡಿ ಧರಣಿ ಮಾಡಿರುವುದು ಈ ಸದನದ ಇತಿಹಾಸದಲ್ಲಿ ಕಪ್ಪು ಚುಕ್ಕಿಯಾಗಿದೆ. ಅದಕ್ಕೆ ಇವರೇ ಭಾಜನರಾಗಿದ್ದಾರೆ. ಭಾರತೀಯ ಜನತಾ ಪಕ್ಷದ ನಾಯಕರಾದಿಯಾಗಿ ಆ ಪಕ್ಷದ ಸದಸ್ಯರು ಪೀಠದ ನಿರ್ಣಯವನ್ನು ಧಿಕ್ಕರಿಸಿ, ಪೀಠದ ವಿರುದ್ಧ ಸದನದ ಬಾವಿಗಿಳಿಯುವುದು ಕಪ್ಪುಚುಕ್ಕೆಯಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಈ ರೀತಿ ಆದೇಶ ಉಲ್ಲಂಘನೆ ಮಾಡಿ ಪೀಠಕ್ಕೆ ಅಗೌರವ ತೋರಿಸಿ ಬಾವಿಯೊಳಗೆ ಇಳಿದಿರುವುದು 'ನ ಭೂತೋ ನ ಭವಿಷ್ಯತಿ' ಇವರನ್ನು ತಾವು ಸರಿಯಾಗಿ ನಿಯಂತ್ರಣ ಮಾಡಬೇಕಾಗಿದೆ. ತಾವು ಕೊಟ್ಟಿರುವ ಆದೇಶ ಅಚಲವಾಗಿ ಕಾರ್ಯರೂಪಕ್ಕೆ ತರಬೇಕಾಗಿದೆ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪಃ–** ಸನ್ಮಾನ್ಯ ಸಭಾಪತಿಯವರೇ, ನಾವು ತಮ್ಮ ಆದೇಶಕ್ಕೆ ವಿರುದ್ಧವಾಗಿಲ್ಲ. ಮಾನ್ಯ ಮುಖ್ಯಮಂತ್ರಿಗಳ ಉಪಸ್ಥಿತಿಯಲ್ಲಿನ ಸಭೆಯಲ್ಲಿ ತೀರ್ಮಾನವಾದ ನಂತರ ಆ ದಿನದಿಂದ ಇಲ್ಲಿಯವರೆಗೆ ನಿಲುವಳಿ ಸೂಚನೆಗೆ ಮೊದಲು ಅವಕಾಶ, ಅನಂತರ ಪ್ರಶ್ನೋತ್ತರ ಎನ್ನುವುದು ನಡೆದುಕೊಂಡು ಬಂದಿದೆ. ಅದನ್ನು ತಿರುಚುವ ಪ್ರಯತ್ನ ಮಾಡುತ್ತಿದ್ದಾರೆ. ಆ ಮೂಲಕ ಕೊಲೆಗಡುಕ ಶಿವರಾಜ್ ತಂಗಡಗಿಯನ್ನು ರಕ್ಷಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿದೆ. ಇಡೀ ರಾಜ್ಯಕ್ಕೆ ಯಾರು ಕೊಲೆ ಮಾಡಿದರು ಎನ್ನುವುದು ಬಹಿರಂಗವಾಗುವುದನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತಿದೆ. ಈ ಸರ್ಕಾರ ಕೊಲೆಗಾರ ಹನುಮೇಶ್ ನಾಯ್ಕ್‌ನನ್ನು 5 ತಿಂಗಳು ಆದರೂ ಹಿಡಿಯಲಿಲ್ಲ. ಪ್ರಗತಿಪರ ಸಂಘಟನೆಗಳು ಮತ್ತು ಎಲ್ಲ ಪಕ್ಷಗಳು ಹೋರಾಟ ಮಾಡಿದ ಮೇಲೆ ಆತನನ್ನುಅರೆಸ್ಟ್ ಮಾಡುತ್ತಾರೆ.

**(ಗೊಂದಲ)**

**ಸಭಾಪತಿಯವರುಃ–** ಎಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಮರಳಿ. ದಯಮಾಡಿ ಕುಳಿತುಕೊಳ್ಳಿ.

(ಗೊಂದಲ)

**ಶ್ರೀ ಆರ್.ವಿ. ವೆಂಕಟೇಶ್ಃ–** ಸನ್ಮಾನ್ಯ ಸಭಾಪತಿಯವರೇ, ಇಂತಹ ಘಟನೆ ಸಂಸದೀಯ ಇತಿಹಾಸದಲ್ಲಿಯೇ ನಡೆದಿಲ್ಲ. ಇದೊಂದು ಸಂಸದೀಯ ಇತಿಹಾಸಕ್ಕೆ ಕಪ್ಪುಚುಕ್ಕೆಯಾಗಿದೆ.

**(ಗೊಂದಲ)**

**Sri S.R. PATIL:-**They are disobeying the orders of the Chair. ಪೀಠಕೊಟ್ಟಿರುವ ನಿರ್ಣಯವನ್ನು ಧಿಕ್ಕರಿಸಿ, ಧರಣಿ ಮಾಡಿರುವುದು ನೂರು ವರ್ಷಗಳ ಇತಿಹಾಸದಲ್ಲಿ ಇದೇ ಮೊದಲು. ಇದು ನಿಜವಾಗಿಯೂ ನಾಚಿಕೆಗೇಡಿನ ವಿಚಾರವಾಗಿದೆ. ಇವರುಗಳು ಈ ಸದನದ ಪಾವಿತ್ರ್ಯವನ್ನು ಹಾಳು ಮಾಡಿದರು. ಈ ಪೀಠಕ್ಕೆ ಅಗೌರವ ತೋರಿಸಿದರು, ಪೀಠ ಕೊಟ್ಟ ನಿರ್ಣಯವನ್ನು ಧಿಕ್ಕರಿಸಿ ಬಾವಿಯೊಳಗೆ ಧರಣಿ ಮಾಡಿದ್ದಾರೆ. ಇಂತಹ ವ್ಯವಸ್ಥೆಯನ್ನು ನಾನೆಂದೂ ನೋಡಿಲ್ಲ.

**(ಗೊಂದಲ)**

**ಸಭಾಪತಿಯವರುಃ–** ಈಗ ಸದನವನ್ನು 12 ಗಂಟೆ 15 ನಿಮಿಷಗಳವರೆಗೆ ಮುಂದೂಡಲಾಗಿದೆ.

**(11–57 ಗಂಟೆಗೆ ಮುಂದೂಡಲ್ಪಟ್ಟ ಸದನವು ಭೋಜನ ವಿರಾಮದ ನಂತರ ಪುನಃ ಮಧ್ಯಾಹ್ನ 2 ಗಂಟೆ 02 ನಿಮಿಷಗಳಿಗೆ ಸಮಾವೇಶಗೊಂಡಿತು. ಸಭಾಪತಿಗಳಾದ ಶ್ರೀ ಡಿ.ಹೆಚ್. ಶಂಕರಮೂರ್ತಿಯವರು ಸಭಾ ಪೀಠವನ್ನು ಅಲಂಕರಿಸಿದರು)**

**(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಎಲ್ಲ ಸದಸ್ಯರು ಸದನದ ಬಾವಿಯೊಳಗೆ ಧರಣಿ ಮುಂದುವರಿಸಿದ್ದರು)**

**ಸಭಾಪತಿಯವರುಃ–** ಬೆಳಿಗ್ಗೆ ಸದನದಲ್ಲಿ ಒಂದು ರೀತಿಯ ವಾತಾವರಣ ನಿರ್ಮಾಣವಾದ ಹಿನ್ನೆಲೆಯಲ್ಲಿ ಸಭೆಯನ್ನು ಸ್ವಲ್ಪ ಕಾಲ ಮುಂದಕ್ಕೆ ಹಾಕಿದ್ದು ತಮ್ಮೆಲ್ಲರಿಗೂ ಗೊತ್ತಿದೆ. ಆ ಹಿನ್ನೆಲೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸಭಾ ನಾಯಕರು, ಆಡಳಿತ ಪಕ್ಷದ ಮುಖ್ಯ ಸಚೇತಕರನ್ನು ಮತ್ತು ವಿರೋಧ ಪಕ್ಷದ ಮುಖ್ಯ ಸಚೇತಕರನ್ನು ಸೇರಿಸಿ ದೀರ್ಘವಾದ ಚರ್ಚೆ ಮಾಡಿ ಒಂದೆರಡು ತೀರ್ಮಾನಗಳನ್ನು ಮಾಡಿದ್ದೇವೆ. ಆ ತೀರ್ಮಾನಗಳನ್ನು ಸಭೆಯ ಗಮನಕ್ಕೆ ತರಲು ಇಷ್ಟಪಡುತ್ತಿದ್ದೇನೆ. ಮೊದಲನೆಯದಾಗಿ ಇವತ್ತು ಬುಧವಾರ ಸಮಯ ಈಗಾಗಲೇ 2 ಗಂಟೆಯಾಗಿದೆ. ಕೆಲವು ತಾಂತ್ರಿಕ ಮತ್ತು ಪ್ರಾಯೋಗಿಕ ಕಾರಣಗಳ ಹಿನ್ನೆಲೆಯಲ್ಲಿ ಇವತ್ತಿನ ಪ್ರಶ್ನೋತ್ತರ ಅವಧಿಯಲ್ಲಿ ಪಟ್ಟಿಯಾಗಿರುವ 15 ಪ್ರಶ್ನೆಗಳನ್ನು ಮುಂದಿನ ಬುಧವಾರದಂದು ಆ ದಿನದ ಪ್ರಶ್ನೆಗಳ ಜೊತೆಗೆ ಇವತ್ತಿನ ಚುಕ್ಕೆ ಗುರುತಿನ ಪ್ರಶ್ನೆಗಳನ್ನು ತಡೆಹಿಡಿಯಲಾದ ಪ್ರಶ್ನೆಗಳ ರೂಪದಲ್ಲಿ ತೆಗೆದುಕೊಳ್ಳುವ ತೀರ್ಮಾನವಾಗಿದೆ.

ಇನ್ನು ಎರಡನೆಯದಾಗಿ, ಈ ದಿನ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆ ಇರುವುದರಿಂದ ಅದು ಮುಗಿದ ನಂತರ ನನಗೆ ಬಂದಿರುವ ಎರಡು ನಿಲುವಳಿ ಸೂಚನೆಯ ನೋಟಿಸ್‌ಗಳಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಕೊಟ್ಟಿರುವ ವಿಚಾರವನ್ನು ತೆಗೆದುಕೊಳ್ಳಲಾಗುವುದು ಎಂದು ನಾನು ಹೇಳಿದ್ದೆ. ಅದಕ್ಕೆ ಪೂರ್ವಭಾವಿ ಪ್ರಸ್ತಾವಕ್ಕೆ ಮೊದಲು ಸ್ವಲ್ಪ ಕಾಲ ಅವಕಾಶವನ್ನು ಕೊಟ್ಟು, ನಂತರ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಲಾಗುತ್ತದೆ.

ಈ ಎರಡು ನಿರ್ಣಯಗಳನ್ನು ನಾವೆಲ್ಲರೂ ಸೇರಿ ಮಾಡಿದ್ದೇವೆ ಎನ್ನುವ ಅಂಶವನ್ನು ಸಭೆಯ ಗಮನಕ್ಕೆ ತರಲು ಬಯಸುತ್ತಿದ್ದೇನೆ. ಈಗ ಸಭೆಯನ್ನು 3 ಗಂಟೆ 30 ನಿಮಿಷಗಳವರೆಗೆ ಮುಂದೂಡಲಾಗುತ್ತಿದೆ.

(2 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟ ಸದನವು ಪುನಃ 3 ಗಂಟೆ 50 ನಿಮಿಷಕ್ಕೆ **ಸಮಾವೇಶಗೊಂಡಿತು)**

**(ಮಾನ್ಯ ಸಭಾಪತಿಯವರು ಪೀಠವನ್ನಲಂಕರಿಸಿದರು)**

**ಸಭಾಪತಿಯವರು:–** ನಿಯಮ 59ರ ಅಡಿಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಕೆಲವು ಗೌರವಾನ್ವಿತ ಸದಸ್ಯರು ಸಹಿ ಮಾಡಿ ನಾವು ಪ್ರಸ್ತಾಪ ಮಾಡುತ್ತೇವೆ ನಮಗೆ ಅವಕಾಶ ಕೊಡಿ ಎಂದು ಕೊಟ್ಟಿರುವಂಥ ವಿಷಯದ ಬಗ್ಗೆ Preliminary Submission ಮಾಡುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರುಅಥವಾ ಸಹಿ ಮಾಡಿರತಕ್ಕಂಥ ಸದಸ್ಯರಿಗೆ ಅವಕಾಶ ಕೊಡುತ್ತೇನೆ. ಆದರೆ ಸದನದ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ನಿಲುವಳಿ ಸೂಚನೆಯನ್ನು ಯಾರು ಕೊಟ್ಟಿದ್ದಾರೆ, Preliminary Submission ಗೆ ಅವಕಾಶ ಕೊಟ್ಟಾಗ, ಆ Preliminary Submission ಮಾಡುವುದಕ್ಕೆ ಒಬ್ಬರು ಮಾತನಾಡಬಹುದು, ಇಬ್ಬರು ಮಾತನಾಡಬಹುದು, ಸಹಿ ಮಾಡಿರುವವರು ಎಷ್ಟು ಜನ ಬೇಕಾದರೂ ಮಾತನಾಡಬಹುದು. ಆದರೆ ನಾನು ಹತ್ತು ನಿಮಿಷಕ್ಕಿಂತ ಜಾಸ್ತಿ ಅವಕಾಶ ಕೊಡುವುದಿಲ್ಲ. ಹತ್ತು ನಿಮಿಷ ದಾಟಿದರೆ ಅದನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಹತ್ತು ನಿಮಿಷದೊಳಗೆ ಅವರು ಮುಗಿಸಬೇಕು. ಒಬ್ಬರು ಮಾತನಾಡಬಹುದು, ಇಬ್ಬರು ಹಂಚಿಕೊಳ್ಳಬಹುದು, ಮೂರುಜನ ಹಂಚಿಕೊಳ್ಳಬಹುದು. ಒಟ್ಟು ಹತ್ತು ನಿಮಿಷ ಮಾತ್ರ ಅವಕಾಶ ಇರುತ್ತದೆ. Preliminary Submission ಮಾಡುವವರು ವಿಷಯದ ಆಳಕ್ಕೆ ಹೋಗದೆ ವಿಷಯದ ಮಹತ್ವದ ಬಗ್ಗೆ ಮಾತ್ರ ಮಾತನಾಡಬೇಕು. ವಿಷಯವನ್ನೇ ಪ್ರಸ್ತಾಪ ಮಾಡುವ ಬದಲು ಆ ವಿಷಯದ ಮಹತ್ವವನ್ನು ಹೇಳುವುದಕ್ಕೆ ಪ್ರಯತ್ನ ಮಾಡಬೇಕು.

**Sri S.R. PATIL:** Tenability ಬಗ್ಗೆ ಮತ್ತು why it should be taken up ಎಂದು ಹೇಳಬೇಕು.

**ಸಭಾಪತಿಯವರು:–** ಇದನ್ನು ಏಕೆ ಒಪ್ಪಿಕೊಳ್ಳಬೇಕು ಅಷ್ಟರ ಬಗ್ಗೆ ಸೀಮಿತಗೊಳಿಸಬೇಕು. ವಿಷಯದ ಆಳಕ್ಕೆ ಹೋದರೆ ಚರ್ಚೆಗೆ ಇನ್ನೇನು ಉಳಿಯುವುದಿಲ್ಲ. ಹತ್ತು ನಿಮಿಷ ಮಾತನಾಡಲೇಬೇಕು ಎಂದಿಲ್ಲ, ಎರಡು ನಿಮಿಷದಲ್ಲೇ ಮಾತನಾಡಬಹುದು. ಅದಕ್ಕೆ ಸ್ಪಂದಿಸುವುದಕ್ಕೆ ನಾನು ಸರ್ಕಾರಕ್ಕೆ ಅವಕಾಶ ಕೊಡಲೇಬೇಕು. ಸರ್ಕಾರ ಕೂಡ ಹತ್ತು ನಿಮಿಷದಲ್ಲಿ ಉತ್ತರ ಕೊಟ್ಟು ಮುಗಿಸಬೇಕು. ಅದಾದ ಮೇಲೆ ಮುಂದೇನು ಮಾಡಬೇಕೆಂದು ಸಭಾ ಪೀಠದಲ್ಲಿ ಯಾರು ಕುಳಿತಿರುತ್ತಾರೆ ಅವರು ನಿರ್ಣಯ ಏನು ಕೊಡುತ್ತಾರೆ ಆ ನಿರ್ಣಯದ ಮೇಲೆ ವಿಷಯ ಮುಂದಕ್ಕೆ ಹೋಗುತ್ತದೆ. ಈಗ ಮಾನ್ಯ ಸೋಮಣ್ಣ ಬೇವಿನಮರದ ಅವರು ಮಾತನಾಡುತ್ತಾರೆ. ಇದನ್ನು ಗಮನದಲ್ಲಿಟ್ಟುಕೊಂಡು ತಾವೇ ಗಡಿಯಾರದ ಕಡೆ ನೋಡಿಕೊಂಡು why it should be taken ಎನ್ನುವುದರ ಬಗ್ಗೆ ಮಾತನಾಡಬೇಕೆ ಹೊರತು ವಿಷಯವನ್ನೇ ಮಾತನಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ.

**2) ನಿಯಮ 59ರ ಮೇರೆಗೆ ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿ ಚರ್ಚೆ.**

**ವಿಷಯ: ಕೊಪ್ಪಳ ಜಿಲ್ಲೆಯ ಕನಕಪುರ ಗ್ರಾಮದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಯಲ್ಲಾಲಿಂಗ ಎನ್ನುವ ಯುವಕನ ಹತ್ಯೆಯ ಬಗ್ಗೆ**

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೇ, ಕೊಪ್ಪಳ ಜಿಲ್ಲೆಯ ಕನಕಗಿರಿ ವಿಧಾನಸಭಾ ಕ್ಷೇತ್ರದ ಕನಕಪುರ ಗ್ರಾಮದಲ್ಲಿ ನಡೆದಂಥಒಬ್ಬ ಹಿಂದುಳಿದ ವರ್ಗದ ಸಮುದಾಯಕ್ಕೆ ಸೇರಿದ ಅದು ಗದಗದಲ್ಲಿ ಪಂಡಿತ್ ಪುಟ್ಟರಾಜು ಗವಾಯಿಗಳ ಕಾಲೇಜಿನಲ್ಲಿ 2ನೇ ಪಿ.ಯು.ಸಿ. ಅಭ್ಯಾಸ ಮಾಡುತ್ತಿದ್ದ ಯಲ್ಲಾಲಿಂಗ ತಂದೆ ಬುಡ್ಡಪ್ಪ ಅಗಸಿಮನಿ ಎಂಬುವವನ ಭೀಕರ ಕೊಲೆಯ ಬಗ್ಗೆ ಇಡೀ ಕರ್ನಾಟಕ ರಾಜ್ಯ ಇವತ್ತು ನಮ್ಮ ಕಡೆ ನೋಡುತ್ತಿದೆ. ಕೊಪ್ಪಳ ಜಿಲ್ಲೆ ಕನಕಗಿರಿಯ ಕನಕಪುರ ಗ್ರಾಮದಲ್ಲಿ ಆ ಒಬ್ಬ ಯುವಕ ಈ ರಾಜ್ಯ ಸರ್ಕಾರ ಬಡವರಿಗೆ, ನಿರ್ಗತಿಕರಿಗೆ, ಯಾವ ಅನುದಾನವನ್ನು ಕಳುಹಿಸಿತ್ತು ಹಳ್ಳಿಯನ್ನು ಅಭಿವೃದ್ಧಿ ಮಾಡಬೇಕೆಂದು ಆ ಅಭಿವೃದ್ಧಿ ಸರಿಯಾದ ಮಟ್ಟದಲ್ಲಿ ಆಗುತ್ತಿಲ್ಲ ಎನ್ನುವುದರ ಬಗ್ಗೆ ಚರ್ಚೆ ಊರಲ್ಲಿ ಪ್ರಾರಂಭವಾದಾಗ ಈ ಯುವಕ ಅವನ ಊರಿಗೆ ಜಾತ್ರೆಗೆ ಬಂದಿದ್ದಾನೆ. ಆ ಶಾಲೆಯಿಂದ ಜಾತ್ರೆಗೆ ಬಂದಾಗ ಅಲ್ಲಿ ತನ್ನೆಲ್ಲಾ ಸ್ನೇಹಿತರು ಮತ್ತು ಹಿರಿಯರು ಮಾತನಾಡುವುದನ್ನು ಕೇಳಿ ಅವನು 6ನೇ ತಾರೀಖಿಗೆ ಒಂದು ಸುದ್ದಿವಾಹಿನಿಗೆ ಸರ್ಕಾರದ ಅನುದಾನ ಬಂದು ಏನು ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿತ್ತು ಅದು ಆಗಿಲ್ಲ. ಇಲ್ಲಿ ಎಲ್ಲೋ ಒಂದು ಕಡೆ ಈ ಅನುದಾನ ದುರ್ಬಳಕೆ ಆಗಿದೆ ಎನ್ನುವ ನಿಟ್ಟಿನಲ್ಲಿ ಆ ಯುವಕ ಒಂದು ವಿಷಯವನ್ನು ಸುದ್ದಿವಾಹಿನಿಗೆ ಕೊಟ್ಟ. 6ನೇ ತಾರೀಖಿಗೆ ಕೊಟ್ಟಾಗ ಅದು 7 ಮತ್ತು 8ನೇ ತಾರೀಖಿಗೆ ಆ ಸುದ್ದಿವಾಹಿನಿಯಲ್ಲಿ ಈ ರೀತಿಯಾಗಿದೆ ಎನ್ನುವುದು ಪ್ರಸಾರವಾದಾಗ ಅಲ್ಲಿ ಕೆಲಸಕಾರ್ಯಗಳನ್ನು ಮಾಡಿದ್ದಂಥವರು ಆ ಯುವಕ ಯಾವ ಊರಿನವನು, ಎಲ್ಲಿನವನು, ಅವನಿಗೆ ಈ ರೀತಿಯ ಎಲ್ಲಾ ವಿಷಯಗಳು ಹೇಗೆ ಗೊತ್ತಾಯಿತು ಎಂದು ಅವನನ್ನು ಜನವರಿ 9ನೇ ತಾರೀಖಿನಂದು ಹುಡುಕುತ್ತಾರೆ. ಆ ಒಬ್ಬ ಯುವಕ ವಾಕ್ ಸ್ವಾತಂತ್ರ್ಯದಿಂದ ಎಲ್ಲೋ ಒಂದು ಕಡೆ ಒಳ್ಳೆಯದಾಗಲಿ ನಮ್ಮೂರಿಗೆ ಒಳ್ಳೆಯ ಕೆಲಸ ಕಾರ್ಯಗಳು ಆಗಲಿ ಎಂದು ತನ್ನ ಮನಸ್ಸಿನಲ್ಲಿದ್ದ ವಿಚಾರಗಳನ್ನು ಸಂದರ್ಶನದಲ್ಲಿ ಹೇಳಿದಾಗ ದುಷ್ಕರ್ಮಿಗಳು ಅಂದರೆ ಭ್ರಷ್ಟಚಾರವನ್ನು ಎಸಗಿದಂಥವರು ಅವನನ್ನು ಎರಡು ದಿವಸಗಳ ಕಾಲ ಹುಡುಕುತ್ತಾರೆ. ಅವನನ್ನು 9ನೇ ತಾರೀಖಿಗೆ ನೋಡಿದಾಗ 10ನೇ ತಾರೀಖು ಬೆಳಿಗ್ಗೆ ಅವನು ಕಾಲೇಜಿಗೆ ಹೋಗುತ್ತಾನೆ, ಬಸ್ಸಿನಲ್ಲಿ ತನ್ನ ಊರಿನಿಂದ ಗದಗ್‌ಗೆ ಕಾಲೇಜಿಗೆ ಹೋಗುವಾಗ ಅವನನ್ನು ಈ ದುಷ್ಕರ್ಮಿಗಳು ಮೂರು ಮೋಟಾರ್ ಸೈಕಲ್ ಮೇಲೆ ಆರು ಜನ ಕುಳಿತುಕೊಂಡು ಬೆನ್ನತ್ತುತ್ತಾರೆ. ಬೆನ್ನತ್ತಿದ್ದಾಗ ಅವನು ನೋಡುತ್ತಿದ್ದಾನೆ, ಅವರು ಹಿಂದಿನ ದಿವಸ ಅವನ ಹತ್ತಿರ ಮಾತನಾಡಿ ಹೆದರಿಸಿ

ಬೆದರಿಸಿರುವುದನ್ನು ನೋಡಿದರೆ ನನಗೆ ಎಲ್ಲೋ ಒಂದು ಕಡೆ ಏನೋ ಮಾಡುವುದಕ್ಕೆ ಬಂದಿದ್ದಾರೆ ಎಂದು ತಿಳಿದುಕೊಂಡು ಮುಂದೆ ಅವನು ಒಂದು ಊರಿಗೆ ಇಳಿದು ಮತ್ತೆ ರೈಲ್ವೆ ಸ್ಟೇಷನ್‌ಗೆ ಓಡಿ ಹೋಗುತ್ತಾನೆ. ಅಲ್ಲಿಂದ ರೈಲು ಹತ್ತಿ ಕೊಪ್ಪಳಕ್ಕೆ ಬರುವಾಗ ರೈಲು ಹೋಗುತ್ತಿರುತ್ತದೆ. ಅವನು ಅವರನ್ನೆಲ್ಲಾ ಕಣ್ಣಾರೆ ನೋಡುತ್ತಿರುತ್ತಾನೆ. ತನ್ನ ಮೊಬೈಲ್‌ನಲ್ಲಿ ಆತ ಅವರ ಚಿತ್ರಣವನ್ನು ತೆಗೆದಿದ್ದಾನೆ. ಅವರು ಮೂರು ಜನ ಬರುವುದನ್ನು ನೋಡುತ್ತಿದ್ದಾನೆ. ಕೊಪ್ಪಳದಲ್ಲಿ ಇಳಿದು ಅವನು ಇನ್ನೇನು ಹೊರಗೆ ಬರಬೇಕು ಎನ್ನುವಷ್ಟರಲ್ಲಿ ಮೂರು ಮೋಟಾರ್ ಸೈಕಲ್‌ನಲ್ಲಿ ಬಂದಂತಹ ಆರು ಜನ ದುಷ್ಕರ್ಮಿಗಳು ಅವನನ್ನು ಹಿಡಿಯುತ್ತಾರೆ. ಹಿಡಿದು ನಿನಗೇನಾದರೂ ಜೀವ ಇರಬೇಕು ಎನ್ನುವಾಗಿದ್ದರೆ ನೀನು ಹೊರಗೆ ಬಾ ಎಂದು ಎಳೆದುಕೊಂಡು ಬಂದು ಹೊಡೆಯುತ್ತಿದ್ದಾರೆ. ಅವನನ್ನು ರೈಲ್ವೆ ಸ್ಟೇಷನ್‌ನಲ್ಲಿ ಹೊಡೆದು ರೈಲ್ವೆ ಟ್ರ್ಯಾಕ್‌ಗೆ ಹಾಕಿದರು. ಸಂಪೂರ್ಣವಾಗಿ ಅವನು 10ನೇ ತಾರೀಖಿಗೆ ಕೊಲೆಯಾಗಿ ತೀರಿಕೊಳ್ಳುತ್ತಾನೆ. 10ನೇ ತಾರೀಖಿಗೆ ಯಲ್ಲಾಲಿಂಗ ಕೊಲೆಯಾಗಿ 11ನೇ ತಾರೀಖಿಗೆ ಕೊಪ್ಪಳದ ರೈಲ್ವೆ ನಿಲ್ದಾಣದ ಅಧಿಕಾರಿಗಳು ಅದನ್ನು ವಿಚಾರಣೆಗೆ ತೆಗೆದುಕೊಂಡರು. ಕೊಪ್ಪಳದ ರೈಲ್ವೆ ನಿಲ್ದಾಣದ ಅಧಿಕಾರಿಗಳು ಅದನ್ನು ವಿಚಾರಣೆಗೆ ತೆಗೆದುಕೊಂಡಾಗ ಗದಗ್ ರೈಲ್ವೆ ಪೊಲೀಸ್‌ರಿಂದ ಅದು ಆತ್ಮಹತ್ಯೆ ಪ್ರಕರಣ ಎಂದು ದಾಖಲು ಮಾಡಿಕೊಂಡರು. ಅದರ ನಂತರ ಅವರ ತಾಯಿ ಕೆಂಚಮ್ಮ ಇಲ್ಲ, ನನ್ನ ಮಗನ ಕೊಲೆಯಾಗಿದೆ, ನನ್ನ ಮಗನನ್ನು ಯಾರೋ ಹೊಡೆದು ಕೊಂದಿದ್ದಾರೆ, ಅವನು ಆತ್ಮಹತ್ಯೆ ಮಾಡಿಕೊಂಡಿಲ್ಲ ಎಂದು ಬಹಳಷ್ಟು ಸಲ ಹೇಳಿದರು. 18ನೇ ತಾರೀಖಿಗೆ ಅಲ್ಲಿರುವ ಪ್ರಕರಣ ಆತ್ಯಹತ್ಯೆ ಅಲ್ಲ, ಇದು ಕೊಲೆ ಎಂದು ಯಲ್ಲಾಲಿಂಗನ ಸಹೋದರಿ ಮಂಜುಳ ಎನ್ನುವವರು ದೂರನ್ನು ಕೊಟ್ಟರು. 10ನೇ ತಾರೀಖು ತೀರಿಕೊಂಡಿದ್ದರ ಬಗ್ಗೆ 18–2–2015 ರಂದು ಅವನ ತಂಗಿ ಮಂಜುಳ ಎನ್ನುವವರು ಇದು ಕೊಲೆ ಪ್ರಕರಣ ಎಂದು ಗದಗಿನ ಪೊಲೀಸ್ ಸ್ಟೇಷನ್‌ನಲ್ಲಿ ದೂರು ದಾಖಲಿಸಿದಾಗ ದಿ:10–4–2015 ರಂದು ಸುಮಾರು 4 ತಿಂಗಳ ನಂತರ ಗದಗದಿಂದ ಕೊಪ್ಪಳದ ಎಸ್.ಪಿ.ಯವರಿಗೆ ವರ್ಗಾವಣೆ ಮಾಡುತ್ತಾರೆ.

**(4–00 ಗಂಟೆ)**

ಅಂದಿನ ಒಬ್ಬ ಕೊಪ್ಪಳದ ಡಿವೈಎಸ್‌ಪಿ ಶ್ರೀ ನಾಗರಾಜು ಎನ್ನುವವರು ಅಂದರೆ ಸಿಪಿಐ ರವರ ನೇತೃತ್ವದಲ್ಲಿ ಒಂದು ತಂಡವನ್ನು ರಚನೆ ಮಾಡಿ, ಈ ಕೊಲೆ ಹೇಗೆ ಆಯಿತು, ಎಲ್ಲಿ ಆಯಿತು, ಏನಾಯಿತು ಎನ್ನುವುದಕ್ಕೆ ಒಂದು ತಂಡವನ್ನು ರಚನೆ ಮಾಡಿದಾಗ ಅಲ್ಲಿ 11–04–2015ಕ್ಕೆ ಅಲ್ಲಿನ ಕೊಲೆ ಭೇದಿಸಲಿಕ್ಕೆ ಅಲ್ಲಿನ ಸಿಪಿಐ ತಂಡ ಹೋಗುತ್ತದೆ. ಅದರ ನಂತರ ಅದರ ಸುಳಿವು ಕಂಡು ಅಲ್ಲಿನ ಮೂರು ಜನರನ್ನು ಆರೋಪಿಗಳು ಎಂದು ಆ ತಂಡ ನಿರ್ಣಯ ಮಾಡುತ್ತಾರೆ. ಆ ತಂಡ ನಿರ್ಣಯ ಮಾಡಿದಾಗ

ಅಲ್ಲಿನ ಸಿಪಿಐ ಶ್ರೀ ನಾಗರಾಜು ಅವರಿಗೆ ಈ ಸಂಬಂಧ ತನಿಖೆಗೆ ಕೊಟ್ಟಾಗ ಆ ಪ್ರಕರಣಕ್ಕೆ ಸಂಬಂಧಪಟ್ಟಂತೆ ಮಹಾಂತೇಶ್ ನಾಯಕ, ಮನೋಜ್ ನಾಯಕ ಮತ್ತು ಮಹಾಂತೇಶ್ ಎನ್ನುವ ಮೂರು ಜನರನ್ನು ಹಿಡಿದು ಬಂಧಿಸಿ, ಇದಕ್ಕೆ ಇಂತಹವರ ಕೈವಾಡ ಇದೆ ಎಂದು ಹೇಳುತ್ತಾರೆ. ನಾನು ಹೇಳಬೇಕಾಗಿರುವುದು ಏನೆಂದರೆ, ದಿನಾಂಕ 16-5-2015, 18-05-2015 ಮತ್ತು 19-05-2015 ಈ ರೀತಿಯಲ್ಲಿ ಮೂರು ಜನರನ್ನು ಹಿಡಿದು ಆ ಒಂದು ಪ್ರಕರಣಕ್ಕೆ ಸಂಬಂಧಪಟ್ಟ ಹಾಗೆ ಇಂತಿಂಥವರು ಇದ್ದಾರೆಂದು ವಿವರವನ್ನು ಕೊಟ್ಟಿದ್ದಾರೆ.

ಸನ್ಮಾನ್ಯ ಸಭಾಪತಿಯವರೆ, ತಮ್ಮ ಮೂಲಕ ಸರ್ಕಾರಕ್ಕೆ ಒಂದು ಮಾತನ್ನು ಕೇಳುವುದೇನೆಂದರೆ ಇವನು 10-01-2015ಕ್ಕೆ ಕೊಲೆ ಮಾಡಿದ್ದನ್ನು 11ನೇ ತಾರೀಖಿಗೆ ಆರೈಲ್ವೇ ಪೊಲೀಸರು ಈ ಪ್ರಕರಣವನ್ನು ದಾಖಲು ಮಾಡಿಕೊಂಡು 18ನೇ ತಾರೀಖಿನ ನಂತರ ಅವರ ತಂಗಿ ಕೊಟ್ಟಂತಹ ದೂರನ್ನು ತೆಗೆದುಕೊಂಡು ದಿನಾಂಕ 10-04-2015 ರಂದು ಅಂದರೆ 4 ತಿಂಗಳು ಕಳೆದ ನಂತರ ಅದನ್ನು ಕೊಡುತ್ತಿದ್ದಾರೆ. ಅಲ್ಲಿನ ಪತ್ರಿಕೆ ಹೇಳಿಕೆಯನ್ನು ನೋಡಿದಾಗ, ಅಲ್ಲಿನ ಜನರ ವಾತಾವರಣವನ್ನು ನೋಡಿದಾಗ, ಅಲ್ಲಿನ ಜನರು ಮಾತನಾಡುವ ವಿಚಾರವನ್ನು ನೋಡಿದಾಗ ಇಲ್ಲಿ ಇವತ್ತು ಸಂಪೂರ್ಣವಾಗಿ ಇಲ್ಲಿಯ ಒಬ್ಬ ಪ್ರಭಾವಿ ನಾಯಕ, ರಾಜ್ಯಕ್ಕೆ ಇರತಕ್ಕಂತಹ ಒಬ್ಬ ಪ್ರಭಾವಿ ನಾಯಕರು ಈ ಕೊಲೆಯ ಹಿಂದೆ ಇದ್ದಾರೆ, ಈ ಏನೂ ಮೂರುಜನ ಆರೋಪಿಗಳಿದ್ದಾರೆ ಮತ್ತು ಏನು ಒಬ್ಬ ಜಿಲ್ಲಾ ಪಂಚಾಯಿತಿಯ ಮಾಜಿ ಸದಸ್ಯ ಯಾರ ಬೆಂಬಲಿಗರು ಎನ್ನುವುದನ್ನು ಸಂಪೂರ್ಣವಾಗಿ ಅಲ್ಲಿನ ಜನರು ಮಾತನಾಡುತ್ತಿದ್ದಾರೆ. ಇಂತಿಂಥವರು ಎಂದು ಜನರಿಗೆ ಗೊತ್ತಿದೆ. ಇವರೇ ಕೊಲೆ ಮಾಡಿಸಿದ್ದಾರೆಂದು ಗೊತ್ತಿದೆ. ಈ ರೀತಿಯಲ್ಲಿ ಕೊಲೆಯಾಗಿರುವಾಗ ಅಲ್ಲಿನ ಜನಕ್ಕೆ ಯಾವ ರೀತಿಯ ವಾತಾವರಣ ಮೂಡಿದೆ ಎನ್ನುವುದನ್ನು ನೋಡಿ.

ಸನ್ಮಾನ್ಯ ಸಭಾಪತಿಯವರೆ, ಕೊಪ್ಪಳ ಜಿಲ್ಲೆಯ ಕನಕಗಿರಿಯ ಕನಕಾಪುರಕ್ಕೆ ನಾನು ಸಹ ಹೋಗಿದ್ದೆ. ಯಾವ ಜನರು ಸಹ ಮನೆಯಿಂದ ಹೊರಗಡೆ ಬರುತ್ತಿಲ್ಲ. ಇವತ್ತು ಅಲ್ಲಿಯ ಸಮುದಾಯದ ಗುರುಗಳು ಬಂದು ಈ ರೀತಿಯಲ್ಲಿ ಆಗಿದೆಎಂದು ಹೇಳಿ ಎಲ್ಲರೂ ಬನ್ನಿ ಎಂದು ಹೇಳಿ, ಅವನಿಗೆ ಅನ್ಯಾಯ ಆಗಿದ್ದು, ಈ ನಿಟ್ಟಿನಲ್ಲಿ ಪ್ರತಿಭಟನೆ ಮಾಡೋಣ ಬನ್ನಿ ಎಂದು ಹೇಳಿದಾಗ ಅವರ ಹಿಂದೆ ಹಿಂದೆಯೇ ಜನರು ಬರುತ್ತಿದ್ದಾರೆ. ಏಕೆಂದರೆ, ಈ ಕೊಲೆ ಮಾಡಿದಂತಹ ವ್ಯಕ್ತಿಯ ವಿಷಯವಾಗಿ 2005 ರಲ್ಲಿಯೇ ರೌಡಿ ಶೀಟ್‌ನಲ್ಲಿ ಓಪನ್ ಮಾಡಿದ್ದಾರೆ. ಇವನೇ ಕೊಲೆ ಮಾಡಿದ್ದಾನೆಂದು ಜನರು ಮಾತನಾಡುತ್ತಿದ್ದಾರೆ. ಹೀಗಿದ್ದರೂ ಸಹ ಅಲ್ಲಿನ ಪೊಲೀಸರು ಕೈಕಟ್ಟಿ ಕುಳಿತುಕೊಳ್ಳುವಂತಹ ಕೆಲಸ ಮಾಡಿದ್ದಾರೆಂದರೆ ಈ ಸರ್ಕಾರದ ಮೇಲೆ ಒತ್ತಡತರುವಂತಹ ಎಷ್ಟು ಪ್ರಭಾವಿ ನಾಯಕರು ಆ

ಊರಿನಲ್ಲಿರಬಹುದು, ಆ ಜಿಲ್ಲೆಯಲ್ಲಿರಬಹುದು. ಈ ಪ್ರಕರಣ ಸಂಭವಿಸಿದ ಮೇಲೆ ಅನ್ಯಾಯದ ವಿರುದ್ಧ ಬಹಳಷ್ಟು ಸಂಘಟನೆಗಳು ಹೋರಾಟವನ್ನು ಮಾಡಿದವು. ಆ ಹೋರಾಟವನ್ನು ಮಾಡಿದಾಗ ನಾನು ಅಲ್ಲಿಗೆ ಹೋದಂತಹ ಸಂದರ್ಭದಲ್ಲಿ ಒಬ್ಬ ರಾಜಕೀಯ ಪಕ್ಷದ ಅಧ್ಯಕ್ಷರಿಗೆ ಡಿವೈಎಸ್‌ಪಿ ಅವರಿಗೆ ಕೊಲೆ ಮಾಡಿದ ವ್ಯಕ್ತಿ ಯಾರು ಎಂದು ಗೊತ್ತಿದ್ದರೂ ಸಹ ಅವರು ನಿಮ್ಮನ್ನು ಭೇಟಿಯಾಗಲಿಕ್ಕೆ ಬರುತ್ತಾರೆಂದು ಹೇಳಿ ಅವರನ್ನು ನಡುವೆ ಕಳುಹಿಸುತ್ತಾರೆ. ಅಂದೇ ನಾವು ಅವರಿಗೆ ಹೇಳಿದೆವು.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ. ಮಾನ್ಯ ಸದಸ್ಯರು ವಿವರವಾಗಿ ಹೇಳಿದ್ದಾರೆ. ಮಾನ್ಯ ಗೃಹ ಮಂತ್ರಿಗಳು ಸಹ ಸದನದಲ್ಲಿದ್ದಾರೆ. ಇದು ಜನವರಿಯಲ್ಲಿ ಆದಂತಹ ಕೊಲೆ. ಇದು ಕೊಲೆ ಎಂದು ಮುಂಚೆ ಒಪ್ಪುವುದಿಲ್ಲ. ಇದು ಸಹಜ ಸಾವು ಎನ್ನುವಂತೆರೈಲ್ವೇ ಪ್ಲಾಟ್‌ಫಾರಂನಲ್ಲಿ ಎಸೆಯುತ್ತಾರೋ ಅದು ಗೊತ್ತಾಗಬೇಕಿದೆ. ಆದಾದ ನಂತರ ಹೇಗೆ ಏನು ಎಂದುಅವರ ಅಕ್ಕ ಸ್ವಲ್ಪ ಆಕ್ಟೀವ್ ಆಗಲಿಲ್ಲವೆಂದರೆ ಈ ಕೇಸ್ ಮುಚ್ಚಿ ಹೋಗುತ್ತಿತ್ತು. ಈಗ ಒಳ್ಳೆಯ ಎಸ್‌ಪಿ.ಯವರು ಬಂದಿದ್ದಾರೆ. ಈಗಿನ ಎಸ್‌ಪಿ.ಯವರನ್ನು ನಾನು ಅಭಿನಂದಿಸುತ್ತೇನೆ. ಇದಾದ ನಂತರ, ಏತಕ್ಕೆಅವನನ್ನು ಕೊಲೆ ಮಾಡಿದರು ಎಂದರೆ ಗ್ರಾಮ ಪಂಚಾಯಿತಿಯ ಭ್ರಷ್ಟಾಚಾರ ಮತ್ತು ಅಕ್ರಮಗಳನ್ನು ಮಾಹಿತಿ ಹಕ್ಕು ಮುಖಾಂತರ ತೆಗೆದುಕೊಳ್ಳುತ್ತಾನೆ. ಹನುಮೇಶ್ ನಾಯಕ್ ರವರ ತಮ್ಮ ರಮೇಶ್ ನಾಯಕ್ ರವರ ರೇಷನ್ ಅಂಗಡಿಯಲ್ಲಿ ಅವ್ಯವಹಾರ ಆಗಿದೆ ಎನ್ನುವುದರ ಬಗ್ಗೆ ಅವನು ಪ್ರತಿಭಟನೆ ಮಾಡುತ್ತಾನೆ.

**ಸಭಾಪತಿಯವರು:–** ಒಂದು ನಿಮಿಷ. ಈಗ ಈ ಚರ್ಚೆ ಪ್ರಾರಂಭವಾಗಿ 10 ನಿಮಿಷವಾಯಿತು. ಈ ವಿಷಯದ ಆಳಕ್ಕೆ ಹೋಗದೇ ಈ ವಿಷಯವನ್ನು ಈ ಸದನದ ಬೇರೆ ಕಲಾಪಗಳನ್ನು ಬದಿಗೊತ್ತಿ ತೆಗೆದುಕೊಳ್ಳಬೇಕೆಂದು ತಾವು ಹೇಳಿದರೆ, ಸರ್ಕಾರದಿಂದ ಈ ನಿಲುವಳಿ ಸೂಚನೆಯನ್ನು ತೆಗೆದುಕೊಳ್ಳಬೇಕೋ ಬೇಡವೋ ಎಂದು ತೀರ್ಮಾನ ಮಾಡಲಿಕ್ಕೆ ಬರುತ್ತದೆ. ಈಗ ನಾವು ವಿಷಯದ ಆಳಕ್ಕೆ ಹೋಗಿ ಬಿಟ್ಟರೆ ಮತ್ತೇನೂ ಚರ್ಚೆಗೆ ಉಳಿಯುತ್ತದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಒಂದೇ ನಿಮಿಷಕ್ಕೆ ಮುಗಿಸುತ್ತೇನೆ. ನಾನು ಹೇಳುವುದಿಷ್ಟೆ. ಮಾನ್ಯ ಸದಸ್ಯರು ವಿವರವಾಗಿ ಹೇಳಿರುವುದರಿಂದ ನಾನು ವಿವರಕ್ಕೆ ಹೋಗದೇ ಒಂದೇ ನಿಮಿಷದಲ್ಲಿ ಮುಗಿಸುತ್ತೇನೆ. ಇಲ್ಲಿ ಗೂಂಡಾಗಿರಿ ಮೂಲಕ ವಾಕ್ ಸ್ವಾತಂತ್ರ್ಯವನ್ನು ಕಸಿಯುವಂತಹ ಪ್ರಯತ್ನ ಆಗುತ್ತಿದೆ. ಅಲ್ಲಿ ಯಾರು ಓಡಾಟ ಮಾಡಲಿಕ್ಕೆ ಆಗುವುದಿಲ್ಲ, ಗೂಂಡಾಗಳ ವಿರುದ್ಧ ಹೋದರೆ, ರಾಜಕಾರಣಿಗಳ ವಿರುದ್ಧ ಹೋದರೆ, ಪ್ರಭಾವಿ ವ್ಯಕ್ತಿಗಳ ವಿರುದ್ಧ ಹೋದರೆ ಈ ರೀತಿ ಆಗುತ್ತದೆ ಎನ್ನುವಂತಹ ಎಚ್ಚರಿಕೆ. ಎರಡನೆಯದಾಗಿ ಹೇಳುವುದಾದರೆ, ಉಳಿದ ವಿಚಾರವನ್ನೆಲ್ಲಾ ಮಾನ್ಯ ಸದಸ್ಯರು

ಹೇಳಿದ್ದಾರೆ. ನಾನು ಸಮಯದ ಅಭಾವದಿಂದ ಹೇಳಲಿಕ್ಕೆ ಹೋಗುವುದಿಲ್ಲ. ಜನವರಿಯಲ್ಲಿ ಆದಂತಹ ಕೊಲೆಯನ್ನು ತಾವು ಜೂನ್ ತಿಂಗಳಲ್ಲಿ ಸಿಐಡಿ.ಗೆ ಕೊಡುತ್ತೀರಿ. ಅಲ್ಲಿಯ ತನಕ ಪ್ರಗತಿಪರ ಸಂಘಟನೆಗಳು, ಪತ್ರಿಕಾ ಮಾಧ್ಯಮಗಳ, ಟಿ.ವಿ. ಮಾಧ್ಯಮಗಳ, ಮೂಲಕ ಈ ಬಗ್ಗೆ ಸಾಕಷ್ಟು ವಿಚಾರಗಳು ಬಂದ ನಂತರ ಇದನ್ನು ಸಿಐಡಿ.ಗೆ ಕೊಟ್ಟಿದ್ದೀರಿ. ಹನುಮೇಶ ನಾಯಕನನ್ನು ಆಮೇಲೆ ಅರೆಸ್ಟ್ ಮಾಡುತ್ತಾರೆ.

**ಸಭಾಪತಿಯವರು:–** ಈ ವಿಷಯವನ್ನು ಏನು ಮಾಡಬೇಕೆಂದು ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಹೇಳುವುದೇನೆಂದರೆ, ಈ ರೀತಿಯಲ್ಲಿ ಪ್ರಭಾವಿ ವ್ಯಕ್ತಿಗಳು ಇರುವುದರಿಂದ ಆ ವ್ಯಕ್ತಿ ನಿಜಕ್ಕೂ . . .

**ಸಭಾಪತಿಯವರು:–** ಇಲ್ಲಿ ಡಿಮಾಂಡ್ ವಿಷಯವಲ್ಲ. ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದನ್ನು ಮಾತ್ರ ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾನು ಸಹ ಅದೇ ವಿಷಯವನ್ನು ಹೇಳುತ್ತಿದ್ದೇನೆ. ಇದನ್ನು ಏತಕ್ಕೆ ಚರ್ಚೆಗೆ ತೆಗೆದುಕೊಳ್ಳಬೇಕೆಂದರೆ ಇದರ ಪೂರ್ತಿ ವಿಚಾರ ಹೊರಗಡೆ ಬರಬೇಕು. ಅಲ್ಲಿ ನಡೆಯುತ್ತಿರುವ ಗೂಂಡಾಗಿರಿ ನಿಲ್ಲಬೇಕು, ವಾಕ್ ಸ್ವಾತಂತ್ರ್ಯಕ್ಕೆ ಅವಕಾಶ ಕೊಡಬೇಕು. ಪತ್ರಿಕಾ ಸ್ವಾತಂತ್ರ್ಯಕ್ಕೆ ಅವಕಾಶ ಕೊಡಬೇಕು. ಜನ ಇನ್ನು ಮುಂದಾದರೂ ನೆಮ್ಮದಿಯಿಂದ ಬದುಕಬೇಕು. ನೀವು ಇದನ್ನು ಸಿಐಡಿ.ಗೆ ಕೊಟ್ಟಿದ್ದೀರಿ. ಇದು ನಿಮ್ಮ ಕಂಟ್ರೋಲ್‌ನಲ್ಲಿದೆ. ಹೀಗಾಗಿ, ಇಲ್ಲಿ ಪ್ರಭಾವಿ ವ್ಯಕ್ತಿಗಳಿರುವುದರಿಂದ, ಇದನ್ನು ಸಿಬಿಐ.ಗೆ ಕೊಡಬೇಕೆನ್ನುವುದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ನಾನು ಏತಕ್ಕೆ ಈ ವಿಷಯವಾಗಿ ಚರ್ಚೆ ಮಾಡಬೇಕೆಂದು ಇಷ್ಟಪಡುತ್ತಿದ್ದೇನೆಂದರೆ . . .

**ಸಭಾಪತಿಯವರು:–**ಆಯಿತು, ಸಮಯ.

**Sri S.R. PATIL:-** This matter should be taken for discussion whether it is tenable or not under rule.59. This argument should be confine to that only. You need not to go deep into the merit of the case.

**ಶ್ರೀ ಕೆ.ಎಸ್. ಈಶ್ವರಪ್ಪ:–** ನೀವು ಉತ್ತರ ಕೊಡುವಂತಹ ಸಮಯದಲ್ಲಿ ಹೇಳಿ. ಗೃಹ ಮಂತ್ರಿಗಳು ಸದನದಲ್ಲಿದ್ದಾರೆ. ಅವರು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಲಿ.

**ಸಭಾಪತಿಯವರು:–** ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದನ್ನು ಮುಂಚೆ ಮಾತಾನಾಡಲಿ. ವಿಷಯ ಗಾಂಭೀರ್ಯ ಹೌದು, ಇಲ್ಲವೋ ಎನ್ನುವುದನ್ನು ಪೀಠದಲ್ಲಿ ಯಾರು ಕುಳಿತಿರುತ್ತಾರೋ ಅವರು ತೆಗೆದುಕೊಳ್ಳುತ್ತಾರೆ. ಆದರೆ, ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದನ್ನು, ತೆಗೆದುಕೊಳ್ಳುವುದಕ್ಕೆ ಫಿಟ್ ಆಗಿದೆಯೋ ಇಲ್ಲವೋ ಎನ್ನುವುದನ್ನು ಸರ್ಕಾರದ ಪರವಾಗಿ ಉತ್ತರ ಹೇಳುವುದಾದರೆ ನಮ್ಮ ನಿರ್ಣಯದ ಆಧಾರದ ಮೇಲೆ ನಂತರ ಚರ್ಚೆ ಮಾಡಬೇಕೆನ್ನುವುದಾದರೆ, ಯಾವ ನಿಯಮದ ಪ್ರಕಾರ ಚರ್ಚೆ, ಆ ಚರ್ಚೆಗೆ ಎಷ್ಟು ಸಮಯ ಇದನ್ನೆಲ್ಲಾ ನೋಡಿಕೊಂಡು ಮುಂದಕ್ಕೆ ಹೋಗಲಿಕ್ಕೆ ಬರುತ್ತದೆ. ನಾವು ಪ್ರಶ್ನೆ ಉತ್ತರವನ್ನು ಪ್ರಾರಂಭ ಮಾಡಿಬಿಟ್ಟರೆ ಚರ್ಚೆ ಪ್ರಾರಂಭ ಆದಂತೆ ಆಗುತ್ತದೆ. ಚರ್ಚೆ ಪ್ರಾರಂಭ ಮಾಡುವುದು ಬೇಡ. ಈ ವಿಷಯವನ್ನು ಸದನದಲ್ಲಿ ನಿಯಮ 59 ರಡಿಯಲ್ಲಿ ತೆಗೆದುಕೊಳ್ಳಬೇಕೋ ಬೇಡವೋ, ಅಷ್ಟು ಮಾತ್ರ ಹೇಳಿದರೆ, ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಿರ್ಣಯವಾದರೆ ಚರ್ಚೆ ಮಾಡೋಣ. ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಬರುವುದಿಲ್ಲವೆಂದರೆ ಅದು ಅಲ್ಲಿಗೆ ಕ್ಲೋಸ್ ಆಗುತ್ತದೆ. ಆದ್ದರಿಂದ, ಇದನ್ನು ಚರ್ಚೆಗೆ ತೆಗೆದುಕೊಳ್ಳಬೇಕೋ ಬೇಡವೋ ಎನ್ನುವುದನ್ನು ಹೇಳಬೇಕು.ಈ ವಿಚಾರವನ್ನು ಇಂತಿಂಥ ಕಾರಣಕ್ಕೆ ತೆಗೆದುಕೊಳ್ಳಬೇಕೆಂದು ಇವರು ಹೇಳಿದ್ದಾರೆ. ಆದ್ದರಿಂದ, ಇದನ್ನು ತೆಗೆದುಕೊಳ್ಳಬೇಕು, ಬೇಡ ಎನ್ನುವುದನ್ನು ಹೇಳಿದರೆ ಅದರ ಬಗ್ಗೆ ನಿರ್ಣಯವನ್ನು ನಾನು ಹೇಳುತ್ತೇನೆ.

**ಶ್ರೀ ಕೆ.ಜೆ.ಜಾರ್ಜ್ (ಗೃಹ ಮಂತ್ರಿಗಳು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು, ಮಾನ್ಯ ಸದಸ್ಯರಾದ ಶ್ರೀ ಸೋಮಣ್ಣ ಬೇವಿನ ಮರದರವರು ಹೇಳಿದ್ದನ್ನು ಕೇಳಿದ್ದೇನೆ. ನಿಜವಾಗಿಯೂ ಸಹ ಇದು ಒಂದು heinous crime ಆಗಿದೆ. ಇದು ಆಗಬಾರದಾಗಿತ್ತು, ಆಗಿದೆ. ಸರ್ಕಾರದ ವತಿಯಿಂದ ಈಗಾಗಲೇ ಸಾಕಷ್ಟು ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇವೆ. ಮೊದಲಿಗೆ ಇದರ ಬಗ್ಗೆ ರೈಲ್ವೇ ಪೊಲೀಸ್‌ನವರು ತನಿಖೆಯನ್ನು ಮಾಡುತ್ತಿದ್ದರು. ನಂತರ ಅವರ ವಿನಂತಿ ಮೇರೆಗೆ ಲೋಕಲ್ ಪೊಲೀಸ್ ಸ್ಟೇಷನ್‌ಗೆ ಕೊಟ್ಟು ಇನ್‌ವೆಸ್ಟಿಗೇಷನ್ ಮಾಡಿಸಿದ್ದೇವೆ. ತದನಂತರ ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಈ ಬಗ್ಗೆ ಸಾಕಷ್ಟು ಜನರು ಮನವಿಪತ್ರಗಳನ್ನು ಕೊಟ್ಟ ಮೇಲೆ ಇದರ ಸಿರಿಯಸ್ ನೋಡಿ, ಈಗಾಗಲೇ ಇದನ್ನು ಸಿಐಡಿ.ಗೆ ಕೊಟ್ಟಿದ್ದಾರೆ. 9 ಜನರು ಯಾರು ಆರೋಪಿಗಳಿದ್ದಾರೆ, ಅವರೆಲ್ಲರನ್ನೂ ಅರೆಸ್ಟ್ ಮಾಡಿದ್ದೇವೆ. ಅದರ ಪೈಕಿ 7 ಜನರನ್ನು ಅರೆಸ್ಟ್ ಮಾಡಿದ್ದೇವೆ. 2 ಮಂದಿ ಅವರೇ ಶರಣಾಗಿದ್ದಾರೆ. ತನಿಖೆ ಸರಿಯಾಗಿ ನಡೆಯುತ್ತಿದೆ. ಈ ವಿಚಾರದಲ್ಲಿ ನಾನು ಏನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಇದನ್ನು ನಿಲುವಳಿ ಸೂಚನೆಯಲ್ಲಿ ಚರ್ಚೆ ಮಾಡಬೇಕಾಗಿಲ್ಲ. ನಿಯಮ 68 ರಲ್ಲಿ ಸಂಪೂರ್ಣವಾಗಿ ಚರ್ಚೆಯಾಗಲಿ, ನಂತರ ಸರ್ಕಾರದ ವತಿಯಿಂದ

ಸಂಪೂರ್ಣವಾಗಿ ಉತ್ತರ ಕೊಡಲಿಕ್ಕೆ ತಯಾರಿದ್ದೇವೆ. ಆದ್ದರಿಂದ, ನಿಯಮ 68 ರಡಿಯಲ್ಲಿ ಚರ್ಚೆ ಮಾಡಲಿಕ್ಕೆ ತಾವು ಯಾವಾಗ ಸಮಯ ನಿಗದಿ ಮಾಡುತ್ತೀರೋ ಆಗ ಚರ್ಚೆ ಮಾಡಬಹುದು.

**ಸಭಾಪತಿಯವರು:–** ಸರ್ಕಾರದ ಇಚ್ಚೆಯಂತೆ ಈಗ ಪ್ರಸ್ತಾವನೆಯಾಗಿರುವಂತಹ ವಿಷಯದ ಗಾಂಭೀರ್ಯದ ಹಿನ್ನೆಲೆಯಲ್ಲಿ ಸದನದಲ್ಲಿ ಈ ವಿಷಯ ಚರ್ಚೆಯಾಗಬೇಕಾಗುತ್ತದೆ. ಸದನ ಇರುವುದೇ ಇದಕ್ಕಾಗಿ. ಇದು ಗಂಭೀರ ವಿಷಯವಾಗಿದ್ದು, ಇಡೀ ರಾಜ್ಯದ ಜನ ಬೆಚ್ಚಿ ಬೀಳುವಂತಹ ವಿಷಯವಾಗಿದೆ. ಇದರ ಬಗ್ಗೆ ಜನಕ್ಕೆ ಒಂದು ಸಂದೇಶ ಹೋಗಬೇಕಾಗಿದೆ. ಆ ಹಿನ್ನೆಲೆಯಲ್ಲಿ ಚರ್ಚೆಯಾಗಬೇಕು. ನಮ್ಮ ಸದನದಲ್ಲಿ ನಡೆದು ಬಂದಿರತಕ್ಕಂತಹ ಪದ್ಧತಿಯ ಆಧಾರದ ಮೇಲೆ ಇದನ್ನು ನಿಯಮ 59ರ ಅಡಿಯಲ್ಲಿ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಆದುದರಿಂದ ಇದನ್ನು ನಿಯಮ 68ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳಿ ಒಳ್ಳೆಯದಾಗುತ್ತದೆ ಎಂದು ಸರ್ಕಾರದವರು ಹೇಳಿರುವ ಹಿನ್ನೆಲೆಯಲ್ಲಿ ಈ ವಿಚಾರದ ಬಗ್ಗೆ ನಿಯಮ 59ರ ಅಡಿಯಲ್ಲಿ ಕೊಟ್ಟಿರುವ ಇದೇ ವಿಷಯದ ನೋಟೀಸನ್ನು ನಿಯಮ 68ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ತೀರ್ಪನ್ನು ಕೊಡುತ್ತಿದ್ದೇನೆ. ಈ ಬಗ್ಗೆ ಚರ್ಚೆಯನ್ನು ಈಗಲೇ ಮಾಡಬೇಕೆಂದು ಬೆಳಿಗ್ಗೆ ನನ್ನ ಕೊಠಡಿಯಲ್ಲಿ ಸೇರಿದಾಗ ಹೇಳಿದ್ದರು ಮತ್ತು ಈ ಸಮಯದಲ್ಲಿ ಮಾನ್ಯ ಗೃಹ ಸಚಿವರು ಸದನದಲ್ಲಿ ಇದ್ದರೆ ಒಳ್ಳೆಯದಾಗುತ್ತದೆ ಎಂದೂ ಕೂಡ ಹೇಳಿದ್ದಾರೆ. ಈಗ ಹತ್ತು ನಿಮಿಷವೆಂದು ಏಕೆ ನಿರ್ಬಂಧವನ್ನು ಮಾಡಿದೆ ಎಂದರೆ, ನನ್ನ ಕೊಠಡಿಯಲ್ಲಿ ಮಾನ್ಯ ಸಭಾ ನಾಯಕರು ಮಾನ್ಯ ವಿರೋಧ ಪಕ್ಷದ ನಾಯಕರು ಹಿರಿಯರು ಎಲ್ಲರೂ ಸೇರಿ ಒಂದು ಸಣ್ಣ ತೀರ್ಮಾನವನ್ನು ಮಾಡಿದ್ದಾರೆ. ಈ ರೀತಿಯ ಸಂಗತಿಗಳು ಬಂದಾಗ ಅದಕ್ಕೆ ಸಮಯವನ್ನು ನಿಗದಿ ಮಾಡಬೇಕು ಎಂದು ಹೇಳಿದ್ದಾರೆ. ಎಷ್ಟು ಹೊತ್ತು ಚರ್ಚೆ ಮಾಡಬೇಕು ಎಂಬುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಈ ವಿಚಾರದ ಪ್ರಸ್ತಾವನೆ ಮತ್ತು ಉತ್ತರ ಎರಡೂ ಕೂಡ ಸೇರಿ 2 ಗಂಟೆ ದಾಟಬಾರದು ಎಂಬುದನ್ನು ನಾವೆಲ್ಲರೂ ಸೇರಿ ತೀರ್ಮಾನ ಮಾಡಿದ್ದೇವೆ. ಈ ಅಂಶವನ್ನು ನಾನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಒಬ್ಬರೇ ಮಾತನಾಡಬಹುದು ಇಲ್ಲವೇ ಇರುವ ಮಾಹಿತಿಯನ್ನು ಹಂಚಿಕೊಂಡು 4–6 ಜನರು ಮಾತನಾಡಬಹುದು ಅದು ಅವರ ಇಷ್ಟ. ಸರ್ಕಾರದ ಕಡೆಯಿಂದ ಮಾನ್ಯ ಗೃಹ ಮಂತ್ರಿಗಳು ಇಲ್ಲವೇ ಮಾನ್ಯ ಸಭಾ ನಾಯಕರು ಅಥವಾ ಬೇರೆ ಯಾರಾದರೂ ಉತ್ತರವನ್ನು ನೀಡಬಹುದು. ಇಲ್ಲವೇ ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ಅವರು ಕೂಡ ಸರ್ಕಾರದ ಪರವಾಗಿ ಉತ್ತರವನ್ನು ಕೊಡಬಹುದು. ಇದಕ್ಕೆ ಅವಕಾಶ ಇದೆ. ಈಗ ಹೆಚ್ಚೂ ಕಡಿಮೆ 4–15 ಆಗಿದೆ. 6–15ರವರೆಗೆ ಈ ವಿಚಾರದ ಬಗ್ಗೆ ಚರ್ಚೆ ಮುಗಿಯಬೇಕು. ಅದಕ್ಕಿಂತ ಹೆಚ್ಚು ಮುಂದೆ ಹೋಗುವುದಕ್ಕೆ ನಾನು ಬಿಡುವುದಿಲ್ಲ. ದಯಮಾಡಿ ನನಗೆ ಸಹಕಾರವನ್ನು ನೀಡಬೇಕೆಂದು ಹೇಳುತ್ತಾ ನಿಯಮ 68ರ ಅಡಿಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಬೇಕೆಂದು ವಿನಂತಿಸುತ್ತೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಇವತ್ತಿನ ಅಜೆಂಡಾದಲ್ಲಿನ ವಿಚಾರಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

**ಸಭಾಪತಿಯವರು:–** ಇದು ಆದಮೇಲೆ ನಾನು ಅಜೆಂಡಾದಲ್ಲಿರುವ ವಿಚಾರಗಳನ್ನು ಚರ್ಚೆಗೆ ತೆಗೆದುಕೊಳ್ಳುತ್ತೇನೆ. ಈ ವಿಚಾರದ ಬಗ್ಗೆ ಕೂಡಲೇ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಬೆಳಿಗ್ಗೆ ತೀರ್ಮಾನ ಆಗಿತ್ತು. ಮಾನ್ಯ ಗೃಹ ಸಚಿವರು ಇಲ್ಲಿ ಕುಳಿತಿದ್ದಾರೆ. ಅವರೇ ಇದಕ್ಕೆ ಉತ್ತರ ನೀಡುತ್ತಾರೆ. ಮಾನ್ಯ ಸಭಾ ನಾಯಕರು ಉತ್ತರ ಹೇಳುವ ಹಾಗಿದ್ದಲ್ಲಿ ಸ್ವಲ್ಪ ನಿಧಾನ ಮಾಡಬಹುದಾಗಿತ್ತು. ಅವರು ಇಲ್ಲಿ ಇದ್ದಾಗ ಈ ವಿಚಾರವನ್ನು ತೆಗೆದುಕೊಳ್ಳುವುದು ಒಳ್ಳೆಯದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಗೃಹ ಸಚಿವರನ್ನು ಆ ಮನೆಗೆ ಕಳುಹಿಸಿ ಬಿಡಿ. 2 ಗಂಟೆ ಅಂದರೆ ಬೇಗನೆ ಮುಗಿಯುತ್ತದೆ.

**ಸಭಾಪತಿಯವರು:–** ಎಲ್ಲರೂ ಸಮಯವನ್ನು ನೆನಪಿನಲ್ಲಿ ಇಟ್ಟುಕೊಂಡು ಮಾತನಾಡಬೇಕಾಗುತ್ತದೆ. ನಾನು ಮಧ್ಯೆ ಬಾಯಿ ಹಾಕಿದರೆ ಬೇಜಾರು ಮಾಡಿಕೊಳ್ಳಬೇಡಿ.

## 3. ನಿಯಮ 68ರ ಮೇರೆಗೆ ಚರ್ಚೆ

## ಕೊಪ್ಪಳ ಜಿಲ್ಲೆಯ ಕನಕಪುರ ಕ್ಷೇತ್ರದಲ್ಲಿ ಹಿಂದುಳಿದ ವರ್ಗಕ್ಕೆ ಸೇರಿದ ಯಲ್ಲಾಲಿಂಗ ಎನ್ನುವ ಯುವಕನ ಹತ್ಯೆಯ ಬಗ್ಗೆ.

**ಶ್ರೀ ಸೋಮಣ್ಣ ಮ. ಬೇವಿನಮರದ (ವಿಧಾನಸಭಾ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಈ ವಿಚಾರದ ಬಗ್ಗೆ ಚರ್ಚೆಗೆ ಅನುವು ಮಾಡಿ ಕೊಟ್ಟಿದ್ದಕ್ಕಾಗಿ ಧನ್ಯವಾದಗಳು. 10ನೇ ತಾರೀಖಿನಂದು ಯಲ್ಲಾ ಲಿಂಗನ ಕೊಲೆಯಾಗಿದ್ದು ಆರು ತಿಂಗಳು ಕಳೆದಿದೆ. ಈ ಕೊಲೆ ಬಗ್ಗೆ ಸಾಕಷ್ಟು ವಿಳಂಬ ಮಾಡಿದ್ದಕ್ಕೆ ಕಾರಣವೇನು? ನಾನು ತಮಗೆ ಒಂದು ಭಯಾನಕವಾದ ವಾಸ್ತು ಸ್ಥಿತಿಯನ್ನು ಇಲ್ಲಿ ಹೇಳಬಯಸುತ್ತೇನೆ. ಆ ಊರಿನ ಯಾವ ಒಬ್ಬ ಮನುಷ್ಯನೂ ಕೂಡ ಆ ಊರಿನಿಂದ ಹೊರಗೆ ಬರುತ್ತಿಲ್ಲ. ಆ ವ್ಯಕ್ತಿಗಳು ಯಾವ ರೀತಿ ಮಾತನಾಡುತ್ತಿದ್ದರು ಎಂದು ಹೇಳಿದರೆ, ನೋಡಿ, ಆ ಯಲ್ಲಾಲಿಂಗನು ನಮ್ಮ ವಿರುದ್ಧ ಮಾತನಾಡಿದ್ದಕ್ಕೆ ಯಾವ ರೀತಿ ಕೈಲಾಸಕ್ಕೆ ಹೋದ ಎನ್ನುವಂತಹ ರೀತಿಯಲ್ಲಿ ಆ ಕೊಲೆ ಮಾಡಿದಂತಹ ವ್ಯಕ್ತಿಗಳು ಮಾತನಾಡುತ್ತಿದ್ದಾರೆ. ಮತ್ತು ಮುಂದೆ ಏನಾದರೂ ನೀವೂ ಕೂಡ ಈ ರೀತಿ ಹೇಳಿದ್ದೇ ಆದರೆ ನಿಮಗೂ ಕೂಡ ಇದೇ ರೀತಿಯ ಭಯಾನಕವಾದ ಪರಿಸ್ಥಿತಿ ಬರುತ್ತದೆ ಎಂದು ಈ ಕೊಲೆ ಮಾಡಿದಂತಹ ವ್ಯಕ್ತಿಗಳು ಅವರಿಗೆ ಹೆದರಿಸುತ್ತಿದ್ದಾರೆ. ಈ ಹುಲಿ ಹೈದರ್ ಎಂಬ ಗ್ರಾಮದಲ್ಲಿ ಇನ್ನೊಬ್ಬರು ಈ ಬೆಂಬಲಿಗರು ಎನ್ನುವವರು ಏನು ಇದ್ದಾರೆ ನಾನು ಅವರು ಇವರು ಎಂದು ಹೇಳುವುದಿಲ್ಲ. ರಾಜ್ಯದ

ಪ್ರಭಾವೀ ಮಂತ್ರಿಗಳ ಸ್ಥಾನದಲ್ಲಿ ಇರತಕ್ಕಂತಹ ಒಬ್ಬ ಪ್ರಭಾವೀ ನಾಯಕರು ಅವರ ಹಿಂಬಾಲಕರನ್ನು ಬಿಟ್ಟು ಯಾವ ರೀತಿ ಹೆದರಿಕೆಯನ್ನು ಹಾಕುತ್ತಿದ್ದರು ಎಂದು ಹೇಳಬಯಸುತ್ತಿದ್ದೇನೆ.

**(ಈ ಹಂತದಲ್ಲಿ ಮಾನ್ಯ ಉಪ ಸಭಾಪತಿಯವರು ಪೀಠವನ್ನು ಅಲಂಕರಿಸಿದರು)**

ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ರೇಷನ್ ಅಂಗಡಿಯೊಳಗೆ ಸರಿಯಾಗಿ ಅಕ್ಕಿ ಕೊಡುತ್ತಿಲ್ಲವೆಂದು ಒಂದು ಪ್ರತಿಭಟನೆಯನ್ನು ಆ ಅಂಗಡಿಯ ಹೊರಗೆ ಮಾಡಿದರೆ, ಅವರ ಮನೆಗೆ ಹೋಗಿ ಅವರಿಗೆ ಧಮಕಿ ಹಾಕಿ ಇನ್ನೊಂದು ಸಲ ಏನಾದರೂ ನಿಮ್ಮ ಮಗ ಮಾಡಿದ್ದೇ ಆದರೆ ಅವನಿಗೆ ಬೆಂಕಿ ಹಚ್ಚುತ್ತೇವೆ ಎಂದು ಬೆದರಿಕೆ ಮಾಡಿ ಹೇಳಿದ್ದಾರೆ. ಸಣ್ಣ ಹನುಮಂತಪ್ಪ ಏನಾದರೂ ಆ ಮನೆಯಲ್ಲಿ ಸಿಕ್ಕಿದ್ದಿದ್ದರೆ ಅವನಿಗೆ ಬೆಂಕಿ ಹಚ್ಚಿ ಹೋಗುತ್ತೇವೆ ಎಂದು ಹೇಳಿದ್ದಾರೆ. ಇದು ತಮಗೆ ಗೊತ್ತಿರಲಿ. ಈ ಪ್ರಕರಣದಲ್ಲಿ ಮನೆಗೆ ಹೋದಾಗ ಅವನ ತಾಯಿಗೆ ಅಂದರೆ ಈ ಯಲ್ಲಾ ಲಿಂಗನ ತಾಯಿ ಅಲ್ಲ. ಈ ರೇಷನ್ ಅಂಗಡಿಯ ವಿರುದ್ಧ ಪ್ರತಿಭಟನೆ ಮಾಡಿದಂತಹವನ ತಾಯಿ, ಆಕೆ ನನ್ನ ಮಗನಿಗೆ ಏಕೆ ಹೊಡೆಯುತ್ತೀರಿ ಅವನು ಹೊರಗೆ ಹೋಗಿದ್ದಾನೆ ತಪ್ಪಾಗಿದೆ ನಮ್ಮನ್ನು ಕ್ಷಮಾ ಮಾಡಿ ಎಂದು ಅವರ ಪಾದವನ್ನು ಹಿಡಿದರೂ ಸಹ ಬಿಡುತ್ತಿಲ್ಲ. ನಿನಗೆ ಹೇಳುತ್ತಿದ್ದೇನೆ ಇಲ್ಲಾ ನಿನ್ನ ಮಗನು ಈ ರೀತಿ ಮಾಡಿದ್ದಾನೆ ಅವನಿಗೆ ಈ ರೀತಿ ಮಾಡುವುದಕ್ಕೆ ಬಂದಿದ್ದೇವೆ ಹುಷಾರು ಎಂದು ಅವನ ತಾಯಿಗೆ ಹೇಳಿ ಬಂದಿದ್ದಾರೆ. ಆ ಮುದುಕಿ ಏನೋ ಅಂದಿದ್ದಕ್ಕೆ ಅವಳ ಚಪ್ಪರ ಅಂದರೆ ಆಡು, ದನ ಕಟ್ಟತಕ್ಕಂತಹ ಕೊಟ್ಟಿಗೆಗೆ ಬೆಂಕಿ ಹಚ್ಚಿ ಹೋಗಿದ್ದಾರೆ. ಯಾವ ಯಲ್ಲಾಲಿಂಗನ ಕೊಲೆ ಮಾಡಿ ರಾಜಾರೋಷವಾಗಿ ಊರಿನಲ್ಲಿ ಅಡ್ಡಾಡುವ ಕೊಲೆಗಾರರು, ಭ್ರಷ್ಟರು, ಹಗಲು ದರೋಡೆ ಮಾಡತಕ್ಕಂತಹವರು ಆ ಮುದುಕಿಗೆ ಹೋಗಿ ಬೆದರಿಕೆ ಹಾಕಿ ಬಂದಿದ್ದಾರೆ. ಅಂದರೆ ಈ ಸರ್ಕಾರದಲ್ಲಿ ಪ್ರಭಾವ ಇರತಕ್ಕಂತಹ ಮಂತ್ರಿಗಳು ಅವರ ಬೆನ್ನ ಹಿಂದೆ ಇದ್ದಾರೆ ಎನ್ನುವುದನ್ನು ತಾವು ಅರ್ಥ ಮಾಡಿಕೊಳ್ಳಬೇಕು. ನಾವೆಲ್ಲರೂ ಬಹಳಷ್ಟು ಸಲ ಯುವಕರು ಎದ್ದೇಳಬೇಕು ಗುರಿ ಮುಟ್ಟುವತನಕ ನಿಲ್ಲಬಾರದು ಎಂದು ಹೇಳುತ್ತೇವೆ. ಇವತ್ತು ಯಾವುದಾದರೂ ಒಬ್ಬ ಯುವಕ ಇಂತಹ ಯಾವುದಾದರೂ ಒಂದು ವಿಚಾರವನ್ನು ತೆಗೆದುಕೊಂಡು ಮಾತನಾಡಿದ್ದೇ ಆದರೆ ಅವನ ಜೀವವೇ ಉಳಿಯುವುದಿಲ್ಲವೆಂದು ಹೇಳಿದರೆ ಮುಂದಿನ ಪರಿಸ್ಥಿತಿ ಏನು? ರಾಜಾರೋಷವಾಗಿ ಅಲ್ಲಿ ಇರತಕ್ಕಂತಹ ಇಬ್ಬರು ಓಡಾಡುತ್ತಿದ್ದಾರೆಂದು ಹೇಳಿದರೆ, ನಮ್ಮ ರಾಜ್ಯದ ಅಧ್ಯಕ್ಷರು ಆ ಕ್ಷೇತ್ರಕ್ಕೆ ಹೋದಾಗ ಅಲ್ಲಿನ ಪೊಲೀಸ್ ಅಧಿಕಾರಿ ಡಿ.ವೈ.ಎಸ್.ಪಿ. ಆದಂಥಹವರು ಬಂದು ಶ್ರೀ ಹನುಮೇಶ್ ನಾಯಕ್ ಎನ್ನುವವರು ಬಂದು ತಮ್ಮನ್ನು ಭೇಟಿಯಾಗುತ್ತಾರೆ ಎಂದು ಹೇಳುತ್ತಿದ್ದಾರೆ. ಯಾರು ಜೈಲಿನಲ್ಲಿ ಇರಬೇಕಾಗಿತ್ತೋ ಅಂತಹವರನ್ನು ಬಂಧನ ಮಾಡುವುದನ್ನು ಬಿಟ್ಟು, ಈ ವ್ಯಕ್ತಿ ಬಂದು ತಮ್ಮನ್ನು ಭೇಟಿಯಾಗುತ್ತಾರೆ ಎಂದು ಅವರ ಏಜೆಂಟ್‌ರಂತೆ ಕೆಲಸ ಮಾಡುತ್ತಿದ್ದರೆ ಇವತ್ತು ಪೊಲೀಸ್

ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ ಮತ್ತು ಈ ಪೊಲೀಸ್ ಅಧಿಕಾರಿಗಳಿಗೆ ಸರ್ಕಾರ ಯಾವ ರೀತಿಯ ಒತ್ತಡವನ್ನು ಅವರ ಮೇಲೆ ಹಾಕುತ್ತಿದೆ ಎಂಬುದಕ್ಕೆ ಇದು ಸಾಕ್ಷಿಯಾಗಿದೆ. ಆ ಪ್ರಭಾವೀ ನಾಯಕರು ಯಾರು ಎನ್ನುವುದು ಇಲ್ಲಿ ಇಂದು ಬಹಳಷ್ಟು ಪ್ರಾಮುಖ್ಯತೆಯನ್ನು ಹೊಂದಿದೆ. ಒಬ್ಬ ರಾಷ್ಟ್ರೀಯ ಪಕ್ಷದ ಅಧ್ಯಕ್ಷರು ಏನ್ರಿ ಈ ರೀತಿ ಎಲ್ಲಾ ಅವರ ಮೇಲೆ ಪತ್ರಿಕೆಯಲ್ಲಿ ಬಂದಿದೆ ಇವರೇ ಕೊಲೆ ಮಾಡಿದ್ದಾರೆಂದು ಬಂದಿದೆ, ಇವರೇ ಕೊಲೆ ಮಾಡಿದ್ದಾರೆಂದು ಆ ಮುದುಕಿ ಹೇಳಿದ್ದಾಳೆ ಎಂದು ಪೊಲೀಸರನ್ನು ಕೇಳಿದ್ದಕ್ಕೆ ಅವರು ಹೌದು ಸಾರ್ ಅವನು ಆರೋಪಿ ಇದ್ದಾನೆ ಆದರೆ ಅವರ ಮೇಲೆ ಪ್ರಭಾವ ಇದೆ ಸರ್ಕಾರ ಅವನ ಹಿಂದೆ ಇದೆ ಸಚಿವರೂ ಕೂಡ ಅವನ ಹಿಂದೆ ಇದ್ದಾರೆ ಎಂದು ಹೇಳಿದ್ದಾರೆ. ಅವರನ್ನು ಹಿಡಿದು ಒಳಗೆ ಹಾಕಿ ಎಂದು ಹೇಳಿದ 3–4 ದಿನಗಳಲ್ಲಿ ಅವರನ್ನು ಬಂಧನ ಮಾಡಿದ್ದಾರೆ. ಇಂತಹ ಪರಿಸ್ಥಿತಿಯೊಳಗೆ ಕೊಲೆ ಮಾಡಿದಂತಹವರಿಗೆ, ಹೆದರಿಕೆ ಹಾಕಿದಂಥಹವರಿಗೆ, ದುರಾಡಳಿತ ಮಾಡಿದಂತಹವರಿಗೆ, ಹೊಡೆದಂತಹವರಿಗೆ ಯಾರೂ ಕೂಡ ಹೊರಗೆ ಬರಬಾರದು ಎಂದು ಹೇಳಿದಂತಹ ಈ ಹನುಮೇಶ ನಾಯಕ್ ಇವರಿಗೆ ರಕ್ಷಣೆಯನ್ನು ನೀಡಬಾರದು. 2005 ರಲ್ಲಿಯೇ ಈ ಹನುಮೇಶ ನಾಯಕ್ ಹೆಸರು ಅವರ ರೌಡಿ ಷೀಟಿನಲ್ಲಿ ದಾಖಲಾಗಿದೆ. ಆದರೂ ಕೂಡ ಅವನು ಮತ್ತು ಅವನ ಹಿಂಬಾಲಕರು ಆ ಒಂದು ಪ್ರದೇಶದಲ್ಲಿ, ಆ ಒಂದು ಕ್ಷೇತ್ರದಲ್ಲಿ ಒಬ್ಬ ರಾಜಕೀಯ ಪ್ರಭಾವೀ ವ್ಯಕ್ತಿಯ ಒಂದು ಬಲಾಢ್ಯದಿಂದ ಇಂತಹ ಅನೇಕ ದುಷ್ಕೃತ್ಯವನ್ನು ಮಾಡಿ ಸರ್ಕಾರದಿಂದ ಬಂದಂತಹ ಸಂಪೂರ್ಣ ಅನುದಾನವನ್ನು ಲಪಟಾಯಿಸುವ ಕೆಲಸವನ್ನು ಈ ಹನುಮೇಶ್ ನಾಯಕ್ ಅವರು ಮಾಡುತ್ತಿದ್ದರು. ಜನವರಿ 10 ರಿಂದ ಹಿಡಿದು 4 ತಿಂಗಳವರೆಗೆ ಅಲ್ಲಿನ ಜನಪರ ಸಂಘಟನೆಗಳು ವಿದ್ಯಾರ್ಥಿಗಳು, ಆ ಸಮುದಾಯದ ಗುರುಗಳು ರಾಜಕೀಯ ಪಕ್ಷಗಳು ಇಂತಹವರು ಹೋಗಿ ತೀವ್ರವಾಗಿ ವಿರೋಧ ಮಾಡಿದಾಗ 18ನೇ ತಾರೀಖಿಗೆ ಅಂದರೆ 6 ತಿಂಗಳ ನಂತರ ಈ ಪ್ರಕರಣವನ್ನು ಸಿ.ಐ.ಡಿ. ತನಿಖೆಗೆ ವರ್ಗಾವಣೆ ಮಾಡಿದರು. ಮುಂದೆ ಬೆಳಗಾವಿಯಲ್ಲಿ ಅಧಿವೇಶನ ನಡೆಯುತ್ತದೆ ಇಲ್ಲಿ ಗಲಾಟೆಯಾಗಬಾರದು ಎಂಬ ಉದ್ದೇಶದಿಂದ ನಾವು ಸಿ.ಐ.ಡಿ.ಗೆ ಒಪ್ಪಿಸಿದ್ದೇವೆ ಎಂದು ಉತ್ತರ ಹೇಳುವುದಕ್ಕೆ ಏನಾದರೂ ಸರ್ಕಾರದವರು ಮಾಡಿದ್ದಾರೆಯೇ? ಒಂದು ವೇಳೆ ಅದು ಇಲ್ಲವೆಂದಾದರೆ, ಕೊಲೆ ಮಾಡಿದಂತಹವನನ್ನು 4 ತಿಂಗಳಿನವರೆಗೆ ಏಕೆ ಬಂಧನ ಮಾಡಲಿಲ್ಲ? ಆ ತಾಯಿ ಕೊಲೆ ಮಾಡಿದ ವ್ಯಕ್ತಿ ಇವನೇ ಎಂದು ದುಂಬಾಲು ಬಿದ್ದು ಹೇಳಿದರೂ ಕೂಡ ಆ ಕೊಲೆ ಮಾಡಿದವನನ್ನು ಏಕೆ ಬಂಧನ ಮಾಡಲಿಲ್ಲ? 2005ರಲ್ಲಿಯೇ ರೌಡಿಷೀಟಿನಲ್ಲಿ ಇದ್ದವನೇ ಈ ಕೊಲೆಯನ್ನು ನಾನೇ ಮಾಡಿದ್ದೇನೆ ಎಂದು ಆ ಊರಿನಲ್ಲಿ ಸಕ್ಕರೆಯನ್ನು ಹಂಚಿದ್ದಾನೆ. ಅಲ್ಲಿ ಯಾವ ರೀತಿಯ ವಾತಾವರಣ ಇರಬಹುದು ನೀವೇ ವಿಚಾರ ಮಾಡಿ. ಅಂತಹವನನ್ನು ಏಕೆ ಆರು ತಿಂಗಳಿನವರೆಗೆ ಹೊರಗೇ ಇಟ್ಟಿದ್ದಿರಿ ಎಂಬುದು ಇಲ್ಲಿ ಪ್ರಶ್ನೆ ಮಾಡಬೇಕಾದ ಅಂಶವಾಗಿದೆ.

ಮಾನ್ಯ ಸಭಾಪತಿಯವರೆ, ಅವನಿಗೆ ನಿಮ್ಮ ಸರ್ಕಾರದಲ್ಲಿನ ಯಾವ ಮಂತ್ರಿಗಳ ಬೆಂಬಲವಿತ್ತು? ಯಾವ ಗಣ್ಯ ವ್ಯಕ್ತಿಗಳ ಬೆಂಬಲವಿತ್ತು? ಆ ಮುದುಕಿಗೆ ದುಡ್ಡನ್ನು ಕೊಡಲು ಹೋದಾಗ ನನಗೆ ದುಡ್ಡು ಬೇಡ ನನ್ನ ಮಗನನ್ನು ತಂದು ಕೊಡಿ, ಕೊಲೆಗಡುಕರನ್ನು ಹಿಡಿದು ಶಿಕ್ಷೆ ಕೊಡಿ ಎಂದು ದೈನ್ಯತೆಯಿಂದ ಕೇಳಿದ್ದಾಳೆ. ಇಂತಹ ಅನೇಕ ವಿಚಾರಗಳನ್ನು ನಾವು ತೆಗೆದುಕೊಂಡಾಗ ಆರು ತಿಂಗಳುಗಳ ಕಾಲ ಅನಗತ್ಯವಾಗಿ ವಿಳಂಬ ಮಾಡಿದ್ದಾರೆಂದು ತಿಳಿದು ಬರುತ್ತದೆ. ಆ ಪ್ರಭಾವಿ ವ್ಯಕ್ತಿಗಳ ಒತ್ತಡಕ್ಕೆ ಮಣಿದು ಆರು ತಿಂಗಳುಗಳ ಕಾಲ ಅನಗತ್ಯವಾಗಿ ವಿಳಂಬವಾಗಿರುವುದರಿಂದ ಊರಿನಲ್ಲಿ ಒಂದು ಭಯಾನಕ ವಾತಾವರಣ ನಿರ್ಮಾಣವಾಗಿದೆ. ಅದರ ಜೊತೆಗೆ ಅಲ್ಲಿ ಯಾರು ಕೂಡ ಹೊರಗೆ ಬಂದು ಜೀವನವನ್ನು ಸಾಗಿಸಬಾರದು ಎನ್ನುವ ಪರಿಸ್ಥಿತಿಯೊಳಗಿದ್ದಾರೆ. ಅದರ ಜೊತೆಗೆ ಸಣ್ಣ ಹನುಮಂತಪ್ಪ ಎನ್ನುವವನು ಆ ಊರಿನಲ್ಲಿ ಇದ್ದವನು ಊರು ಬಿಟ್ಟು ಹೋಗಿದ್ದಾನೆ. ರೇಷನ್ ಅಂಗಡಿಯೊಳಗೆ ಕಾಳು ಕೊಡದಿದ್ದಕ್ಕಾಗಿ ಪ್ರತಿಭಟನೆ ಮಾಡಿದವನು ಊರು ಬಿಟ್ಟು ಸಿಂಧನೂರಿಗೆ ಹೋಗಿ ನೆಲೆಸಿದ್ದಾನೆ. ಆದಕಾರಣ ಅವನನ್ನು ಕರೆಯಿಸಿ, ನೀನು ಏಕೆ ಊರು ಬಿಟ್ಟಿದ್ದೀಯಾ? ಯಾವ ಕಾರಣಕ್ಕಾಗಿ ಊರು ಬಿಟ್ಟಿದ್ದಿಯಾ? ಯಾರ ಭಯಕ್ಕೆ ಊರು ಬಿಟ್ಟಿದ್ದಿಯಾ, ನಿನ್ನ ಕೊಲೆಯಾಗುವುದಿಲ್ಲ, ಸರ್ಕಾರ ನಿನ್ನ ಹಿಂದೆ ಇದೆ, ಸರ್ಕಾರದ ಆಡಳಿತ ನಿನ್ನ ಹಿಂದೆ ಇದೆ ಎಂದು ಕರೆದು ಅದೇ ಮನೆಯಲ್ಲಿ ವಾಸ್ತವ್ಯ ಮಾಡಲಿಕ್ಕೆ ಅನುಕೂಲವನ್ನು ಮಾಡಿಕೊಡಬೇಕು ಮತ್ತು ಅವರಿಂದ ಎಲ್ಲಾ ಮಾಹಿತಿಯನ್ನು ಪಡೆದುಕೊಳ್ಳಬೇಕು. ಇಲ್ಲಿ ಕೊಪ್ಪಳ ಜಿಲ್ಲೆಯಲ್ಲಿ ಪದೇ ಪದೇ ಬಹಳಷ್ಟು ಅಧಿಕಾರಿಗಳ ಮೇಲೆ ಇದೇ ರೀತಿಯ ಒತ್ತಡವನ್ನು ರಾಜಕಾರಣಿಗಳು ಹೇರುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹಿಂದೆ ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 'TulasiMaddineni' ಎಂಬ ಒಬ್ಬ ಐಎಎಸ್ ಅಧಿಕಾರಿ ಇದ್ದರು. ಅವರು ಪ್ರಭಾವಿ ನಾಯಕರ ವಿರುದ್ಧ ಧ್ವನಿ ಎತ್ತಿದಾಗ ನಾನು ಹೇಳಿದ ಹಾಗೆ ಕೇಳಬೇಕು, ನಾನು ಹೇಳಿದ ಹಾಗೆ ಮಾಡಲಿಲ್ಲವೆಂದರೆ ನಿನಗೆ ವರ್ಗಾವಣೆ ಮಾಡಿಸುತ್ತೇನೆಂದು ಹೇಳಿ ಅವರಿಗೆ ಹಿಂಬಡ್ತಿಯನ್ನು ಕೊಟ್ಟು ವರ್ಗಾವಣೆ ಮಾಡಿಸಿದಂಥ ಉದಾಹರಣೆಗಳು ಆ ಜಿಲ್ಲೆಯಲ್ಲಿನ ಪ್ರಭಾವಿ ನಾಯಕರಿಂದ ಆಗಿವೆ. ಅವರಿಗೆ ಹಿಂಬಡ್ತಿಯನ್ನು ಕೊಟ್ಟು ಬೇರೆಕಡೆಗೆ ವರ್ಗಾವಣೆಯನ್ನು ಮಾಡಿದಾಗ ತಮಗೆ ಗೊತ್ತಿದ್ದ ಹಾಗೆ ಡಿ.ಕೆ.ರವಿ ಎನ್ನುವಂಥ ಒಬ್ಬ ದಕ್ಷ ಅಧಿಕಾರಿಗಳು ಸಿ.ಇ.ಓ ಆಗಿದ್ದರು. ಅವರಿಗೆ ಚಾರ್ಜ್ ಕೊಡಿಸುವ ಬದಲು ಒಬ್ಬ ಕೆ.ಎ.ಎಸ್. ಅಧಿಕಾರಿಯಾಗಿದ್ದ ಗೋವಿಂದರೆಡ್ಡಿಯವರಿಗೆ ಅವರಿಂದ ಚಾರ್ಜ್ ಅನ್ನು ಸರ್ಕಾರದಿಂದ ಕೊಡಿಸಿದ್ದೀರಿ. ಏಕೆಂದರೆ ಗೋವಿಂದ ರೆಡ್ಡಿಯವರು ನೀವು ಹೇಳಿದ ಹಾಗೆ ಕೇಳುತ್ತಿದ್ದರು. ಡಿ.ಕೆ. ರವಿಯವರು ಸರ್ಕಾರದ ಬದ್ಧತೆಯಿಂದ ಕೆಲಸ ಮಾಡತಕ್ಕಂಥವರಿದ್ದರು. ಒಬ್ಬ ಐ.ಎ.ಎಸ್. ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳ ಇಂಚಾರ್ಜ್ ಅನ್ನು ಕೊಡುವುದರ ಬದಲು ಒಬ್ಬ ಕೆ.ಎ.ಎಸ್. ಅಧಿಕಾರಿಗೆ, ನಿಮ್ಮ ಮಾತಿಗೆ ತಕ್ಕಂತೆ ಕುಣಿಯತಕ್ಕಂಥ ಗೋವಿಂದರೆಡ್ಡಿಯವರಿಗೆ ನೀವು ಇಂಚಾರ್ಜ್ ಕೊಡಿಸಿದ್ದು ಜನರ

ಮನಸ್ಸಿನಲ್ಲಿ ಇನ್ನು ಮರೆಯಾಗಿಲ್ಲ. ಆ ಜಿಲ್ಲೆಯಲ್ಲಿ ಭಯಾನಕವಾದಂಥ ವಾತಾವರಣ ಇದೆ. ಏಳನೇ ಕ್ಲಾಸ್‌ಗೆ, ಎಸ್‌ಎಸ್‌ಎಲ್‌ಸಿಗೆ, ಪಿಯುಸಿಗೆ ಮಕ್ಕಳನ್ನು ಕಳುಹಿಸುವಾಗ ತಂದೆ ತಾಯಿಗಳು ಯಾರ ಬಗ್ಗೆ ನೀನು ಮಾತನಾಡಬೇಡ, ಊರಿನ ಬಗ್ಗೆ ಉಸಾಬರಿ ತೆಗೆಯಬೇಡ, ಮತ್ತೊಬ್ಬರ ಬಗ್ಗೆ ವಿಚಾರ ಮಾಡಬೇಡ, ದೇಶದ ಭಕ್ತಿಯನ್ನು ತೋರಿಸಬೇಡ, ನೀನು ಸುಮ್ಮನೆ ಕಣ್ಣು ಮುಚ್ಚಿಕೊಂಡು ಹೋಗಬೇಕು, ಕಿವಿಯಿಂದ ಅಷ್ಟೇ ಕೇಳಬೇಕು, ನೀನು ಬಿದ್ದರೂ ಸುಮ್ಮನೆ ಬಾ ದವಾಖಾನೆಯಲ್ಲಿ ನಿನ್ನ ಆಪರೇಶನ್ ಮಾಡಿಸುತ್ತೇವೆ, ವಾಪಸ್ ಬಾ ಎನ್ನುವಂಥ ಬುದ್ಧಿವಾದವನ್ನು ಹೇಳಿ ಕಳುಹಿಸುತ್ತಿದ್ದಾರೆ. ಈ ಏನು ದೌರ್ಜನ್ಯವನ್ನು ರಾಜಕಾರಣಿಗಳ ಬೆಂಬಲಿಗರು ಮಾಡುತ್ತಿದ್ದಾರೆ, ಅದರ ಹೆದರಿಕೆ ಇಡೀ ಕೊಪ್ಪಳ ಜಿಲ್ಲೆಯಲ್ಲಿದೆ. ಆದ್ದರಿಂದ ಇಡೀ ಕೊಪ್ಪಳ ಜಿಲ್ಲೆ ಪೂರ್ತಿ ವಾಕ್ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ. ಅಲ್ಲಿನ ವಾತಾವರಣ ಭಯಾನಕವಾಗಿದೆ. ನಮಗೆ ಸ್ವಾತಂತ್ರ್ಯ ಸಿಕ್ಕು 68 ವರ್ಷಗಳಾದರು ಕೂಡ ಕೊಪ್ಪಳ ಜಿಲ್ಲೆಯಲ್ಲಿನ ಜನರಿಗೆ ಸ್ವಾತಂತ್ರ್ಯ ಸಿಕ್ಕಿಲ್ಲ. ನೀವು ಆ ಭಾಗಕ್ಕೆ ಗೊತ್ತಿಲ್ಲದ ಸರ್ಕಾರದ ಅಧಿಕಾರಿಯನ್ನು ಆ ಗ್ರಾಮಕ್ಕೆ ಕಳುಹಿಸಿ ಕೊಡಿ ಮತ್ತು ಅಲ್ಲಿನ ವಾತಾವರಣದ ನಿಜ ಸಂಗತಿಯನ್ನು ತೆಗೆದುಕೊಳ್ಳಿ. ಆ ನಿಜ ಸಂಗತಿಯನ್ನು ತೆಗೆದುಕೊಂಡು ನಮ್ಮ ಮಕ್ಕಳು ಆ ಕ್ಷೇತ್ರದಲ್ಲಿ ಅಥವಾ ಆ ಭಾಗದಲ್ಲಿ ಶಾಲೆಗೆ ಹೋದರೆ ಏನಾಗುತ್ತಿತ್ತು ಎನ್ನುವ ಮನಸ್ಸಿನಲ್ಲಿರುವ ಭಾವನೆಗಳನ್ನು ಊಹಿಸಿದಾಗ ತಮಗೆ ಗೊತ್ತಾಗುತ್ತದೆ ಅಲ್ಲಿಯವರೆಗೆ ಅದು ಗೊತ್ತಾಗುವುದಿಲ್ಲ. ಕೆಲವೊಂದು ಸಾರಿ ಸತ್ಯ ಇದ್ದಿದ್ದು ಸುಳ್ಳು ಎಂದು ಅನೇಕ ಬಾರಿ ಹೇಳಿದಾಗ ನಾವು ಅದನ್ನು ಸುಳ್ಳು ಸುಳ್ಳು ಎಂದು ಅನೇಕ ಬಾರಿ ಹೇಳಿಕೊಂಡು ಹೋಗುತ್ತೇವೆ. ಆದಕಾರಣ ಅಲ್ಲಿ ಏನಾದರು ನ್ಯಾಯ ಕೊಡುವ ಹಾಗಿದ್ದರೆ, ಈ ರಾಜ್ಯದಲ್ಲಿ ಒಳ್ಳೆಯ ಆಡಳಿತವನ್ನು ನಡೆಸಬೇಕೆನ್ನುವಂಥದಿದ್ದರೆ, ಈ ರಾಜ್ಯದಲ್ಲಿ ಹೆಣ್ಣುಮಕ್ಕಳಿರಲಿ, ಮತ್ತೊಬ್ಬರಿರಲಿ, ಅವರೇನಾದರು ಬದುಕಬೇಕೆನ್ನುವಂಥದಿದ್ದರೆ, ಅಲ್ಲಿ ಮುಕ್ತ ವಾತಾವರಣವನ್ನು ಕಲ್ಪಿಸಬೇಕೆನ್ನುವಂಥದಿದ್ದರೆ ಏಕೆ ನಾಲ್ಕು ತಿಂಗಳುಗಳ ಕಾಲ ಆ ಕೊಲೆ ಪ್ರಕರಣವನ್ನು ಭೇದಿಸಲಿಕ್ಕೆ ಆಗಲಿಲ್ಲ. ಬಹಳಷ್ಟು ಬಾರಿ ಸರ್ಕಾರದವರು ನಮ್ಮ ಪೋಲಿಸರಿಗೆ ಶಕ್ತಿ ಇದೆ, ಚಾಣಾಕ್ಷತನ ಇದೆ, ಸಿ.ಬಿ.ಐ.ಗೆ ಏಕೆ ಒಪ್ಪಿಸಬೇಕು, ಸಿ.ಐ.ಡಿ.ಗೆ ಒಪ್ಪಿಸುತ್ತೇವೆಂದು, ನಮ್ಮ ಪೋಲಿಸರಿಗೆ ನೀವು ಆತ್ಮಸ್ಥೈರ್ಯವನ್ನು ತುಂಬಬೇಕೆಂದು ಹೇಳುತ್ತಿರುತ್ತಾರೆ. ನೀವು ಕೊಪ್ಪಳದ ಪೋಲಿಸರಿಗೆ ಆತ್ಮಸ್ಥೈರ್ಯವನ್ನು ತುಂಬಿ ಆತ ಯಾರ ಬೆಂಬಲಿಗನಾದರು ಇರಲಿ, ಎಷ್ಟೇ ಪ್ರಭಾವಿಯಾಗಿರಲಿ ಅವನನ್ನು ಹಿಡಿಯಿರಿ ಎಂದು ಏಕೆ ಹೇಳಲಿಲ್ಲ. ಕೊಲೆ ಮಾಡಿ ರಾಜಾರೋಷವಾಗಿ ಅಡ್ಡಾಡುವಂಥವರಿಗೆ ಬಿಟ್ಟು ಇವೊತ್ತು ತಮ್ಮ ಆಡಳಿತದ ವೈಖರಿ ಯಾವ ರೀತಿ ಇದೆ ಎನ್ನುವುದನ್ನು ತಾವು ವಿಚಾರಣೆಯನ್ನು ಮಾಡಬೇಕಾಗಿದೆ ಎನ್ನುವಂಥದ್ದನ್ನು ಹೇಳಬಯಸುತ್ತೇನೆ.

ಪತ್ರಿಕೆಗಳಲ್ಲಿ ಬಂದಂಥ ಕೆಲವು ವಿಷಯಗಳು ನನ್ನ ಹತ್ತಿರ ಇವೆ. ನೋಡಿ ಇಲ್ಲಿ ಆ ತಾಯಿ ಕಾಲು ಬೀಳುತ್ತಿರುವ ದೃಶ್ಯ ಇದೆ. ಆ ತಾಯಿ ಕಣ್ಣೀರು ಹಾಕುತ್ತಿರುವ ದೃಶ್ಯ ಇದೆ. ಆ ತಾಯಿ ನನ್ನ ಮಗನನ್ನು ತಂದುಕೊಡಿ ಎಂದು ಹೇಳುತ್ತಿದ್ದಾಳೆ. ಎರಡು ಮಕ್ಕಳು ಇದ್ದರೆ, ಒಬ್ಬ ಮಗನನ್ನು ಬೆಂಗಳೂರಿಗೆ ದುಡಿಯುವುದಕ್ಕೆ ಕಳುಹಿಸಿ ಅವರು ಶಾಲೆ ಕಲಿಸುವುದನ್ನು ಬಿಡಿಸಿ, ಇನ್ನೊಬ್ಬ ಮಗಳನ್ನು ಶಾಲೆ ಕಲಿಸುವುದನ್ನು ಬಿಡಿಸಿ ಈ ಒಬ್ಬ ಮಗ ದೊಡ್ಡ ಆಫೀಸರ್ ಆಗಲಿ, ಶಾಲೆ ಕಲಿಯಲಿ, ಸಮಾಜದ ಸೇವೆ ಮಾಡಲಿ, ನಾಡಿನ ಸೇವೆ ಮಾಡಲಿ ಎಂದು ಗುರಿ ಇಟ್ಟುಕೊಂಡಂಥ ಆ ತಾಯಿ ಕೊಲೆಯಾದಾಗಿನಿಂದ ಹಾಸಿಗೆ ಹಿಡಿದಿದ್ದಾಳೆ. ಇನ್ನು ಹನುಮೇಶ್ ನಾಯಕ್ ಎನ್ನುವವರನ್ನು ಏನು ಹಿಡಿದುಕೊಂಡು ಹೋಗಿದ್ದಾರೆ ಅವರಿಗೆ ಮಾತನಾಡಿಸಲಿಕ್ಕೆ ಜನ ಪ್ರತಿನಿಧಿಗಳು ಹೋಗುತ್ತಾರೆ. ಕೊಲೆ ಮಾಡಿಸಿದಂಥ ವ್ಯಕ್ತಿಗೆ ಜೈಲಿನಲ್ಲಿರತಕ್ಕಂಥ ವ್ಯಕ್ತಿಗೆ ಮಾತನಾಡಿಸಲಿಕ್ಕೆ ನಮ್ಮ ಜನ ಪ್ರತಿನಿಧಿಗಳು ಹೋಗುತ್ತಾರೆ. ಓಟ್ ಹಾಕಿಸಿಕೊಂಡು ಆರಿಸಿ ಬಂದು ನಿಮ್ಮನ್ನು ಉದ್ಧಾರ ಮಾಡುತ್ತೇವೆ, ನಿಮ್ಮನ್ನು ಕಾಯುತ್ತೇವೆ, ನಿಮ್ಮನ್ನು ಉದ್ಧಾರ ಮಾಡುತ್ತೇವೆನ್ನುವಂಥವರು ಹೋಗಿ ಆ ಕೊಲೆಗಡುಕರಿಗೆ ಮಾತನಾಡಿಸಿ ಬರುತ್ತಾರೆ. ಈ ರಾಜ್ಯದಲ್ಲಿ ಪ್ರತಿನಿತ್ಯಯಾರು ಹೆದರಿಕೆ ಇಲ್ಲದ ಹಾಗೆ ರಾಜಾರೋಷವಾಗಿ ಎಲ್ಲಾ ರೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ, ಕೊಲೆ ನಡೆದಿದೆ, ಸರಗಳ್ಳತನ ನಡೆದಿದೆ. ಇಂತಹ ನಾಯಕರು ಎಲ್ಲೋ ಒಂದು ಕಡೆ ಕೊಲೆಗಡುಕರಿಗೆ ದುರಾಚಾರ ನಡೆಸುವವರಿಗೆ ಸಂಪೂರ್ಣವಾಗಿ ಬೆನ್ನೆಲುಬಾಗಿ ನಿಂತಿದ್ದಾರೆ. ಆ ಕೊಲೆಗಡುಕರಿಗೆ ಬೆಂಬಲವಾಗಿ ನಿಂತಂಥವರು ಯಾರು? ಅವರನ್ನು ಸರ್ಕಾರ ಗುರುತಿಸಿ, ಮಂತ್ರಿಮಂಡಲದಲ್ಲಿರತಕ್ಕಂಥವರನ್ನು ಗುರುತಿಸಿ ಅವರು ರಾಜಕೀಯದಲ್ಲಿ ಎಷ್ಟೆ ಪ್ರಭಾವಿಗಳಿದ್ದರೂ ಕೂಡ ಕರ್ನಾಟಕ ರಾಜ್ಯದ ಜನತೆಗೆ ಒಂದು ನ್ಯಾಯವನ್ನು ಕೊಡುವುದರ ಸಲುವಾಗಿ ಅವರಿಗೆ ಸಂಪುಟದಿಂದ ಹೊರಗೆ ಇಡಬೇಕೆನ್ನುವ ದೃಷ್ಟಿಯಿಂದ ಇದನ್ನು ಪ್ರಸ್ತಾಪವನ್ನು ಮಾಡುತ್ತಿದ್ದೇನೆ. ಅದರ ಜೊತೆಗೆ ಎಲ್ಲಿ ಅನ್ಯಾಯವಾಗುತ್ತದೆ, ನಮ್ಮ ಪೋಲಿಸ್ ಇಲಾಖೆಗೆ ನೈತಿಕ ಶಕ್ತಿಯನ್ನು ಗೃಹ ಸಚಿವರು ಕೊಡಬೇಕು. ನಾನು ಇನ್ನು ಬಹಳಷ್ಟು ಉದಾಹರಣೆಗಳನ್ನು ಕೊಡಬಹುದು. ಒಂದು ಅಂಗಡಿಗೆ ಹೋಗಿ ಕಳ್ಳ ಕಳ್ಳತನ ಮಾಡಿದ ಮೇಲೆ ನಾವೆ ಹೋಗಿ ಅವರನ್ನು ಹಿಡಿದುಕೊಟ್ಟರು ಸಹಿತ ಪೋಲಿಸರು ಅವರಿಗೆ ಅರೆಸ್ಟ್ ಮಾಡುವುದಿಲ್ಲ. ಅದಕ್ಕೆ ಕಾರಣವೇನು? ಎಲ್ಲೋ ಒಂದು ಕಡೆ ಆಡಳಿತದ ವೈಫಲ್ಯ ಎದ್ದು ಕಾಣುತ್ತಿದೆ. ನಾವಾಗಿ ಹಿಡಿದುಕೊಟ್ಟರೆ ಅವರು ಅರೆಸ್ಟ್ ಮಾಡುವುದಿಲ್ಲ. ಅವರು ಕಳ್ಳತನ ಮಾಡಿದ ವಸ್ತುಗಳನ್ನು ಜಪ್ತಿ ಮಾಡುವುದಿಲ್ಲ, ಇವೊತ್ತು ಇಂತಹ ಅನೇಕ ವಿಚಾರಗಳು ನಮ್ಮ ಜನರಿಗೆ ಇವೆ. ಮಾನ್ಯ ಸಭಾಪತಿಯವರೆ, ಸರ್ಕಾರದವರು ಸಿ.ಐ.ಡಿ.ಗೆ ಕೇಸ್ ಅನ್ನು ವಹಿಸಿ ಕೈ ತೊಳೆದುಕೊಂಡರು.ಆ ತಾಯಿಗೆ ನೀವೇನಾದರು ಮಗನನ್ನು ತಂದು ಕೊಡುವುದಕ್ಕೆ ಸಾಧ್ಯವಿದೆಯೇ? ಅಥವಾ ನೀವು ಹೋಗಿ ಕೊಲೆಯಾಗಿದ್ದಕ್ಕಾಗಿ ಸಾಂತ್ವನ ಹೇಳಿದ್ದೀರಾ? ಭೇಟಿಕೊಟ್ಟಿದ್ದೀರಾ? ಹೀಗಾಗದ ಹಾಗೆ ನೋಡಿಕೊಳ್ಳುತ್ತೇವೆಂದು ಹೇಳಿದ್ದೀರಾ?

ಜನರಿಗೆ ಏನಾದರು ಧೈರ್ಯ ತುಂಬಿದ್ದೀರಾ? ಕೊಲೆಯಾದಂಥ ತಾಯಿಯ ಕುಟುಂಬಕ್ಕೆ ಹೋಗದೆ ಜೈಲಿಗೆ ಹೋಗಿ ಕೊಲೆಗಡುಕರನ್ನು ಮಾತನಾಡಿಸಿ ಬರುತ್ತೀರೆಂದರೆ ಎಷ್ಟು ನಾಚಿಕೆಗೇಡುತನದ ಪರಮಾವಧಿ ಇರಬಹುದೆಂದು ತಾವು ಯೋಚನೆ ಮಾಡಿ. ನಮ್ಮ ಮಕ್ಕಳಾದರೆ ನಾವು ಯಾವ ರೀತಿ ಗೋಗರೆಯುತ್ತಿದ್ದೆವು ಎಂದು ಸ್ವಲ್ಪಯೋಚನೆ ಮಾಡಿ. ಸತ್ತರೆ ಸಾಯಿಲಿ ಬಿಡಿ, ಕೊಲೆಯಾದರೆ ಕೊಲೆಯಾಗಲಿ ಬಿಡಿ ಎಂದು ಹೇಳಿದರೆ ಹೇಗೆ? ಒಬ್ಬ ವಿದ್ಯಾರ್ಥಿ ಭವಿಷ್ಯದ ಕನಸನ್ನು ಕಂಡು ಏನೋ ಒಂದು ಕಟ್ಟೆಯನ್ನು ಕಟ್ಟಬೇಕೆನ್ನುವ ಭವಿಷ್ಯ ಇಟ್ಟುಕೊಂಡು, ಎಷ್ಟು ಬಾರಿ ಎಎಸ್ಐಗಳಿಗೆ ದೂರವಾಣಿ ಮಾಡಿದ್ದಾನೆಂದು ದಯಮಾಡಿ ಅವನ ಫೋನ್ ಅನ್ನು ತೆಗೆದು ನೋಡಿ. ಮತ್ತಿಕಟ್ಟೆ ಅಣ್ಣವರೆ, ಅವನು ಬಹಳಷ್ಟು ಬಾರಿ ಪೋಲಿಸ್ ಠಾಣೆಗೆ ಫೋನ್ ಮಾಡಿ ನನ್ನ ಕೊಲೆ ಮಾಡಬಹುದು, ನನಗೆ ಹೊಡೆಯಬಹುದೆಂದು ಹೇಳಿದ್ದಾನೆ.

(4.30 ಗಂಟೆಗೆ)

ಸನ್ಮಾನ್ಯ ಸಭಾಪತಿಯವರೆ, ತನ್ನ ಆರೆಂಟು ಜನ ಸ್ನೇಹಿತರಿಗೆ ದೂರವಾಣಿ ಕರೆಯನ್ನು ಮಾಡಿದ್ದಾನೆ. ಅವರ ಚಿತ್ರವನ್ನು ತನ್ನ ಮೊಬೈಲ್‌ನಲ್ಲಿ ತೆಗೆದಿದ್ದಾನೆ. ಇದನ್ನು ಯಾರು ಕೇಳುತ್ತಾರೆ? ಬಡವರು ಯಾರನ್ನು ಕೇಳಬೇಕೆಂದು ಹೇಳಿ. ಸರ್ಕಾರದವರು ಬಡವರು ಸಾಯಬಾರದೆಂದು ಅಕ್ಕಿಯನ್ನು ಉಚಿತವಾಗಿ ಕೊಡುತ್ತಿದ್ದಾರೆ. ಅವರಿಗೆ ಅಕ್ಕಿಯನ್ನು ಕೊಟ್ಟು ಬದುಕಿಸಿ, ದೌರ್ಜನ್ಯ ಮಾಡಿ, ಕೊಲೆ ಮಾಡುವುದಕ್ಕಾಗಿ ಏನಾದರು ಸರ್ಕಾರದವರು ಉಚಿತವಾಗಿ ಅಕ್ಕಿಯನ್ನು ಕೊಡುತ್ತಿದ್ದಾರೆಯೇ? ಇದನ್ನು ಮಾತನಾಡಿದರೆ ರಾಜಕಾರಣವಾಗಬಹುದು. ಆದರೆ ಇದನ್ನು ನಾನು ಬಹಳ ನೋವಿನಿಂದ ಮಾತನಾಡುತ್ತಿದ್ದೇನೆ. ಎಲ್ಲಿಯೋ ಒಂದು ಕಡೆ ಒಳ್ಳೆಯ ಕೆಲಸವನ್ನು ಮಾಡತಕ್ಕಂಥವರಿಗೆ ಬದುಕುವುದಕ್ಕೆ ಬಿಡಿ. ಇಂತಹ ಹತ್ತಾರು ಯುವಕರದು ಎಲ್ಲಿ ಎಲ್ಲಿಯೋ ಕೊಲೆಯಾಗುತ್ತಿದೆ. ಅನ್ಯಾಯದ ವಿರುದ್ಧ ಧ್ವನಿ ಎತ್ತಿದರೆ, ಸೇಡನ್ನು ತೀರಿಸಿಕೊಳ್ಳುತ್ತಾರೆ. ದಯಮಾಡಿ ಸರ್ಕಾರದಲ್ಲಿರುವಂಥವರು ತಮ್ಮ ಮನಸ್ಸಿನಲ್ಲಿಯೇ ನನ್ನ ಮಗನಿಗೆ ಏನಾದರು ಈ ರೀತಿಯಾಗಿದ್ದರೆ ನನ್ನ ಕುಟುಂಬಕ್ಕೆ ಏನಾದರು ಈ ರೀತಿಯಾಗಿದ್ದರೆ ನಾನೇನು ಮಾಡುತ್ತಿದ್ದೆ ಎನ್ನುವುದನ್ನು ಒಂದು ನಿಮಿಷ ಇಲ್ಲಿ ಇದ್ದಂಥವರೆಲ್ಲರೂ ತಮ್ಮ ಮನಸ್ಸಿಗೆ ತಂದುಕೊಂಡರೆ ಮುಂದಿನ ದಿನಗಳಲ್ಲಿ ಇಂತಹ ಅನಾಹುತಗಳಿಗೆ ಕಾರಣವಾಗುವುದಿಲ್ಲ. ಅದು ಆಗಬಾರದೆಂದು ತಮ್ಮ ಮುಖಾಂತರ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಸರ್ಕಾರ ಇನ್ನಾದರು ಎದ್ದೇಳಲಿ. ಎಲ್ಲಿ ಅನಾಹುತವಾಗುತ್ತಿರುವುದು ನಿಲ್ಲಲಿ. ಎಲ್ಲಿ ಕೊಲೆಯಾಗುತ್ತದೆ, ಯಾರು ಕೊಲೆ ಮಾಡಿರುತ್ತಾರೆ ಅವರನ್ನು ಬಂಧಿಸಲಿ. ಎಲ್ಲಿ ಕಳವು ಆಗುತ್ತದೆಯಾರು ಕಳ್ಳತನ ಮಾಡಿರುತ್ತಾರೆ ಅವರನ್ನು ಹಿಡಿದು ಕೊಟ್ಟವರಿಗೆ ಶಿಕ್ಷೆಯಾಗುವಂತೆ ಮಾಡಲಿ. ಕಳ್ಳತನದಿಂದ ಕಳೆದುಕೊಂಡವರಿಗೆ ಅದನ್ನು ವಾಪಸ್ಸು

ಕೊಡುವಂತಹ ಕೆಲಸವಾಗಲಿ. ಇದರಲ್ಲಿ ಯಾರೇ ಪ್ರಭಾವಿ ವ್ಯಕ್ತಿಗಳಿದ್ದರೂ ಕೂಡ ನೀನು ಮಾಡತಕ್ಕಂಥದ್ದು ಸರಿಯಲ್ಲವೆಂದು ಹೇಳಿ. ಸರ್ಕಾರದ ನಿಯಮಾವಳಿಗಳ ಪ್ರಕಾರ ಶಿಕ್ಷೆಯಾಗಲಿ. ಹಿಂದೆ ನಮ್ಮ ಹಳ್ಳಿಯ ನಮ್ಮ ಮನೆಗಳಲ್ಲಿ ಏನು ಮಾತನಾಡುತ್ತಿದ್ದರು ಎಂದರೆ, ಒಂದು ಒಳ್ಳೆಯ ಗೆಳೆತನವನ್ನು ಮಾಡಿದರೆ ಅಥವಾ ಒಳ್ಳೆಯ ಕುಟುಂಬದಲ್ಲಿ ಯಾರಾದರು ಇದ್ದರೆ ಅವನು ಏನಾದರು ತಪ್ಪು ಮಾಡಿದರೆ ನೀನು ತಪ್ಪು ಮಾಡುತ್ತಿದ್ದೀಯ, ತಪ್ಪು ಮಾಡಬಾರದೆಂದು ಹೇಳಿ, ಒಳ್ಳೆಯ ಗೆಳೆತನವನ್ನು ರೂಪಿಸುವಂತಹ ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದರು. ಇವತ್ತಿನ ದಿವಸ ಸಮಾಜ ಆ ರೀತಿಯಾಗಿಲ್ಲ. ಇವತ್ತು ಸರ್ಕಾರ ಆ ರೀತಿಯಾಗಿ ಇಲ್ಲ. ಇವತ್ತು ಸಮುದಾಯ ಆ ರೀತಿಯಾಗಿಲ್ಲ. ಏನಾಗಿದೆ ಎಂದರೆ ನೀನು ಮಾಡುತ್ತಿರುವುದು ಥಲೋ ಇದೆ ಅದನ್ನೇ ಮಾಡು ಎಂದು ಹೇಳುತ್ತಿದ್ದಾರೆ. ಹೀಗಾಗಿ ಏನಾಗಿದೆ ಎಂದರೆ, ಎಲ್ಲಿಯೋ ಒಂದು ಕಡೆ ಒಂದು ಸಮುದಾಯ ಹೆದರುತ್ತಿದೆ. ಅವನನ್ನು ತೆಗೆದರೆ ಸರ್ಕಾರ ಎಲ್ಲಿ ಉಳಿಯುತ್ತದೆಯೋ, ಇಲ್ಲವೋ, ಆ ಪ್ರಭಾವಿ ವ್ಯಕ್ತಿಗಳನ್ನು ಕಸ್ಟಡಿಗೆ ಕಳುಹಿಸಿದರೆ ಎಲ್ಲಿ ನಮ್ಮಗಳ ಹೆಸರು ಬರುತ್ತದೆಯೋ, ಕಳ್ಳತನವನ್ನು ಮಾಡಿ, ಮಾಡಿ ಹಂಚಿಕೊಳ್ಳುವ ಮುನ್ನ ಹೊಡೆದಾಡುವಂತಹ ಪರಿಸ್ಥಿತಿ ಈ ರಾಜ್ಯಕ್ಕೆ ಮತ್ತು ಈ ದೇಶಕ್ಕೆ ಬಂದಿದೆ. ತಮ್ಮ ಮುಖಾಂತರ ಸರ್ಕಾರಕ್ಕೆ ಕೈ ಮುಗಿದು ಹೇಳುವುದೇನೆಂದರೆ, ಅವನು ಸತ್ತಿರುವವನು ಶ್ರೀಮತಿ ಕೆಂಚಮ್ಮನ ಮಗ ಮಾತ್ರವಲ್ಲ. ಸತ್ತಿರುವಂಥವನು ಎಲ್ಲರ ಮಗನೆಂದು ತಿಳಿದು ಅವರ ಕುಟುಂಬಕ್ಕೆ ನ್ಯಾಯವನ್ನು ಒದಗಿಸಿಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಇವತ್ತು ಕೊಪ್ಪಳ ಜಿಲ್ಲೆಯ ಕನಕಗಿರಿ ವಿಧಾನಸಭಾ ಕ್ಷೇತ್ರದಲ್ಲಿ ಕನಕಪುರದ ಯಲ್ಲಾಲಿಂಗ ಎನ್ನುವಂತಹ ಪಿ.ಯು.ಸಿ.ಯನ್ನು ಓದುತ್ತಿದ್ದಂತಹ ವಿದ್ಯಾರ್ಥಿಯ ಕೊಲೆಯಾಗಿರುವುದರ ಬಗ್ಗೆ ಅದರ ಹಿನ್ನಲೆ ಮತ್ತು ಆ ನಿಟ್ಟಿಯಲ್ಲಿ ನಾವೆಲ್ಲರೂ ಚರ್ಚೆಯಲ್ಲಿ ಪಾಲ್ಗೊಂಡಿರುತ್ತೇವೆ. ಈ ವಿಷಯ ಸಾರ್ವಜನಿಕ ಮಹತ್ವದ್ದು ಅಲ್ಲವೋ ಎನ್ನುವುದನ್ನು ಮೊದಲು ಸಭಾಪತಿಯವರೆ ಚರ್ಚೆಗೆ ತೆಗೆದುಕೊಂಡಾಗ ಇವತ್ತು ಹೊಲ–ಮನೆಗಾಗಿ ಜಗಳವಾಡಿ ಕೊಲೆಯಾಗಿದ್ದರೆ ಅದರ ಬಗ್ಗೆ ಯಾರೂ ಕೂಡ ಅದು ಸಾರ್ವಜನಿಕವಾದಂತಹ ಮಹತ್ವದ ವಿಷಯ ಎಂದು ಹೇಳುವುದಕ್ಕಾಗುವುದಿಲ್ಲ. ಅಥವಾ ವೈಯಕ್ತಿಕ ಹಿತಾಸಕ್ತಿ ಗೋ ಯಾವುದೋ ಕಾರಣಕ್ಕೋ ಯಾರಾದರು ಸತ್ತಿದ್ದರೆ ಸಾರ್ವಜನಿಕವಾದಂತಹ ವಿಷಯವಾಗುವುದಿಲ್ಲ. ಆದರೆ ಇವತ್ತು ಈ ಕಾಲೇಜು ವಿದ್ಯಾರ್ಥಿ ಸತ್ತಿರುವುದು. ಸಾರ್ವಜನಿಕವಾದಂತಹ ಕಾಳಜಿಗಾಗಿ. ಅಲ್ಲಿ ನಡೆಯುತ್ತಿದ್ದಂತಹ ಭ್ರಷ್ಟಾಚಾರದ ಬಗ್ಗೆ, ಅಲ್ಲಿ ಆಗಿರತಕ್ಕಂತಹ ದುರ್ವ್ಯವಹಾರಗಳ ಬಗ್ಗೆ, ಆ ಪಂಚಾಯಿತಿ ವ್ಯಾಪ್ತಿಯೊಳಗೆ ಆಗಿರತಕ್ಕಂತಹ ಅನ್ಯಾಯಗಳ ಬಗ್ಗೆ ಏನು ಅವನು ಜನವರಿ 6ನೇ ತಾರೀಖು ಬೈಟ್ ಕೊಟ್ಟ, ಬೈಟ್ ಕೊಟ್ಟ ನಂತರ ಮತ್ತೆ ಅವತ್ತಿನ ದಿವಸವೇ ಒಂದು ಮುದುಕಿ ಕೂಡ ಬೈಟ್ ಕೊಡುತ್ತಾಳೆ. ಆ ಭಾಗದಲ್ಲಿ

ಅನ್ಯಾಯವಾಗುತ್ತದೆ ಎನ್ನುವುದರ ಬಗ್ಗೆ ಒಂದು ವಿಶೇಷವಾದಂತಹ ಬೈಟ್ ಕೊಡುತ್ತಾಳೆ. ಆ ಬೈಟ್ ಅನ್ನು ನೋಡಿದಂತಹ ಏನು ಅದರಲ್ಲಿ ಪಾಲ್ಗೊಂಡಂತಹ ಕುಂಬಳಕಾಯಿ ಕಳ್ಳ ಎಂದರೆ ಹೆಗಲು ಮುಟ್ಟಿ ನೋಡಿಕೊಂಡ ಎನ್ನುವಂತಹ ರೀತಿಯಲ್ಲಿ ಇದರಲ್ಲಿ ಪಾಲ್ಗೊಂಡಿರತಕ್ಕಂತಹ ಆನೇಕ ಆ ಭ್ರಷ್ಟಾಚಾರದಲ್ಲಿ ತೊಡಗಿದಂತಹ ಆ ಭಾಗದ ಅಲ್ಲಿಯ ರೌಡಿ ಶೀಟ್‌ನಲ್ಲಿರತಕ್ಕಂತಹ, ಅದರಲ್ಲಿ ವಿಶೇಷವಾಗಿ ಅವರು ರೌಡಿಗಳೆ ಇರಬಹುದು. ಅವರು ಇವತ್ತು ಇದೆಲ್ಲಕ್ಕೂ ಈ ಹುಡುಗನನ್ನು ಮಟ್ಟ ಹಾಕಲಿಲ್ಲ ಎಂದರೆ, ಮುಂದೆ ಇವನು ಇಲ್ಲಿ ನಮ್ಮನ್ನು ಉಳಿಯುವುದಕ್ಕೆ ಕೊಡುವುದಿಲ್ಲ ಎನ್ನುವ ಕಾರಣಕ್ಕಾಗಿ 9ನೇ ತಾರೀಖು ಅವನಿಗೆ ಸಹಜವಾಗಿ ಬೆದರಿಕೆಯನ್ನು ಕೊಡುತ್ತಾರೆ. ಬರೀ ಅವನಿಗೆ ಮಾತ್ರವಲ್ಲ. ಅವನ ಮನೆಗೂ ಕೂಡ ಬೇದರಿಕೆ ಕರೆಗಳನ್ನು ಮಾಡುತ್ತಾರೆ. 10ನೇ ತಾರೀಖಿನಂದು ಸಹಜವಾಗಿ ಅವನು ಕಾಲೇಜಿಗೆ ಹೋಗತಕ್ಕಂತಹ ಸಂದರ್ಭದಲ್ಲಿಇದರ ಬಗ್ಗೆ ನನ್ನ ಸನ್ಮಿತ್ರರಾದವರು ಹೇಳಿದ್ದಾರೆ. ಆದುದರಿಂದ ನಾನು ಮತ್ತೆ ಅದರ ವಿವರಣೆಗಳಿಗೆ ಹೋಗುವುದಿಲ್ಲ. ಅಲ್ಲಿ ಅವನನ್ನು ಅಟ್ಟಾಡಿಸಿ ಕೊಲೆ ಮಾಡಿ, ರೈಲ್ವೆ ಹಳಿಯ ಮೇಲೆ ಹಾಕಿ ಹೋಗುತ್ತಾರೆ. ಅವನು ಡೆತ್ ನೋಟ್‌ನ್ನು ಕೂಡ ಇಟ್ಟುಕೊಂಡಿರುತ್ತಾನೆ. ಇವತ್ತಿನ ದಿವಸ ಯಾವುದೇ ವಾಹನಕ್ಕೆ ನಂಬರ್ ಪ್ಲೇಟ್ ಇಲ್ಲ ಎಂದರೆ ನಮ್ಮ ಗೃಹ ಇಲಾಖೆಯ ಪೊಲೀಸ್ ಅಧಿಕಾರಿಗಳು ಮತ್ತು ಸಂಬಂಧಪಟ್ಟಂತಹ ಅಧಿಕಾರಿಗಳು ತಕ್ಷಣ 24 ತಾಸಿನಲ್ಲಿ ಹಿಡಿಯುತ್ತಾರೆ. ಬೆಂಗಳೂರಿನಲ್ಲಿ ಏನಾದರು ಅನಾಹುತವಾದರೆ 24 ಗಂಟೆಗಳ ಒಳಗೆ ಆರೋಪಿಗಳನ್ನು ಹಿಡಿದು ತಂದು ಕೋರ್ಟ್ ಕಸ್ಟಡಿಗೆ ಕೊಡುತ್ತಾರೆ. ಆದರೆ ಇದರ ಬಗ್ಗೆ ಪುರಾವೆ, ಸಾಕ್ಷಿಗಳು ಇದ್ದರೂ ಕೂಡ, ಕೊಲೆಯಾದಂತಹ ವಿದ್ಯಾರ್ಥಿ ಅವತ್ತಿನ ದಿವಸ ತನ್ನನ್ನು ಬೆನ್ನು ಹತ್ತಿದಂತಹ ರೌಡಿಗಳ ಬಗ್ಗೆ ಮೊಬೈಲ್‌ನಲ್ಲಿ ಮಾಹಿತಿಯನ್ನುತನ್ನ 7–8 ಸ್ನೇಹಿತರಿಗೆ ಮತ್ತು ಪೊಲೀಸ್‌ನವರಿಗೆ ಕೊಡುತ್ತಾನೆ. ಇದು ಅಧಿಕೃತವಾಗಿದೆ ಎಂದು ನಾನು ಹೇಳುತ್ತಿಲ್ಲ. ಆದರೆ ಪತ್ರಿಕೆಗಳಲ್ಲಿ ವರದಿಯಾಗಿರುವುದನ್ನು ಹೇಳಿದ್ದೇನೆ. ಇವತ್ತು ಸುವರ್ಣ ಚಾನೆಲ್‌ನಲ್ಲಿಯೂ ಕೂಡ ಆ ಹುಡುಗ ಇವತ್ತು ನನ್ನನ್ನು ಬೆನ್ನತ್ತಿ ಕೊಲೆ ಮಾಡುವುದಕ್ಕೆ ಬಂದಿದ್ದಾರೆ ಎನ್ನುವಂತಹ ಮಾಹಿತಿಯನ್ನು ಕೂಡ ಕೊಟ್ಟಿದ್ದಾನೆ. ಇಷ್ಟೆಲ್ಲಾ ಮಾಹಿತಿಗಳಿದ್ದರೂ ಕೂಡ ಇವತ್ತು ಅದನ್ನು ಆತ್ಮಹತ್ಯೆ ಎಂದು ಹೇಳಿ ರೈಲ್ವೆ ಪೊಲೀಸ್‌ನವರು ಮುಚ್ಚಿದ್ದಾರೆಂದು ಹೇಳಿದರೆ ನಮ್ಮ ಆಡಳಿತ ವ್ಯವಸ್ಥೆ ಎಷ್ಟರ ಮಟ್ಟಿಗೆ ಜನಸಾಮಾನ್ಯನಿಗೆ ರಕ್ಷಣೆಯನ್ನು ಕೊಡಬಹುದು ಎನ್ನುವುದನ್ನು ನಾವೆಲ್ಲರೂ ಯೋಚನೆ ಮಾಡಬೇಕಾಗುತ್ತದೆ. ಬರೀ ಯಾರೋ ಯಲ್ಲಾಲಿಂಗ ಇನ್ನೊಂದು ಎಂದು ಹೇಳಿಕೆಯಲ್ಲ. ಗೃಹ ಮಂತ್ರಿಗಳು ಕೂಡ ಇದರ ಬಗ್ಗೆ ಬಹಳ ಸ್ಪಷ್ಟವಾಗಿ ಹೇಳಲೇಬೇಕಾಗುತ್ತದೆ. ಇಷ್ಟೆಲ್ಲಾ ಸಾಕ್ಷಿಗಳು ಇದ್ದಾಗಲೂ ಕೂಡ ಆತ್ಮಹತ್ಯೆ ಎಂದು ಇದನ್ನು ಮುಚ್ಚಿಡತಕ್ಕಂಥದ್ದು ಎಷ್ಟರ ಮಟ್ಟಿಗೆ ಈ ರಾಜ್ಯದಲ್ಲಿ ನ್ಯಾಯ ಸಿಗುತ್ತದೆ ಎನ್ನುವುದಕ್ಕೆ ಇದೊಂದು ಸಾಕ್ಷಿ. ಇವತ್ತು ಮಾನ್ಯ ಸಭಾಪತಿಯವರೆ, ಯಲ್ಲಾಲಿಂಗ ಕೊಲೆ ನಡೆದು ತಕ್ಷಣ ನ್ಯಾಯ ಸಿಕ್ಕಿದ್ದರೆ ನಾವ್ಯಾರು

ಇದನ್ನು ಚರ್ಚೆ ಮಾಡುವಂತಹ ಅವಶ್ಯಕತೆ ಇಲ್ಲಿ ಇರುತ್ತಿರಲಿಲ್ಲ. ಒಟ್ಟಾರೆ ಈ ರಾಜ್ಯದಲ್ಲಿ ಶಾಂತಿಕದಡಿದೆ. ಇವತ್ತು ಕಾನೂನಿನ ವ್ಯವಸ್ಥೆ ಹದಗೆಟ್ಟಿದೆ ಇವತ್ತು ಸಾಮಾನ್ಯ ಜನರು ನೆಮ್ಮದಿಯಿಂದ ಬದುಕುವಂತಹ ಪರಿಸ್ಥಿತಿ ಇಲ್ಲಿ ಇಲ್ಲ ಎನ್ನುವುದನ್ನು ನಾನು ಹೇಳಲೇಬೇಕಾಗುತ್ತದೆ. ಆ ಕಾರಣಕ್ಕಾಗಿ ಯಲ್ಲಾಲಿಂಗ ಕೊಲೆಯಾಗಿರುವುದು ಸಾಂಕೇತಿಕವಾಗಿದೆ. ಅಲ್ಲಿರತಕ್ಕಂತಹ ವ್ಯವಸ್ಥೆಗಳು ಒಬ್ಬ ರೌಡಿಶೀಟರ್ ಮತ್ತು ಈಗಾಗಲೇ ಅವರು ಹೇಳಿರುವಂತೆ ಅಲ್ಲಿರತಕ್ಕಂತಹ ಒಂದು ನ್ಯಾಯಬೆಲೆ ಅಂಗಡಿಯಲ್ಲಿ ಅನ್ಯಾಯಗಳನ್ನು ಬಹಿರಂಗವಾಗಿ ಚರ್ಚೆ ಮಾಡಿದಾಗ ಅವನನ್ನು ಕೂಡ ಅಟ್ಟಾಡಿಸಿ ಹೊಡೆದು ಅವನ ಮನೆಗೆ ಬೆಂಕಿ ಹಚ್ಚುವಂಥದ್ದು, ಅಲ್ಲಿ ನಡೆಯುತ್ತಿದೆ ಎಂದರೆ ಎಷ್ಟರ ಮಟ್ಟಿಗೆ ಕಾನೂನು ರಕ್ಷಣೆ ಇದೆ ಎನ್ನುವುದನ್ನು ನಾವೆಲ್ಲರೂ ಕೂಡ ಆಲೋಚನೆ ಮಾಡಬೇಕಾಗಿದೆ. ಇವತ್ತು ಯಾವ ವ್ಯವಸ್ಥೆ ರಾಜ್ಯದಲ್ಲಿ ಇದೆ ಎನ್ನುವುದನ್ನು ನಾವೆಲ್ಲರೂ ಕೂಡ ಆಲೋಚನೆ ಮಾಡಬೇಕಾದಂತಹ ಸಂದರ್ಭವೆಂದು ಹೇಳುತ್ತಾ ಒಟ್ಟಾರೆ ಯಲ್ಲಾಲಿಂಗ ಒಬ್ಬ ಬಡ ವಿದ್ಯಾರ್ಥಿ, ನ್ಯಾಯಕ್ಕಾಗಿ ಹೋರಾಟ ಮಾಡಿದಂತಹ ಸಂದರ್ಭದೊಳಗೆ ಇವತ್ತು ದುಷ್ಟರ ಮತ್ತು ರೌಡಿಗಳ ಕೈಯಲ್ಲಿ ಸಿಕ್ಕಿ ಸಾಯುವುದರ ಜೊತೆಗೆ, ಇಲ್ಲಿಯೂ ಕೂಡ ನ್ಯಾಯ ಸಿಗುತ್ತಿಲ್ಲ ಎನ್ನುವುದಾದರೆ ಇದು ಜನವರಿ ತಿಂಗಳಿನಲ್ಲಿ ಆಗಿರುವಂಥದ್ದು. ಈಗಾಗಲೇ 5–6 ತಿಂಗಳುಗಳಾಗುತ್ತಿದೆ. ಎಷ್ಟರ ಮಟ್ಟಿಗೆ ನಮ್ಮ ಕಾನೂನು ಇದೆ. ಇವತ್ತು ಪೊಲೀಸ್‌ನವರು ಮತ್ತು ಯಾರೇ ಸಂಬಂಧಪಟ್ಟಂತಹ ಅಧಿಕಾರಿಗಳು ಇರಲಿ. ತಪ್ಪಿತಸ್ಥರ ಮೇಲೆ ತೀವ್ರವಾದಂತಹ ಕ್ರಮವಾಗಬೇಕು. ಅಲ್ಲಿ ಯಾರು ರೌಡಿಗಳಿಗೆ ರಕ್ಷಣೆಯನ್ನು ಕೊಡುತ್ತಾರೆಯೋ ಅವರ ಮೇಲೆಯೂ ಕೂಡ ಕ್ರಮವಾಗಲೇಬೇಕಾಗುತ್ತದೆ. ಹೀಗಾಗಿ ಒಟ್ಟಾರೆ ಯಲ್ಲಾಲಿಂಗ ಸಾಂಕೇತಿಕವಾಗಿ ಒಬ್ಬ ವ್ಯಕ್ತಿಯಾಗಿದ್ದು, ಆ ಭಾಗದಲ್ಲಿ ನಡೆಯುತ್ತಿರುವಂತಹ ದೌರ್ಜನ್ಯಗಳು ಮತ್ತು ಈ ರೌಡಿತನದ ವಿಚಾರಗಳಿವೆ ಅವುಗಳನ್ನು ನಾವೆಲ್ಲರೂ ಮೆಟ್ಟಿ ಅವುಗಳನ್ನು ಮಟ್ಟ ಹಾಕಬೇಕಾಗಿದ್ದರೆ ಇವತ್ತು ಸರ್ಕಾರ ಕಣ್ಣುತೆರೆಯಬೇಕಾಗುತ್ತದೆ. ಇವತ್ತು ಜನರಿಗೆ ರಕ್ಷಣೆಯನ್ನು ಕೊಡಬೇಕಾಗುತ್ತದೆ. ಈ ರೀತಿಯ ಅನಾಹುತಗಳನ್ನು ಈ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇದು ಕರ್ನಾಟಕ ರಾಜ್ಯ ವಿಶೇಷವಾಗಿ ಶಾಂತಿಗೆ, ನೆಮ್ಮದಿಗೆ, ಸೌಹಾರ್ದತೆಗೆ ಹೆಸರಾದಂತದ್ದು, ಆನೇಕ ರಾಜ್ಯಗಳಿಂದ ಜನರುಇಲ್ಲಿ ಬಂದು ನೆಲೆಸುತ್ತಾರೆ. ಆದರೆ ಇವತ್ತು ನಮ್ಮ ಗ್ರಾಮೀಣ ಭಾಗದಲ್ಲಿ ಆಗುತ್ತಿರುವಂತಹ ಅನಾಹುತಗಳನ್ನು ನೋಡಿದರೆ ಇಲ್ಲಿ ಯಾವ ನೆಮ್ಮದಿ ಸಿಗುತ್ತದೆ ಎನ್ನುವುದನ್ನು ಕೂಡ ಆಲೋಚನೆ ಮಾಡಬೇಕಾಗಿದೆ. ಹೀಗಾಗಿ ಏನು ಇವತ್ತು ಯಲ್ಲಾಲಿಂಗ ಕೊಲೆಗೆ ಸಂಬಂಧಪಟ್ಟಂತೆ ಇವತ್ತು ಅಲ್ಲಿ ಆಗಿರತಕ್ಕಂತಹ ಅದರಲ್ಲಿ ಪಾಲ್ಗೊಂಡಿರತಕ್ಕಂತಹ ಏನು ಕೊಲೆಗಾರರು ಇರಬಹುದು, ಇವತ್ತು ಕೆಲವರನ್ನು ಬಂಧಿಸಿದ್ದಾರೆ. ಸುಮಾರು 7 ಜನರನ್ನುಅರೆಸ್ಟ್ ಮಾಡಿದ್ದಾರೆ. ಮೊದಲು 3 ಜನರನ್ನು ಅರೆಸ್ಟ್ ಮಾಡಿದ್ದರು, ನಂತರ ಇನ್ನು 3–4 ಜನರನ್ನು ಅರೆಸ್ಟ್ ಮಾಡಿದ್ದಾರೆ.

ಸಿ.ಪಿ.ಐ. ನಾಗರಾಜ್ ಅವರ ನೇತೃತ್ವದಲ್ಲಿ ಕಳುಹಿಸಿದಾಗ ನಾಲ್ಕಾರು ದಿನಗಳಲ್ಲಿ 3 ಜನರನ್ನು ಹಿಡಿದು ಮತ್ತೆ ಮೂವರನ್ನೂ ಅವರು ಪೊಲೀಸ್ ಕಸ್ಟಡಿಗೆ ಕಳುಹಿಸಿದ್ದಾರೆ. ನೆನ್ನೆ ಯಾವ ಒತ್ತಡಕ್ಕೆ ಇಬ್ಬರು ಬಂದು ಪೊಲೀಸರಿಗೆ ಸರೆಂಡರ್ ಆಗಿದ್ದಾರೆಯೋ ಗೊತ್ತಿಲ್ಲ. ಹನುಮೇಶ ನಾಯ್ಕ ಎಂಬಾತ 3ನೇ ಅಪರಾಧಿ ಇದ್ದರೂ, ಇದುವರೆಗೆ ಆ ಪ್ರದೇಶದಲ್ಲಿ ಯಾವ ರೀತಿಯ ಪ್ರತಿಭಟನೆಗಳು ನಡೆದಿವೆ ಎಂಬುದನ್ನು ಬಹುಶಃ ತಾವು ಸಹ ಗಮನಿಸಿರಬಹುದು, ಪ್ರತಿದಿನ ಕೊಪ್ಪಳ ಜಿಲ್ಲೆಯಲ್ಲಿ ಏನು ಪ್ರತಿಭಟನೆಗಳೇನು ನಡೆಯುತ್ತಿವೆ, ಇವು ಬಹುಶಃ ರಾಜ್ಯದಲ್ಲಿ ಎರಡನೇ ಸ್ಥಾನವನ್ನು ಪಡೆದಿದೆ ಎನ್ನಬಹುದಾಗಿದೆ. ಇದು ಕೊಲೆಯಾದ ಆ ದುರ್ದೈವಿ ಯಲ್ಲಾಲಿಂಗನಿಗೆ ಅಲ್ಲಿ ಎಷ್ಟು ಮಹತ್ವವಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅನೇಕ ಜನಹಿತರಕ್ಷಣಾ ಸಂಘಟನೆಗಳ ಕಾರ್ಯಕರ್ತರು, ಜನಪರವಾದಂತಹ ಸಂಘಟನೆಗಳ ಕಾರ್ಯಕರ್ತರೆಲ್ಲರೂ ಪ್ರತಿದಿನ ಈ ಅನ್ಯಾಯದ ವಿರುದ್ಧ ಹೋರಾಟವನ್ನು ಮಾಡಿದರು. ಇದು ಸರ್ಕಾರದ ಕಿವಿಗೆ ಏಕೆ ಬೀಳಲಿಲ್ಲವೋ, ಅವರಿಗೆ ಕೇಳಲಿಲ್ಲವೋ ನನಗೆ ಅರ್ಥವಾಗುತ್ತಿಲ್ಲ. ಒಟ್ಟಾರೆ ಇಂತಹ ಪ್ರಸಂಗಗಳ ವಿಚಾರದಲ್ಲಿ ಆದಷ್ಟು ಬೇಗ ಒಂದು ತಾತ್ವಿಕ ಕೊನೆಯನ್ನು ಕಾಣಬೇಕಾಗುತ್ತದೆ. ಇಲ್ಲವಾದರೆ ಈ ರೀತಿಯ ಕೊಲೆಗಳು, ಅಶಾಂತಿಯುತವಾದ, ಕಾನೂನಿನ ರಕ್ಷಣೆ ಸಿಗಲಾರದಂತಹ ಪರಿಸ್ಥಿತಿ ನಿರ್ಮಾಣವಾಗುವುದರಿಂದ ಅದರ ನೈತಿಕ ಜವಾಬ್ದಾರಿಯನ್ನು ಗೃಹಮಂತ್ರಿಗಳು ಹಾಗೂ ಸಂಬಂಧಪಟ್ಟ ಸ್ಥಳೀಯ ಅಧಿಕಾರಿಗಳೆಲ್ಲರೂ ಹೊರಬೇಕಾಗುತ್ತದೆ ಎನ್ನುವಂತಹ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಏಕೆಂದರೆ ಈ ಕೊಲೆಗೆ ಕಾರಣವೇನು, ಯಾರು ಕೊಲೆ ಮಾಡಿರಬಹುದು ಎನ್ನುವಂತಹ ಎಲ್ಲ ಸಂಗತಿಗಳು ಸಹ ಅಲ್ಲಿನ ಜನಸಾಮಾನ್ಯರಿಗೂ ಗೊತ್ತಾಗುವಂತಹ ರೀತಿಯಲ್ಲಿ ಕೊಲೆಯ ಕೃತ್ಯ ನಡೆದುಹೋದರೂ ತಿಂಗಳುಗಟ್ಟಲೆ ಆರೋಪಿಗಳನ್ನು ಬಂದಿಸುವಂತಹ ಕೆಲಸವಾಗಲಿಲ್ಲವೆಂದರೆ ಇದಕ್ಕೆ ಕಾರಣವೇನು, ಹಿನ್ನೆಲೆ ಯಾರು ಎಂಬುದನ್ನು ಪತ್ತೆಹಚ್ಚಿ ಈ ರಾಜ್ಯದ ಜನತೆಯ ಮುಂದಿಟ್ಟಾಗ ಮಾತ್ರ ಈ ಕೊಲೆ ಪ್ರಕರಣಕ್ಕೆ ನ್ಯಾಯವನ್ನು ದೊರಕಿಸಿಕೊಟ್ಟಂತಾಗುತ್ತದೆ.

ಗೃಹ ಇಲಾಖೆಯ ಅಲ್ಲಿನ ಸಂಬಂಧಪಟ್ಟ ಅಧಿಕಾರಿಗಳು ಈಗ ಮೃತ ಯುವಕ ಯಲ್ಲಾಲಿಂಗನ ಕುಟುಂಬಕ್ಕೆ ರಕ್ಷಣೆಯನ್ನು ಒದಗಿಸಿದೆ. ಆದರೆ ಈ ಕೊಲೆ ಪ್ರಕರಣ ನಡೆದು ಸುಮಾರು ಆರು ತಿಂಗಳುಗಳೇ ಕಳೆದು ಹೋಗಿವೆ. ಆ ಪ್ರಕರಣದ ಬಗ್ಗೆ ಪ್ರತಿಯೊಬ್ಬರ ಬಾಯಲ್ಲಿಯೂ ಜನಜನಿತವಾಗಿದ್ದಾಗ್ಯೂ ಅಲ್ಲಿನ ಸ್ಥಳೀಯ ಪೊಲೀಸ್ ಅಧಿಕಾರಿಗಳು ಏನು ಮಾಡಿದರು ಎನ್ನುವ ಬಗ್ಗೆ ಗೃಹ ಮಂತ್ರಿಗಳು ಉತ್ತರ ಕೊಡಬೇಕಾಗುತ್ತದೆ. ಆ ತಾಯಿ ಪೊಲೀಸ್ ಠಾಣೆಗೆ ಹೋಗಿ ಬೇಡಿಕೊಂಡರೂ ಸಹ ಸುಮಾರು ಒಂದು ತಿಂಗಳವರೆಗೆ ಅಲ್ಲಿನ ಪೊಲೀಸ್ ಅಧಿಕಾರಿಗಳೇಕೆ ಮೌನ ವಹಿಸಿದರು ಎನ್ನುವ ಬಗ್ಗೆ ಸಹ ಅವರು ಈ ಸದನಕ್ಕೆ ಬೆಳಕನ್ನು ಚೆಲ್ಲಬೇಕಾಗುತ್ತದೆ. ಆದ್ದರಿಂದ ಈ ನಿರ್ಲಕ್ಷ್ಯತೆಗೆ

ಕಾರಣಕರ್ತರಾದಂತಹ ಅಧಿಕಾರಿಗಳಿರಬಹುದು, ಮೇಲಧಿಕಾರಿಗಳಿರಬಹುದು ಅವರೆಲ್ಲರನ್ನೂ ಸಹ ಇದಕ್ಕೆ ಹೊಣೆಗಾರರನ್ನಾಗಿ ಮಾಡಲೇಬೇಕಾಗುತ್ತದೆ. ಅಲ್ಲಿನ ಎಸ್.ಪಿ. ಮತ್ತು ಸಿ.ಪಿ.ಐ. ನಾಗರಾಜ್ ಇವರ ನೇತೃತ್ವದ ತಂಡ ಈ ಪ್ರಕರಣವನ್ನು ಭೇದಿಸುವಲ್ಲಿ ಸಾಕಷ್ಟು ಯಶಸ್ವಿಯಾಗಿದ್ದಾರೆ. ಹೀಗಾಗಿ ಒಳ್ಳೆಯ ಅಧಿಕಾರಿಗಳಿದ್ದಾರೆ ಎಂಬುದನ್ನು ನಾವು ಸಹ ಒಪ್ಪುತ್ತೇವೆ. ಈ ರಾಜ್ಯದಲ್ಲಿ ಶ್ರೀಯುತ ಡಿ.ಕೆ. ರವಿ ಅವರಂತಹ ಒಬ್ಬ ಮಹಾನ್ ದಕ್ಷ ಅಧಿಕಾರಿ ತನ್ನ ಪ್ರಾಣವನ್ನು ಕಳೆದುಕೊಳ್ಳುವಂತಹ ಒಂದು ಪ್ರಸಂಗ ಬಂತು. ಅಂದರೆ ನಮ್ಮ ವ್ಯವಸ್ಥೆ ಎಷ್ಟರ ಮಟ್ಟಿಗಿದೆ ಎನ್ನುವುದಕ್ಕೆ ಇದು ಸಹ ಒಂದು ನಿದರ್ಶನವಾಗಿದೆ. ಅದೇ ರೀತಿ ಕಲಬುರಗಿಯ ಮಲ್ಲಿಕಾರ್ಜುನ ಬಂಡೆಯವರ ಪ್ರಕರಣದಲ್ಲಿ ಸಹ ಏನಾಯಿತೆಂಬುದನ್ನು ಇಡೀ ರಾಜ್ಯದ ಜನತೆ ಗಮನಿಸಿದ್ದಾರೆ. ಅದಕ್ಕಾಗಿ ಗೃಹ ಮಂತ್ರಿಗಳು ಇಂತಹ ಪ್ರಕರಣಗಳ ನೈತಿಕ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಯಲ್ಲಾಲಿಂಗ ಎನ್ನುವಂತಹ ಆ ವಿದ್ಯಾರ್ಥಿ ಕೂಡ ತನ್ನ ಬದುಕಿನಲ್ಲಿ ಬೆಳೆಯಬೇಕಾಗಿದ್ದವನು ಆ ಭಾಗದ ಇಂತಹ ರೌಡಿಗಳ ಕೈಯಲ್ಲಿ ಸಿಕ್ಕಿ ನಲುಗುತ್ತಾನೆ ಎಂದರೆ ಇಂತಹ ವ್ಯವಸ್ಥೆಯ ಬಗ್ಗೆ ನಾವೆಲ್ಲರೂ ಆಲೋಚನೆ ಮಾಡಬೇಕಾದಂತಹ ಪ್ರಸಂಗ ಬಂದಿದೆ ಎನ್ನುವಂತಹ ಮಾತನ್ನು ಹೇಳಿ, ಮಾನ್ಯ ಸಭಾಪತಿಗಳಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಗೌರವಾನ್ವಿತ ಸಭಾಪತಿಯವರೇ, 'ನನ್ನ ಕೊಲ್ಲಬೇಡ್ರೀ, ದಮ್ಮಯ್ಯ. ಇನ್ನೆಂದೂ ನಿಮ್ಮ ಸುದ್ದಿಗೆ ಬರೋದಿಲ್ರಿ. ನನ್ನ ಜೀವ ತೆಗೀಬೇಡ್ರೀ, ನಿಮ್ಮ ಕಾಲು ಹಿಡೀತೀನಿ' ಹೀಗೆಂದು ಬೊಬ್ಬೆ ಹಾಕಿದವ ಕರ್ನಾಟಕ ರಾಜ್ಯದಲ್ಲಿ 17 ವರ್ಷ ಪ್ರಾಯದ, ಮುಖದಲ್ಲಿ ಇನ್ನೂ ಸರಿಯಾಗಿ ಮೀಸೆ ಮೂಡದಿರುವಂತಹ ಪಿ.ಯು. ಕಾಲೇಜ್‌ನಲ್ಲಿ ಕಲಿಯುತಿದ್ದ ವಿದ್ಯಾರ್ಥಿ ಯಲ್ಲಾಲಿಂಗ. ಆತನ ಕೊಲೆ ಪ್ರಕರಣದ ಬಗ್ಗೆ ಕೊಪ್ಪಳದಲ್ಲಿ ನಡೆದ ನಮ್ಮ ಪಕ್ಷದ ಪ್ರತಿಭಟನಾ ಸಭೆಯಲ್ಲಿ ನಾನು ಸಹ ಭಾಗವಹಿಸಿದ್ದೆ. ಕನಕಗಿರಿಯಲ್ಲಿ ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಮುಗಿಸಿ ಗದಗದಲ್ಲಿ ಕಾಲೇಜು ವ್ಯಾಸಂಗ ಆರಂಭಿಸಿದ್ದಂತಹ ಯಲ್ಲಾಲಿಂಗ ಮಾಡಿದಂತಹ ಏಕೈಕ ಅಪರಾಧವೆಂದರೆ, ಅದು ಕೊಲೆ, ದರೋಡೆ, ಸುಲಿಗೆ ಯಾವುದೂ ಅಲ್ಲ. ಬದಲಾಗಿ ತನ್ನೂರು ಕನಕಗಿರಿಯ ಟಿ.ವಿ. ವಾಹಿನಿಯಲ್ಲಿ ತನ್ನ ಗ್ರಾಮ ಪಂಚಾಯತಿಯ ಅವ್ಯವಹಾರದ ಬಗ್ಗೆ ಮಾಧ್ಯಮದವರಿಗೆ ವಿವರಿಸುತ್ತಾನೆ. ಬಹುದೊಡ್ಡ ಘೋರ ಅಪರಾಧ ಇದು. ಮತ್ತೆ ಮುಂದುವರೆದು ಈಗಾಗಲೇ ಪ್ರಸ್ತಾಪವಾಗಿರುವಂತಹ ಹನುಮೇಶ ನಾಯ್ಕನ ತಮ್ಮ ರಮೇಶ ನಾಯ್ಕನ ನ್ಯಾಯಬೆಲೆ ಅಂಗಡಿಯಲ್ಲಿ ಬಡವರಿಗೆ ಪಡಿತರ ವಸ್ತುಗಳನ್ನು ವಿತರಿಸುತ್ತಿಲ್ಲ ಎಂದು ಮಾಧ್ಯಮದೆದುರು ಆಪಾದನೆ ಮಾಡುತ್ತಾನೆ. ಇದು ಆತ ಮಾಡಿದ ಎರಡನೇ ಅಪರಾಧ.

ಯಲ್ಲಾಲಿಂಗನ ಕೊಲೆ ಪ್ರಕರಣದ ಮುಖ್ಯ ಆರೋಪಿ ಹನುಮೇಶ ನಾಯ್ಕನ ಬಗ್ಗೆ ಈಗಾಗಲೇ ಮಾತನಾಡಿರುವಂತಹ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. 2005ರಲ್ಲಿ ಆತನ ಮೇಲೆ ರೌಡಿಶೀಟ್ ಇದೆ. ಆತನ ತಮ್ಮ ರಮೇಶ ನಾಯ್ಕ ಮತ್ತು ನರಸಿಂಹ ನಾಯ್ಕ ಇವರ ಮೇಲೆ ರೌಡಿಶೀಟ್ ಸಹಿತ 10ಕ್ಕೂ ಹೆಚ್ಚು ಮುಖ್ಯ ಆರೋಪಗಳಿವೆ. ತಂದೆ ಇಲ್ಲದಂತಹ ಎಳೆಯ ಹುಡುಗ ಯಲ್ಲಾಲಿಂಗ ಮತ್ತು ಆತನ ತಾಯಿ ಕೆಂಚಮ್ಮ ಹಾಗೂ ಈಗಾಗಲೇ ಪ್ರಸ್ತಾಪವಾಗಿರುವಂತೆ ಆತನ ಅಣ್ಣ ವೀರಭದ್ರನ ಕುಟುಂಬ ಕೂಲಿ ಮಾಡಿಕೊಂಡು ಬದುಕುತ್ತಿದೆ. ಈ ಸಾರ್ವಜನಿಕ ಜೀವನದಲ್ಲಿ ಎಳೆಯ ಹುಡುಗನೊಬ್ಬ ತಾವು ಮಾಡುವಂತಹ ಅವ್ಯವಹಾರ ಮತ್ತು ಅಕ್ರಮಗಳಿಗೆ ಎಂತೆಂತಹ ಬಲಾಢ್ಯರು ಕೂಡ ನಮಗೆ ಸರೆಂಡರ್ ಆಗಿದ್ದಾರೆ, ಯಾರಿಗೂ ಸಹ ನಮ್ಮೆದುರು ಮಾತನಾಡುವ ತಾಕತ್ತಿಲ್ಲ, ಸರ್ಕಾರ ನಾವು ಹೇಳಿದಂತೆ ಕೇಳುತ್ತದೆ, ನಮ್ಮ ಜೊತೆಯಲ್ಲಿ ಉಸ್ತುವಾರಿ ಮಂತ್ರಿಗಳ ಆಶ್ರಯ ಇದೆ, ಪೊಲೀಸ್ ಅಧಿಕಾರಿಗಳು ನಮ್ಮ ಒಂದು ಕರೆಗೆ ನಮ್ಮ ಮನೆಗೆ ಬರುತ್ತಾರೆ. ಯಾವ ಕಂದಾಯ ಇಲಾಖೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳು ನಮ್ಮನ್ನು ಪ್ರಶ್ನಿಸುವುದಿಲ್ಲ. ಆಹಾರ ಇಲಾಖೆ ನಾವು ಹೇಳಿದಂತೆ ಕೇಳಿಕೊಂಡು ಬಿದ್ದಿರುತ್ತದೆ. ಅಂತಹ ಸಂದರ್ಭದಲ್ಲಿ ಇನ್ನೂ ಮೀಸೆ ಬಾರದಿರುವಂತಹ 17 ವರ್ಷ ಪ್ರಾಯದ ಎಳೆಯ ಹುಡುಗ ಯಲ್ಲಾಲಿಂಗ ನಮ್ಮನ್ನು ಪ್ರಶ್ನಿಸುತ್ತಾನೆ ಎನ್ನುವುದಾದರೆ, ಅದಕ್ಕಿಂತ ನಮ್ಮ ಈ ಸಾಮ್ರಾಜ್ಯಕ್ಕೆ, ಈ ಬಲಾಢ್ಯವಾದಂತಹ ಒಂದು ಸಾಮ್ರಾಜ್ಯಕ್ಕೆ, ಸರ್ವಾಧಿಕಾರಿ ಸಾಮ್ರಾಜ್ಯಕ್ಕೆ, ತಾವೇ ಕಟ್ಟಿಕೊಂಡಂತಹ ಸಾಮ್ರಾಜ್ಯಕ್ಕೆ ಇವನೆಲ್ಲಿಯಾದರೂ ಧಕ್ಕೆ ತರುತ್ತಾನೆಯೋ ಎನ್ನುವಂತಹ ದೃಷ್ಟಿಯಿಂದ ಈ ಹನುಮೇಶ ನಾಯ್ಕನ ಪಡೆ ಯಲ್ಲಾಲಿಂಗನ ಹಿಂದೆ ಬಿದ್ದುಬಿಡುತ್ತದೆ. ಯಲ್ಲಾಲಿಂಗನನ್ನು ಹೀಗೆಯೇ ಬಿಟ್ಟರೆ ತಮ್ಮ ಅಕ್ರಮ ವ್ಯವಹಾರಗಳಿಗೆ ತೊಂದರೆಯಾಗುತ್ತದೆ ಎಂದು ತಿಳಿದುಕೊಂಡಂತಹ ಹನುಮೇಶ ನಾಯ್ಕ ಮತ್ತು ಆತನ ಮಗ ಮಹಂತೇಶ ನಾಯ್ಕ ಯಲ್ಲಾಲಿಂಗನನ್ನು ಅನೇಕ ಬಾರಿ ಹಿಂಬಾಲಿಸುತ್ತಾರೆ.

ಇದೇ ಜನವರಿ 11ನೇ ತಾರೀಖು ಸಂಜೆ ಯಲ್ಲಾಲಿಂಗ ಗಂಗಾವತಿಯಿಂದ ಕೊಪ್ಪಳಕ್ಕೆ ಹೊಗಲು ಬಸ್ ಹತ್ತಿರುತ್ತಾನೆ. ತಕ್ಷಣ ಹನುಮೇಶ ನಾಯ್ಕನ ಮಗ ಮಹಂತೇಶ ನಾಯ್ಕ ಮತ್ತು ಅವನ ರೌಡಿಪಡೆ ಬೈಕ್‌ನಲ್ಲಿ ಯಲ್ಲಾಲಿಂಗ ಹತ್ತಿರುವ ಬಸ್ಸನ್ನು ಹಿಂಬಾಲಿಸುತ್ತದೆ. ಅವರು ಹಿಂಬಾಲಿಸಿದ್ದನ್ನು ಕಂಡ ಯಲ್ಲಾಲಿಂಗನಿಗೆ ಏನೋ ಅನುಮಾನ ಇದೆ, ಇವರು ನನ್ನನ್ನು ಹಿಂಬಾಲಿಸುತ್ತಿದ್ದಾರೆ ಎಂದುಆತಂಕವಾಗುತ್ತದೆ. ಯಲ್ಲಾಲಿಂಗ ತನ್ನ ಅನೇಕ ಸಂಬಂಧಿಕರಿಗೆ ಫೋನ್ ಮಾಡುತ್ತಾನೆ. ಮಹಾಂತೇಶ ನಾಯ್ಕ ಮತ್ತು ಆತನ ರೌಡಿಪಡೆ ತಾನು ಪ್ರಯಾಣಿಸುತ್ತಿದ್ದ ಬಸ್‌ನ್ನು ಹಿಂಬಾಲಿಸುತ್ತಿರುವುದನ್ನು ಯಲ್ಲಾಲಿಂಗ ತನ್ನ ಮೊಬೈಲ್‌ನಲ್ಲಿ ಚಿತ್ರೀಕರಿಸಿಕೊಂಡಿದ್ದಾನೆ. ತನ್ನ ಮೊಬೈಲ್‌ನಿಂದ ಕರ್ಟಗಿ ಎನ್ನುವಂತಹ ಲೋಕಲ್ ಚಾನಲ್, ಬಹುಶಃ ಈ ಚಾನಲ್‌ನ ಹೆಸರು ಅಸ್ಪಷ್ಟ

ಇರಬಹುದು. ಆ ಚಾನಲ್‌ನ ಮುಖ್ಯಸ್ಥರಿಗೆ, ಅದರ ವರದಿಗಾರರಿಗೆ ಕರೆ ಮಾಡಿ 'ನನ್ನನ್ನು ಕೊಲ್ಲಲಿಕ್ಕೆ ಬರುತ್ತಿದ್ದಾರೆ, ಇದನ್ನೆಲ್ಲಾ ನಾನು ಚಿತ್ರೀಕರಿಸಿಕೊಂಡಿದ್ದೇನೆ. ಏನಾದರೂ ಮಾಡಿ ನನ್ನನ್ನು ಕಾಪಾಡಿ' ಎಂದು ಹೇಳುತ್ತಾನೆ. ನಂತರ ಕನಕಗಿರಿಯ ಪೊಲೀಸ್ ಠಾಣೆಗೆ ಕರೆ ಮಾಡಿ 'ದಯವಿಟ್ಟು ನನಗೆ ರಕ್ಷಣೆ ಕೊಡಿ, ನನ್ನ ಹಿಂದೆ ರೌಡಿ ಪಡೆ ಬರುತ್ತಿದೆ, ನಾನು ಬಸ್‌ನಲ್ಲಿ ಕುಳಿತುಕೊಂಡಿದ್ದೇನೆ, ಬಸ್ ನಿಂತ ತಕ್ಷಣ ಅವರು ಬಂದು ನನ್ನನ್ನು ಕೊಲ್ಲುತ್ತಾರೆ ಎನ್ನುವಂತಹ ಅನುಮಾನ ನನಗಿದೆ ಎಂದು ಹೇಳುತ್ತಾನೆ. ಕೊನೆಗೆ ಯಾರೂ ಸಹ ತನ್ನ ಸಹಾಯಕ್ಕೆ ಬರುವ ಸ್ಥಿತಿಯಲ್ಲಿಲ್ಲ ಎನ್ನುವುದು ಅವನಿಗೆ ಸ್ಪಷ್ಟವಾಗುತ್ತದೆ. ಏಕೆಂದರೆ ಬಸ್ ಮುಂದೆ ಹೋಗುತ್ತಿದೆ, ರೌಡಿಪಡೆ ಬಸ್‌ನ ಹಿಂದೆ ಹಿಂಬಾಲಿಸುತ್ತಿರುತ್ತದೆ. ಕೊನೆಗೆ ಯಲ್ಲಾಲಿಂಗ ದೂರವಾಣಿ ಸಂಖ್ಯೆ: 100ಕ್ಕೆ ಕರೆ ಮಾಡಿ 'ದಯವಿಟ್ಟು ನನಗೆ ಏನಾದರೂ ರಕ್ಷಣೆ ಕೊಡಿ, ನನ್ನನ್ನು ಕೊಲ್ಲುತ್ತಿದ್ದಾರೆ, ನನ್ನನ್ನು ಕಾಪಾಡಿ ಎಂದು ಹೇಳುತ್ತಾನೆ. ಕೊನೆಯ ಹಂತದಲ್ಲಿ ಬಸ್ ನಿಂತಾಗ ಯಲ್ಲಾಲಿಂಗ ಅನಿವಾರ್ಯವಾಗಿ ಇಲ್ಲ, ನನ್ನ ರಕ್ಷಣೆಗೆ ಯಾರೂ ಬರುವುದಿಲ್ಲ, ಇವರು ನನ್ನನ್ನು ಕೊಲ್ಲುತ್ತಾರೆ ಎಂದು ಗೊತ್ತಾದಾಗ ಕಿಸೆಯಲ್ಲಿರುವ ಯಾವುದೋ ಚೀಟಿಯ ಹಿಂಬದಿಯಲ್ಲಿ ಬರೆಯುತ್ತಾನೆ, 'ನನ್ನ ಸಾವಿಗೆ ಗ್ರಾಮ ಪಂಚಾಯತಿ ಅಧ್ಯಕ್ಷ ಬಾಳನಗೌಡ ಹಾಗೂ ಹನುಮೇಶ ನಾಯ್ಕನೇ ಕಾರಣ ಎಂದು ಬರೆದು ಅದನ್ನು ತನ್ನ ಜೇಬಿನಲ್ಲಿ ಭದ್ರವಾಗಿಟ್ಟುಕೊಳ್ಳುತ್ತಾನೆ. ನಂತರ ನಡೆದದ್ದು, ನಾನು ಹೇಳಿದಂತಹ "ಅಯ್ಯೋ ನನ್ನ ಕೊಲ್ಲಬೇಡ್ರೀ, ದಮ್ಮಯ್ಯ. ಇನ್ನೆಂದೂ ನಿಮ್ಮ ಸುದ್ದಿಗೆ ಬರೋದಿಲ್ರಿ. ನನ್ನ ಜೀವ ತೆಗೀಬೇಡ್ರೀ, ನಿಮ್ಮ ಕಾಲು ಹಿಡಿತೀನಿ' ಎಂದು ಬೊಬ್ಬೆ ಹಾಕಿದ್ದು, ಈ ಚೀಟಿಯನ್ನು ಅವನು ಕಿಸೆಯಲ್ಲಿಟ್ಟುಕೊಂಡ ಮೇಲೆ.

ಗೌರವಾನ್ವಿತ ಸಭಾಪತಿಯವರೇ, ಈ ಯಲ್ಲಾಲಿಂಗನ ಪ್ರಕರಣವನ್ನು ಗಮನಿಸಿದಾಗ ನನಗನಿಸುವುದೇನೆಂದರೆ, ಇಷ್ಟೆಲ್ಲಾ ವರದಿಗಳಾಗಿ ಸುಮಾರು 6 ತಿಂಗಳೇ ಕಳೆದಿವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ 'ಅಹಿಂದ'ರಿಗೆ, ಅಲ್ಪಸಂಖ್ಯಾತರಿಗೆ, ದುರ್ಬಲರಿಗೆ, ಹಿಂದುಳಿದ ವರ್ಗದವರಿಗೆ, ಪರಿಶಿಷ್ಟರಿಗೆ ಸಾಮಾಜಿಕ ನ್ಯಾಯ ಕೊಡುತ್ತೇನೆ, ಬದುಕುವ ಹಕ್ಕು ಕೊಡುತ್ತೇನೆ ಎಂದು ಹೇಳಿದಂತಹ ಮುಖ್ಯಮಂತ್ರಿಯವರು, ನನಗೆ ಅವರ ಬಗ್ಗೆ ಹೆಮ್ಮೆ ಇದೆ. ಮಾನ್ಯ ಯಡಿಯೂರಪ್ಪನವರಂತಹ ಬಲಾಢ್ಯ ಮುಖ್ಯಮಂತ್ರಿ ಇದ್ದಾಗ ತೊಡೆತಟ್ಟಿ ನಿಂತವರು ನೀವು. ನಾನು ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ಪ್ರಥಮ ಬಜೆಟ್ ಅಧಿವೇಶನದಲ್ಲಿ ಮಾತನಾಡುತ್ತಾ, ದುರ್ಬಲರಿಗೆ, ಅಸಹಾಯಕರಿಗೆ, ನೊಂದವರಿಗೆ ಸ್ವಾಭಿಮಾನ ಬರಲಿ ಎನ್ನುವ ಕಾರಣಕ್ಕೆ ಅಲ್ಪಸಂಖ್ಯಾತ ಸಮುದಾಯದ ಶ್ರೀ ಕೆ.ಜೆ. ಜಾರ್ಜ್‌ರವರನ್ನು ಗೃಹ ಮಂತ್ರಿಗಳನ್ನಾಗಿ ಮಾಡಿದ್ದಾರೆ ಎನ್ನುವಂತಹ ಒಂದು ಹೇಳಿಕೆ ಇದೆ, ಶಹಭಾಷ್, ನೀವೇನಾದರೂ ಮಾಡುತ್ತೀರಿ ಎಂದು ನಾನು ಹೇಳಿದೆ. ಆದರೆ ಕಳೆದ 2 ವರ್ಷಗಳಲ್ಲಿ ಮಾನ್ಯ ಜಾರ್ಜ್ ಸಾಹೇಬರೇ,

ನಮಗೆ ವೈಯಕ್ತಿಕವಾಗಿ ನಿಮ್ಮ ಬಗ್ಗೆ ಗೌರವ ಇದೆ, ಈ ಪ್ರಕರಣವನ್ನೂ ಕಂಡೂ ಕೂಡ ತಾವು ಸುಮ್ಮನೆ ಕುಳಿತುಕೊಂಡಿರಲ್ಲಾ, ಏನನ್ನಬೇಕು ನಾನು ನಿಮಗೆ? ಕರ್ನಾಟಕ ಸರ್ಕಾರದ ಇತಿಹಾಸದಲ್ಲಿ ಯಾವ ಸರ್ಕಾರ ಇರುವಾಗಲೂ ಇಂತಹ ಒಂದು ಹೇಯ ಘಟನೆ ನಡೆದಿರಲಿಲ್ಲ. ನಿಮ್ಮ ಸರ್ಕಾರವೇ ಇದಕ್ಕೆ ಕಾರಣವೆಂದು ನಾನು ಹೇಳುತ್ತಿಲ್ಲ. ಆದರೆ ಯಲ್ಲಾಲಿಂಗನ ಕೊಂದ ಆರೋಪಿಗಳನ್ನು ಹಿಡಿಯುವುದಕ್ಕೆ ಇಷ್ಟು ತಿಂಗಳುಗಳು ಬೇಕಾಗಿತ್ತೇ? ಇಂತಹ ಹಲವು ಘಟನೆಗಳು ಮುಂದುವರೆಯುತ್ತದೆ. ಆನಂತರ ಅಂಥದ್ದೇ ಒಂದು ಪ್ರಕರಣದಲ್ಲಿ ರೇಷನ್ ಅಂಗಡಿಯಲ್ಲಿ ರೇಷನ್ ಕೊಡುತ್ತಿಲ್ಲ ಎಂದು ಹೇಳಿದ ಕಾರಣಕ್ಕೆ ಸಣ್ಣ ಹನುಮಂತಪ್ಪನವರ ಮನೆಗೆ ಬೆಂಕಿ ಹಚ್ಚಿದಂತಹ ಪ್ರಕರಣದ ಬಗ್ಗೆಯು ಸಹ ತಮಗೆ ತಿಳಿದಿದೆ. ಏನೇನು ಘಟನೆಗಳು, ಏನೇನು ದುರಂತಗಳು ನಡೆಯುತ್ತಿವೆ ಎನ್ನುವುದಕ್ಕೆ ಹಲವಾರು ಪ್ರಕರಣಗಳು ನಮ್ಮ ಮುಂದೆ ಬಿಚ್ಚಿಕೊಳ್ಳುತ್ತವೆ. ಮಾನ್ಯ ಸಭಾಪತಿಯವರೇ, ಆ ಘಟನೆಯ ನಂತರ ಅಂದರೆ ಆತ ಕೊಲೆಯಾದ ನಂತರ ಅಲ್ಲಿಗೆ ಪೊಲೀಸರು ಬರುತ್ತಾರೆ. ಬಂದ ಮೇಲೆ ಈ ಸಾವಿನ ಬಗ್ಗೆ ನಮಗೆ ಯಾವುದೇ ಅನುಮಾನವಿಲ್ಲವೆಂದು ಹೇಳಿ ಅನಕ್ಷರಸ್ಥರಾದಂತಹ ಅವರ ಸಂಬಂಧಿಕರ ಕೈಯಲ್ಲಿ ಸಹಿಯನ್ನು ಪಡೆಯುತ್ತಾರೆ. ಅವರ ಕುಟುಂಬ ವರ್ಗದವರ ಗಮನಕ್ಕೂ ತಾರದೆ ಯಲ್ಲಾಲಿಂಗನ ಹೆಣವನ್ನು ಸುಟ್ಟು ಹಾಕಿರುವುದು ಅನುಮಾನಕ್ಕೆ ಕಾರಣವಾಗಿದೆ. ನಾನು ಅಲ್ಲಿಗೆ ಹೋಗಿ ಅವರು ಕೇಳಿದಾಗ ನಮ್ಮಲ್ಲಿ 100 ಕ್ಕೆ 99ರಷ್ಟು ಶವವನ್ನು ಹೂಳುವುದು ನಮ್ಮ ಸಂಪ್ರದಾಯವೆಂದು ಅವರು ಹೇಳಿದರು. ಅಂದರೆ, ಯಾವುದೇ ಒಂದು ಮಾಹಿತಿಗಳು ಸಿಗಬಾರದು, ಎಲ್ಲಾ ಸಾಕ್ಷಿಗಳನ್ನು ಮುಚ್ಚಿ ಹಾಕಬೇಕೆನ್ನುವ ಕಾರಣಕ್ಕೆ ನಮ್ಮ ಯಲ್ಲಾಲಿಂಗನ ಹೆಣವನ್ನು ಸುಡಲಾಗಿದೆ ಎನ್ನುವಂತಹ ಮಾತುಗಳನ್ನು ಅಲ್ಲಿರುವಂತಹ ಜನರು ಹೇಳುತ್ತಾರೆ. ಅದಕ್ಕಿಂತ ಹೆಚ್ಚಿನ ಆತಂಕವೇನೆಂದರೆ, ಯಲ್ಲಾಲಿಂಗನ ಮನೆಗೆ ಮುಖ್ಯ ಆರೋಪಿ ಹನುಮೇಶ ನಾಯಕ ಅವನ ತಾಯಿ ಬಳಿ ಬಂದು 'ಅಮ್ಮಾ ಆಗಿದ್ದು ಆಯಿತು ಏನಾದರು ಪರಿಹಾರ ಕೊಡುತ್ತೇನೆ ದಯವಿಟ್ಟು ನಮ್ಮನ್ನು ಜೈಲಿಗೆ ಹಾಕಿಸಬೇಡವೆಂದು' ಹೇಳುತ್ತಾನೆ. ತುತ್ತು ಊಟಕ್ಕೆ ಕೂಲಿ ಮಾಡುವಂತಹ ಬಡವಿ ಕೆಂಚಮ್ಮ ಹೇಳುತ್ತಾಳೆ ನಿನ್ನ ಹಣ ಬೇಡ ನನಗೆ. ನನ್ನ ಕರುಳ ಕಂದ ಯಲ್ಲಾಲಿಂಗ ಮುಂದೆ ಅವನು ಏನಾಗುತ್ತಾನೆಂದು ಗೊತ್ತಿಲ್ಲ ಅವನೇ ನನಗೆ ತುತ್ತು ಅನ್ನವನ್ನು ಕೊಡಬೇಕಾಗಿತ್ತು, ನನ್ನ ತುತ್ತು ಅನ್ನವನ್ನು ಕಿತ್ತುಕೊಂಡವನು ನೀನು, ನೀನು ಜೈಲಿಗೆ ಹೋಗುವವರೆಗೆ ಹೆತ್ತ ತಾಯಿಯ ಕರುಳಿಗೆ ನೆಮ್ಮದಿ ಸಿಗುವುದಿಲ್ಲವೆಂದು ಹೇಳಿ ಶಾಪ ಹಾಕುತ್ತಾಳೆ. ಈ ಪ್ರಜಾಪ್ರಭುತ್ವದ ಈ ನೆಲದಲ್ಲಿ ಎಂಥೆಂಥಾ ಘಟನೆಗಳನ್ನು ನೋಡಿದ್ದೇವೆ, ರಾಜಕೀಯ ದ್ವೇಷಗಳನ್ನು ನೋಡಿದ್ದೇವೆ, ಅನೇಕ ಅನಾಹುತಗಳನ್ನು ನೋಡಿದ್ದೇವೆ, ಅನೇಕ ಬರ್ಬರ ಕೃತ್ಯಗಳನ್ನು ನೋಡಿದ್ದೇವೆ. ಆದರೆ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನನ್ನಂಥ ಸಾಮಾನ್ಯನೊಬ್ಬ ಯಲ್ಲಾಲಿಂಗನ ಕ್ರೂರಪ್ರಕರಣದಷ್ಟು ಇನ್ನೊಂದು ನೋಡಿಲ್ಲ. ಯಲ್ಲಾಲಿಂಗನಅಣ್ಣ ವೀರಭದ್ರನ ಮನೆಗೆ ಇವರ ಪಡೆ ಹೋಗುತ್ತದೆ, ನಡೆದಿದ್ದು

ನಡೆದು ಹೋಯಿತು ನಿನ್ನಅಮ್ಮನಿಗೆ ಬುದ್ಧಿ ಹೇಳು ನಿನಗೆ ಏನಾದರು ಸಹಾಯ ಮಾಡುತ್ತೇವೆಂದು ಹೇಳುತ್ತಾರೆ. ಅದಕ್ಕೆ ವೀರಭದ್ರ ಹೇಳುತ್ತಾನೆ ನನಗೆ ನನ್ನ ತಮ್ಮ ಒಬ್ಬ ಆಫೀಸರ್ ಆಗಬೇಕೆಂಬ ಆಸೆ ಇತ್ತು. ನಾನು ಬೆಂಗಳೂರಿನಲ್ಲಿ ಕೂಲಿ ಮಾಡಿ ನನ್ನ ತಮ್ಮನನ್ನು ಕಾಲೇಜು ಓದಿಸುತ್ತಿದ್ದೆ. ನೀವು ಆ ನನ್ನ ತಮ್ಮನ ಜೀವವನ್ನು ಕೊಚ್ಚಿ ಕೊಲೆ ಮಾಡಿದ್ದೀರಲ್ಲ ನಿಮ್ಮ ಪರಿಹಾರಕ್ಕೆ ನನ್ನ ದಿಕ್ಕಾರವಿರಲಿ ಎಂದು ಹೇಳುತ್ತಾನೆ. ಮಾನ್ಯ ಸಭಾಪತಿಯವರೇ, ನನಗೆ ಆಶ್ಚರ್ಯವಾಗುವುದೇನೆಂದರೆ, ಅಲ್ಲಿರುವಂತಹ ಉಸ್ತುವಾರಿ ಸಚಿವರು ತಕ್ಷಣ ಯಲ್ಲಾಲಿಂಗನ ಮನೆಗೆ ಹೋಗಿ ಸಾಂತ್ವನ ಹೇಳುತ್ತಾರೆ, ಈ ಕೃತ್ಯವನ್ನು ಯಾರೇ ಮಾಡಿರಲಿ, ನಮ್ಮ ಸಂಬಂಧಿಕರೆ ಮಾಡಿರಲಿ ಅಥವಾ ನಮ್ಮರಾಜಕೀಯ ಪಕ್ಷದವರೇ ಮಾಡಿರಲಿ ಯಾರೇ ಮಾಡಿದ್ದರು ಅವರನ್ನು ಹೊದ್ದು ಒಳಗಡೆ ಹಾಕಿ ಎಂದು ಆದೇಶ ಕೊಡುತ್ತಾರೆಂದು ನಾನು ತಿಳಿದುಕೊಂಡಿದ್ದೆ. ಆದರೆ ಕೊಪ್ಪಳ ಜಿಲ್ಲೆಯಲ್ಲಿ ಸಾವಿರಾರು ಪ್ರತಿಭಟನಾ ಸಂಘಟನೆಗಳು ಪಾರ್ಟಿ, ಪಕ್ಷಯಾವುದು ಇಲ್ಲದೆ ಜನ ಪರವಾದಂತಹ ಸಂಘಟನೆಗಳು ಕೇವಲ ಸಾಹಿತ್ಯ ಹಾಗೂ ಇನ್ನಿತರ ಕೆಲಸಗಳನ್ನು ಮಾಡಿಕೊಂಡಿರುವಂತಹ ಸಂಘಟನೆಗಳು, ರಾಜಕಾರಣ ಗೊತ್ತೇ ಇಲ್ಲದಂತಹ ಸಂಘಟನೆಗಳು ಜಿಲ್ಲಾ ಉಸ್ತುವಾರಿ ಸಚಿವರು ನ್ಯಾಯ ಕೊಡಲಿಲ್ಲವೆಂದು ಬೊಟ್ಟು ಮಾಡಿ ಹೇಳುತ್ತಾರೆ. ಇದಕ್ಕೆ ಯಾರು ಉತ್ತರ ಕೊಡಬೇಕು? ಸಮಾಜದ ಕಟ್ಟಕಡೆಯ ಮನುಷ್ಯರಿಗೆ ಸಾಮಾಜಿಕ ನ್ಯಾಯ ಕೊಡಬೇಕಾದಂತಹ ಮಾನ್ಯ ಗೃಹ ಸಚಿವರು ಇಷ್ಟು ದಿವಸಗಳಾದರು ಅವನ ಮನೆಗೆ ಭೇಟಿ ಕೊಟ್ಟಿಲ್ಲ.

**ಶ್ರೀ ಶಿವರಾಜ್ ಎಸ್. ತಂಗಡಗಿ (ಸಣ್ಣ ನೀರಾವರಿ ಸಚಿವರು):–** ಮಾನ್ಯ ಸಭಾಪತಿಯವರೇ...

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ಕೊಲೆಯಾಗಿ ಸತ್ತಿರುವಂತಹ ಹುಡುಗನ ತಾಯಿ ಬಾಯಿ ಮುಚ್ಚಿಕೊಂಡಿದ್ದಾಳೆ, ಕೊಲೆ ಮಾಡಿಸಿದವರು ಈ ರೀತಿ ಎದ್ದುನಿಂತು ಕೊಳ್ಳುತ್ತೀರಲ್ಲ ನಿಮಗೆ ಏನು ಅನ್ನಿಸುವುದಿಲ್ಲವೆ?

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಆ ರೀತಿ ಮಾತನಾಡಬೇಡಿ, ನಮಗೂ ಮಕ್ಕಳಿದ್ದಾರೆ. ಏನು ಮಾತನಾಡುತ್ತಿದ್ದೀರಿ ನೀವು?

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ನಾನು ಸಾಂತ್ವನ ಹೇಳಿಲ್ಲವೆಂದು ಹೇಳಿದರು, ನಾನು ಅವರ ಮನೆಗೆ ಭೇಟಿ ಕೊಟ್ಟಿದ್ದೇನೆ, ಸಾಂತ್ವನ ಹೇಳಿದ್ದೇನೆ ಎಂದು ಹೇಳುವುದಕ್ಕೋಸ್ಕರ ಎದ್ದು ನಿಂತಿದ್ದು. ಈ ರೀತಿ ಮಾತನಾಡುವುದಕ್ಕೆ ನಿಮಗೆ ನಾಚಿಕೆಯಾಗುವುದಿಲ್ಲವೆ?

**(ಗೊಂದಲ)**

**ಶ್ರೀ ಆಚಾರ್ ಹಾಲಪ್ಪ ಬಸಪ್ಪ:–** ಕೊಲೆ ಮಾಡಿಸಿದ ನಿಮಗೆ ನಾಚಿಕೆ ಆಗಬೇಕು.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ನಾನು ಅವರ ಮನೆಗೆ ಹೋಗಿ ಭೇಟಿ ಕೊಟ್ಟು ಅವರಿಗೆ ಸಾಂತ್ವನ ಹೇಳಿದ್ದೇನೆ, ತಪ್ಪು ಮಾಹಿತಿ ಹೋಗಬಾರದು ಎಂದು ಹೇಳುವುದಕ್ಕೋಸ್ಕರ ನಾನು ನಿಂತಿದ್ದು ಅಷ್ಟೆ.

**(ಗೊಂದಲ)**

**ಉಪ ಸಭಾಪತಿಯವರು:–** ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–**ಇಂತಹ ರೌಡಿಶೀಟರ್‌ಗಳ ಪರ ಇವರು ಹೋಗುತ್ತಾರಲ್ಲ ಇದು ನ್ಯಾಯವೆ?

**(ಗೊಂದಲ)**

**ಶ್ರೀ ವಿ. ಸೋಮಣ್ಣ:–** ನೀವು ಕೊಲೆ ಮಾಡಿಲ್ಲವೆ?

**ಉಪಸಭಾಪತಿಯವರು:–** ಮಾನ್ಯ ಸೋಮಣ್ಣನವರೇ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಈಶ್ವರಪ್ಪನವರೇ ದಯಮಾಡಿ ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀಮತಿ ಮೋಟಮ್ಮ:–** ಮಾನ್ಯ ಸಭಾಪತಿಯವರೇ,

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಇಂಥ ರೌಡಿಶೀಟರ್‌ಗಳ ಪರ ಹೋಗುತ್ತಾರಲ್ಲ ಇದು ನ್ಯಾಯವೆ? ದಯವಿಟ್ಟು ನೀವು ಇಂಥವರ ರಕ್ಷಣೆಗೆ ಹೋಗಬೇಡಿ. ನೀವಲ್ಲ.. ಮೋಟಮ್ಮನವರೆ ನಿಮಗೆ ಗೊತ್ತಿಲ್ಲ.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಶ್ರೀಮತಿ ಮೋಟಮ್ಮನವರೇ ನೀವು ಒಬ್ಬ ಹೆಣ್ಣು ಮಗಳು, ನಿಮ್ಮದು ಹೆತ್ತ ಕರುಳು ನೀವು ಒಮ್ಮೆ ಅಲ್ಲಿಗೆ ಹೋಗಿ ಅವರ ತಾಯಿಯನ್ನು ಭೇಟಿ ಮಾಡಿಯಾರು ಕೊಲೆ ಮಾಡಿದರು, ಏಕೆ ಕೊಲೆ ಮಾಡಿದರು, ಏನು ಕಥೆ ಎಂದು ಸ್ವಂತ ಅವರ ತಾಯಿಯೇ ಹೇಳುತ್ತಾರೆ. ಬನ್ನಿ. ಆನಂತರ ನೀವು ಇವರರಕ್ಷಣೆಗೆ ಬನ್ನಿ. ನೀವಾದರು ಅಲ್ಲಿಗೆ ಹೋಗಿ ಬನ್ನಿಯೆಂದು ನಿಮಗೆ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಕಾಂಗ್ರೆಸ್ಸಿನ ನಿಯೋಗ ಹೋಗಿ ಬರಲಿ. ಆನಂತರ ನೀವು ತೀರ್ಮಾನಕ್ಕೆ ಬನ್ನಿ, ದಯವಿಟ್ಟು ಅರ್ಥ ಮಾಡಿಕೊಳ್ಳಿ.

**(ಗೊಂದಲ)**

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, ಇಡೀ ಕೊಪ್ಪಳ ಜಿಲ್ಲೆ ಯಲ್ಲಾಲಿಂಗನ ಕೊಲೆ ಯಾರು ಮಾಡಿಸಿದ್ದಾರೆಂದು ಹೇಳುತ್ತಿದೆ. ಬೇಕಾದರೆ ಯಾರನ್ನಾದರು ಮಾರು ವೇಷದಲ್ಲಿ ಕೊಪ್ಪಳ ಜಿಲ್ಲೆಯ ಆ ಗ್ರಾಮಕ್ಕೆ ಕಳಿಸಿ ಯಾರು ಕೊಲೆ ಮಾಡಿಸಿದ್ದಾರೆಂದು ತಿಳಿದುಕೊಳ್ಳಿ. ಆತ್ಮಸಾಕ್ಷಿ ಎನ್ನುವುದು ಒಂದಿದ್ದರೆ ನಾವು ಕೊಲೆ ಮಾಡಿಲ್ಲವೆಂದು ಅವರು ಹೇಳಲಿ. ಮಾನ್ಯ ಸಭಾಪತಿಯವರೇ, ಈ ನಾಡಿನಲ್ಲಿ ಅನ್ಯಾಯ ಮಾಡಿದವರಿಗೆ ಒಂದಲ್ಲಾ ಒಂದು ದಿವಸ ಅವರಿಗೆ ಶಿಕ್ಷೆ ಆಗುತ್ತದೆ. ಅದನ್ನು ಯಾರು ಮುಚ್ಚಿಡುವುದಕ್ಕೆ ಆಗುವುದಿಲ್ಲ, ಸುಳ್ಳು ಹೇಳಿ ಯಾರು ಕಿರೀಟ ತೆಗೆದುಕೊಳ್ಳಬೇಕಾಗಿಲ್ಲ. ಆದರೆ ಒಬ್ಬ ಬಡ ವಿದ್ಯಾರ್ಥಿಯ ಸಾವಿನ ಬಗ್ಗೆ ಸರ್ಕಾರ ವಿಚಾರ ಮಾಡಲಿ.

**(ಗೊಂದಲ)**

**ಉಪ ಸಭಾಪತಿಯವರು:–** ಆಯಿತು ಸೋಮಣ್ಣನವರೇ ಹೇಳಿದಿರಲ್ಲ ಕುಳಿತುಕೊಳ್ಳಿ. ಎಷ್ಟು ಸಲ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** ವಿಚಾರ ಮಾಡುವುದಿಲ್ಲವೆಂದು ಯಾರು ಹೇಳಿದ್ದಾರೆ?

**ಉಪ ಸಭಾಪತಿಯವರು:–** ಮಾನ್ಯ ಪೂಜಾರಿಯವರೆ, ನೀವು ಮಾತನಾಡಿ.

**(ಗೊಂದಲ)**

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, ಒಬ್ಬ ಕೊಲೆಗಡುಕನನ್ನು ಹಿಡಿಯುವುದಕ್ಕೆ ಆರು ತಿಂಗಳು ಕಾಲಾವಕಾಶ ಬೇಕೆ?

**ಉಪ ಸಭಾಪತಿಯವರು:–** ಆಯಿತು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಎನ್.ಎಸ್. ಬೋಸರಾಜ್:–** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:–** ಮಾನ್ಯ ಬೋಸ್‌ರಾಜ್‌ರವರೆ ತಾವು ಕುಳಿತುಕೊಳ್ಳಿ.

**(ಗೊಂದಲ)**

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ, ಒಬ್ಬ ಕೊಲೆಗಡುಕನನ್ನು ಹಿಡಿಯುವುದಕ್ಕೆ ಆರು ತಿಂಗಳು ಕಾಲಾವಕಾಶ ಬೇಕೆ ಎಂದು ಜನರು ಕೇಳುತ್ತಿದ್ದಾರೆ.

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ನಿಮಗೆ ಬೇಸರವಾಗುವುದಾದರೆ ಸತ್ಯ ಹೇಳುವುದಿಲ್ಲ ಮುಗಿಸಿಬಿಡುತ್ತೇನೆ. ಮಾನ್ಯ ಸಭಾಪತಿಯವರೇ...

**(ಗೊಂದಲ)**

**ಶ್ರೀ ಐವನ್ ಡಿ'ಸೋಜ:–** ರಘುಪತಿ ಭಟ್ ಅವರ ವಿಷಯ ಬಂದಾಗ ಆವಾಗ ಏನು ಮಾಡುತ್ತಿದ್ದಿರಿ?

**(ಗೊಂದಲ)**

**ಉಪ ಸಭಾಪತಿಯವರು:–** ಡಿ'ಸೋಜಾರವರೇ, ಈಗ ನೀವು ಮಾತನಾಡುತ್ತೀರಾ? ನೀವು ಮಾತನಾಡುವಾಗ ಮಾತನಾಡಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೇ, ಮಾನ್ಯ ಡಿ'ಸೋಜಾರವರು ಹೇಳಿದಂತಹ ವಿಷಯದ ಬಗ್ಗೆ ಮಾತನಾಡಬೇಕೆಂದರೆ ನನಗೆ ಅವಕಾಶ ಕೊಡಬೇಡಿ, ನನ್ನ ಅಭಿಪ್ರಾಯವನ್ನು ಮಂಡಿಸಬೇಕಾದರೆ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ. ಎಲ್ಲಕ್ಕಿಂತ ಹೆಚ್ಚಾಗಿ ಆಡಳಿತ ಪಕ್ಷದ ಸದಸ್ಯರಿಗೆ ಏಕೆ ಸಿಟ್ಟು ಬಂತು ಎಂದು ನನಗೆ ಗೊತ್ತಿಲ್ಲ. ನಾನು ನಿರ್ದಿಷ್ಟವಾಗಿಯಾರ ಹೆಸರನ್ನೂ ಹೇಳಿಲ್ಲ. ಅಲ್ಲಿರುವಂತಹ ಜನಾಭಿಪ್ರಾಯವನ್ನು ಖುದ್ದು ನೋಡಿ, ಉಸ್ತುವಾರಿ ಸಚಿವರು ರಕ್ಷಣೆ ಕೊಟ್ಟಿಲ್ಲ ಎಂಬ ವಾದಗಳು ಇವೆ ಎಂದು ಹೇಳಿದೆ.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ನಾನು ಏಕೆ ಎದ್ದು ನಿಂತಿದ್ದೇನೆಂದು ಕೇಳಬೇಕಲ್ಲವೆ? ನಾನು ಜಿಲ್ಲಾ ಉಸ್ತುವಾರಿ ಸಚಿವ, ನಿಮಗೆ ಎಷ್ಟು ನೋವಾಗಿದೆ ಅದಕ್ಕಿಂತ ಹೆಚ್ಚು ನೋವು ನನಗಾಗಿದೆ.

**ಶ್ರೀ ಎಸ್.ಆರ್. ಪಾಟೀಲ್ (ಸಭಾ ನಾಯಕರು):–** ಮಾನ್ಯ ಈಶ್ವರಪ್ಪನವರೇ ಅವರಿಗೆ ನೇರವಾಗಿ ಹೇಳಿದರು.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ನಾನು ಜಿಲ್ಲಾ ಉಸ್ತುವಾರಿ ಸಚಿವನಿದ್ದೇನೆ, ನನ್ನ ಕ್ಷೇತ್ರದ ಬಗ್ಗೆ ನಾನು ಹೇಳಬೇಕಲ್ಲವೆ. ನಿಮಗೆ ಎಷ್ಟು ನೋವಾಗಿದೆ ಅದಕ್ಕಿಂತ ಹೆಚ್ಚು ನೋವು ನನಗಾಗಿದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಂತ್ರಿಗಳಾಗಿ ನೀವು ಉತ್ತರ ಕೊಟ್ಟರೆ ಹೊರಗಡೆ ಇರುವಂತಹ ಜನ ಏನು ತಿಳಿದುಕೊಳ್ಳುತ್ತಾರೆ? ಮಾನ್ಯ ಗೃಹ ಸಚಿವರಿದ್ದಾರೆ ಅವರು ಮಾತನಾಡಲಿ. ಅಪರಾಧಿಗಳಿಗೆ ಇಲ್ಲಿ ಅವಕಾಶ ಕೊಡಬೇಡಿ.

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಅಪರಾಧಿ ನಾನಲ್ಲ.

**ಶ್ರೀ ಎಸ್.ಆರ್. ಪಾಟೀಲ್:–** ಅವರು ಏಕೆ ಅಪರಾಧಿ ಆಗುತ್ತಾರೆ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೇ, ದಯವಿಟ್ಟು ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಡಿ.

**(ಗೊಂದಲ)**

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಪ್ಪು ಮಾಹಿತಿ ಹೋಗಬಾರದು.

**(ಗೊಂದಲ)**

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೇ...

**ಉಪ ಸಭಾಪತಿಯವರು:–** ರೀ ಸೋಮಣ್ಣನವರೇ ಕುಳಿತುಕೊಳ್ಳಿ. ನಿಮಗೆ ನಿಂತುಕೊಳ್ಳುವುದು ಒಂದು ಚಟವೆ?

**ಶ್ರೀ ಶಿವರಾಜ್ ಎಸ್. ತಂಗಡಗಿ:–** ಮಾನ್ಯ ಸಭಾಪತಿಯವರೇ, ನಾನು ಏಕೆ ಎದ್ದು ನಿಂತುಕೊಂಡೆ ಎಂದರೆ, ಮಾನ್ಯ ಕೋಟ ಶ್ರೀನಿವಾಸ ಪೂಜಾರಿಯವರು ಜಿಲ್ಲಾ ಉಸ್ತುವಾರಿ ಸಚಿವರಾಗಿ ಅವರ ಮನೆಗೆ ಭೇಟಿಯನ್ನೇ ಕೊಟ್ಟಿಲ್ಲವೆಂದು ಹೇಳಿದರಲ್ಲ ಅದಕ್ಕೆ ನಾನು ಅವರ ಮನೆಗೆ ಭೇಟಿಕೊಟ್ಟಿದ್ದೇನೆ, ಅವರಿಗೆ ಸಾಂತ್ವನ ಹೇಳಿದ್ದೇನೆ ಅದು ನನ್ನಕ್ಷೇತ್ರ. ಇವರಿಗಿಂತ ಹೆಚ್ಚು ಕಾಳಜಿ ನನಗಿದೆ, ಆ ಕ್ಷೇತ್ರದ ಜನತೆ ನನ್ನನ್ನು ಶಾಸಕನಾಗಿ ಮಾಡಿದ್ದಾರೆ ಅವರಿಗೆ ಸಾಂತ್ವಾನ ಹೇಳಿ ಬಂದಿದ್ದೇನೆ. ತಪ್ಪು ಮಾಹಿತಿಯನ್ನು ಕೊಡಬಾರದೆಂದು ಹೇಳುವುದಕ್ಕಷ್ಟೇ ನಾನು ಎದ್ದು ನಿಂತಿದ್ದೇ ಹೊರತು ಬೇರೆ ಯಾವ ಉದ್ದೇಶಕ್ಕೂ ಅಲ್ಲ. ದಯಮಾಡಿ ಅರ್ಥ ಮಾಡಿಕೊಳ್ಳಬೇಕು.

(ಗೊಂದಲ)

**ಶ್ರೀ ಕೆ.ಎಸ್. ಈಶ್ವರಪ್ಪ:–** ನಾವೇನಾದರೂ ಅರ್ಥ ಮಾಡಿಕೊಳ್ಳದೆ ಮಾತನಾಡಿದರೆ ಹೊರಗಡೆ ಬಂದಾಗ ನಾವು ಬದುಕುತ್ತೇವೆಯೇ ಇಲ್ಲವೆ ಎಂದು ನಮಗೆ ಭಯವಿದೆ.

**ಉಪ ಸಭಾಪತಿಯವರು:–** ಮಾನ್ಯ ಹಾಲಪ್ಪ ಪೂಜಾರ್‌ರವರು ಮಾತನಾಡಿದ ಮೇಲೆ ನೀವು ಮಾತನಾಡಿ.

**ಶ್ರೀ ಕೆ.ಅಭಯಚಂದ್ರ ಜೈನ್:–** ಮಾನ್ಯ ಸಭಾಪತಿಯವರೇ, ಯಾರು ಸುಳ್ಳು ಮಾತನಾಡಿದ್ದು?

**ಉಪ ಸಭಾಪತಿಯವರು:–**ಮಾನ್ಯ ಮಂತ್ರಿಗಳೆ, ದಯಮಾಡಿ ಕುಳಿತುಕೊಳ್ಳಿ.

(5.00 ಗಂಟೆ)

(ಗೊಂದಲ)

**ಉಪ ಸಭಾಪತಿಯವರು:–** ಈಗ ನೀವು ಸುಮ್ಮನೆ ಕುಳಿತುಕೊಳ್ಳಿ. ಸರ್ಕಾರದಿಂದ ಉತ್ತರ ಕೊಡುವ ಸಂದರ್ಭದಲ್ಲಿ ನಿಮ್ಮ ಅಭಿಪ್ರಾಯಗಳನ್ನು ಹೇಳಿ. ಅಲ್ಲಿತನಕ ಅವರು ಹೇಳುವುದನ್ನು ಕೇಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ನಾನು ಹೇಳಿರುವ ಘಟನೆಗಳೆಲ್ಲ ಅಭಯಚಂದ್ರರವರಿಗೆ ಏಕೆ ಸುಳ್ಳಾಗಿ ಕಾಣಿಸಿತೋ ನನಗೆ ಗೊತ್ತಿಲ್ಲ. ಏಕೆಂದರೆ ಅವರಿಗೆ ದಿವ್ಯ ದೃಷ್ಟಿ ಇರಬಹುದು, ನಾನು ಅಲ್ಲಿ ಕಂಡಿರುವುದನ್ನು ಮಾತ್ರ ಹೇಳುತ್ತಿದ್ದೇನೆ. ಒಬ್ಬ 17 ವರ್ಷದ ವಿದ್ಯಾರ್ಥಿಯನ್ನು ಅಮಾನುಷವಾಗಿ ಅವನು ಅಂಗಲಾಚುತ್ತಿದ್ದರೂ ಸಹ ಆತನನ್ನು ಬರ್ಬರವಾಗಿ ಕೊಂದಿರುವುದರ ಬಗ್ಗೆ ನಾವೆಲ್ಲರೂ ಚೆನ್ನಾಗಿ ಯೋಚನೆಯನ್ನು ಮಾಡಬೇಕು. ಒಂದು ವೇಳೆ ನಮ್ಮ ನಿಮ್ಮ ಮಕ್ಕಳಿಗೇನಾದರೂ ಈ ರೀತಿ ಆಗಿದ್ದಲ್ಲಿ ನಮ್ಮ ರಕ್ತ ಒಂದು ಸಲ ಕುದಿಯುವುದಿಲ್ಲವೇ? ಸರ್ಕಾರ ನಿರ್ದಾಕ್ಷಿಣ್ಯವಾಗಿ ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು. ಅಲ್ಲಿನ ಉಸ್ತುವಾರಿ ಮಂತ್ರಿಗಳು ಯಾರು ಕೊಲೆ ಮಾಡಿದ್ದಾರೆ ಅವರನ್ನು ಒದ್ದು ಒಳಗೆ ಹಾಕಿ ಎಂದು ಹೇಳಿದ್ದರೆ ಹನುಮಪ್ಪನಾಯಕನ ಬಂಧನಕ್ಕೆ 6 ತಿಂಗಳು ಬೇಕಾಗುತ್ತಿತ್ತಾ? ಹಾಗಾದರೆ ಅಲ್ಲಿ ಏನೋ ರಾಜಕಾರಣ ನಡೆದಿದೆ ಎಂದು ತಮಗೆ ಅನಿಸುವುದಿಲ್ಲವೇ? ಈ ಯಲ್ಲಾಲಿಂಗನ ಪ್ರಕರಣದಲ್ಲಿ ಯಾರು ರಾಜಕೀಯ ಮಾಡುತ್ತಿದ್ದಾರೆ? ಅಲ್ಲಿ ಆ ಹುಡುಗನ ಕೊಲೆ ಆಗಿರುವುದು ಸುಳ್ಳೆ? 6 ತಿಂಗಳವರೆಗೆ ಆರೋಪಿಗಳನ್ನು ಬಂಧಿಸದೇ ಇರುವುದು ಸುಳ್ಳೇ? ಭಾರತೀಯ ಜನತಾ ಪಕ್ಷವೂ ಸೇರಿದಂತೆ ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾರೆ ಪ್ರತಿಭಟನೆ ಮಾಡಿರುವುದು ಸುಳ್ಳೇ? ಆಳುವ ಪಕ್ಷದ ಕೆಲವರು ಇದು ತಪ್ಪು ಎಂದಿದ್ದು ಸುಳ್ಳಾ? ವಾಸ್ತವ ಏನೆಂದು ಮತ್ತಿಕಟ್ಟಿಯವರು ಹೇಳಬೇಕು, ಸಭಾಪತಿಗಳಾಗಿದ್ದ ತಮಗೆ ಈ ಘಟನೆ ನೋವನ್ನುತರುವುದಿಲ್ಲವೇ? ನಿಮ್ಮ ಅಸಹಾಯತನ ನನಗೆ ಗೊತ್ತಿದೆ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಇದರಲ್ಲಿ ನನ್ನ ಅಸಹಾಯಕತನ ಏನೂ ಇಲ್ಲ. ಈಶ್ವರಪ್ಪನವರೆ, ನಾನು ಸುಮ್ಮನೆ ಕುಳಿತಿದ್ದರೂ ಸಹ ಅವರು ನನ್ನ ಹೆಸರನ್ನು ತೆಗೆಯುತ್ತಿದ್ದಾರೆ. ನಿಜವಾಗಿ ಮತ್ತಿಕಟ್ಟಿಯವರ ಸಂಗತಿ ನೋಡಿದರೆ ನನಗೆ ನೋವಾಗುತ್ತದೆ. ಇಲ್ಲದಿದ್ದರೆ ಅವರು ಕೈಯೆತ್ತಿ ಎಂತಹ ಅಪರಾಧಿಗಳನ್ನಾದರೂ ಕೂಡಲೇ ಬಂಧಿಸಬೇಕೆಂದು ಹೇಳಿಬಿಟ್ಟಿರುತ್ತಿದ್ದರು. ಈಗ ಅವರು ಏನು ಮಾಡಲಾಗದೇ ಅಸಹಾಯಕರಾಗಿ ಸುಮ್ಮನೆ ನೋಡಿಕೊಂಡು ಇರುವ ಪರಿಸ್ಥಿತಿ ಬಂದಿದೆ. ನಾನು ಕೊನೆಯದಾಗಿ ಸಭಾನಾಯಕರಲ್ಲಿ ವಿನಂತಿಯನ್ನು ಮಾಡುವುದೇನೆಂದರೆ ದಯವಿಟ್ಟು ಇದನ್ನು ಸಭಾನಾಯಕರು ಮತ್ತು ಗೃಹಮಂತ್ರಿಗಳು ಕೇಳಬೇಕು,

**ಡಾ॥ ಮತ್ತಿಕಟ್ಟಿ ವೀರಣ್ಣ:–** ಇದರಲ್ಲಿ ನನ್ನ ಹೆಸರನ್ನು ಏಕೆ ಹೇಳುತ್ತೀರಿ?

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮರೆತಿದ್ದನ್ನು ನೆನಪು ಮಾಡುವುದು ನನ್ನ ಕರ್ತವ್ಯ. ಅದನ್ನು ನಾನು ಮಾಡುತ್ತಿದ್ದೇನೆ. ಏಕೆಂದರೆ ಅವರದ್ದು ನುಡಿದಂತೆ ನಡೆಯುವ ಸರ್ಕಾರ. ಈ ಮಾತನ್ನು ಸಭಾನಾಯಕರು ವಾರಕ್ಕೆ ಮೂರು ಸಲ ಹೇಳುತ್ತಾರೆ. ಸಂವಿಧಾನದ ಪ್ರಕಾರ ಗೃಹಮಂತ್ರಿಗಳಾಗಿ ಪ್ರಮಾಣವಚನ ಸ್ವೀಕರಿಸುವ ಸಂದರ್ಭದಲ್ಲಿ ರಾಗದ್ವೇಷಗಳಿಲ್ಲದೇ ಯಾವುದೇ ವರ್ಗ, ಯಾವುದೇ ಜಾತಿಯನ್ನು ಗಮನಿಸದೇ ಪ್ರಾಮಾಣಿಕವಾಗಿ ಈ ದೇಶದ ಎಲ್ಲಾ ಪ್ರಜೆಗಳಿಗೂ ಶಾಸನಬದ್ಧ ಅಧಿಕಾರವನ್ನು ಹಂಚುತ್ತೇನೆಂದು ಪ್ರಮಾಣ ಮಾಡಿರುವ ಗೃಹ ಮಂತ್ರಿಗಳು ಇದಕ್ಕೆ ಉತ್ತರ ನೀಡುತ್ತಾರೆಂದು ನಾನು ಭಾವಿಸುತ್ತೇನೆ. ಅಭಯಚಂದ್ರರವರದ್ದು ಯಾವಾಗಲೂ ಇದ್ದದ್ದೇ ನಮ್ಮ ಜಿಲ್ಲೆಯಲ್ಲಿ ನಾನು ಯಾವಾಗಲೂ ಅವರನ್ನು ನೋಡುತ್ತಲೇ ಇರುತ್ತೇನೆ. ಮಧ್ಯೆ ಮಧ್ಯೆ ಎದ್ದು ಹಾರುವುದು ಸುಮ್ಮನೆ ತಣ್ಣಗೆ ಕುಳಿತುಕೊಳ್ಳುವುದು, ಕರೆದಾಗ ಮಾತನಾಡದೇ ಇರುವುದು ಮತ್ತು ಕರೆಯದೇ ಇದ್ದಾಗ ಓಡಿ ಬಂದು ಗಲಾಟೆ ಮಾಡುವುದು ಇವೆಲ್ಲ ನಮಗೆ ಅಭ್ಯಾಸ ಇರುವಂಥದ್ದು. ದಯವಿಟ್ಟು ಅವರ ಬಗ್ಗೆ ನೀವು ಯೋಚನೆಯನ್ನು ಮಾಡಬೇಡಿ.

**ಶ್ರೀ ಅಭಯಚಂದ್ರ ಜೈನ್:–** ಮಾನ್ಯ ಸಭಾಪತಿಯವರೆ ನಾನು ವಿನಾಕಾರಣ ಕರೆಯದೇ ಮಾತನಾಡುವುದಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ಈಗ ನೀವು ಅವರನ್ನು ಮಾತನಾಡಲು ಕರೆದಿರಾ? ಆದರೂ ನೋಡಿ ಮಾತನಾಡುತ್ತಿದ್ದಾರೆ. ಕರೆಯದೇ ಬಂದವರನ್ನು ನಮ್ಮಲ್ಲಿ ಏನೆಂದು ಕರೆಯುತ್ತಾರೆ? ಅಷ್ಟಾಗಿ ಕೂಡ ನನಗೆ ಅವರ ಮೇಲೆ ಬೇಸರ ಇಲ್ಲ. ಏಕೆಂದರೆ ಅವರು ನಮ್ಮ ಜಿಲ್ಲೆಯವರು ಅವರ ಮೆಲೆ ನನಗೆ ಪ್ರೀತಿಯಿದೆ.

**ಶ್ರೀ ಅಭಯಚಂದ್ರ ಜೈನ್:–** ನಮಗೂ ಜವಾಬ್ದಾರಿ ಹೊಣೆಗಾರಿಕೆ ಇದೆ, ನಮ್ಮ ಬಗ್ಗೆ ಮಾತನಾಡುವ ಅವಶ್ಯಕತೆ ಇಲ್ಲ.

**(ಗೊಂದಲ)**

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಗಳೇ, ಇದು ನಿಜವಾಗಿಯೂ ಇವರಿಬ್ಬರ ಯಕ್ಷಗಾನ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಅವರಿಗೆ ಗೊತ್ತಿದ್ದರೆ ಗೊತ್ತಿರಲಿ, ನನ್ನದೇನೂ ಆಕ್ಷೇಪಣೆ ಇಲ್ಲ. ವಾಸ್ತವಿಕವಾದ ವಿಚಾರವನ್ನು ನಾನು ಹೇಳಿದ್ದು, ಅವರ ಎಲ್ಲಾ ಮಾತುಗಳನ್ನು ನಾನು ಸಹಿಸಿಕೊಳ್ಳುತ್ತೇನೆ. ಏಕೆಂದರೆಅವರ ಮೇಲೆ ಸಾಕಷ್ಟು ಪ್ರೀತಿ ಇದೆ. ಒಂದು ವಿಚಾರವನ್ನು ಮಾನ್ಯ ಗೃಹಮಂತ್ರಿಗಳು ಗಮನಿಸಬೇಕು, ಈ ಯಲ್ಲಾಲಿಂಗನ ವಿಚಾರದಲ್ಲಿ ರಾಜಕೀಯ ಮಾಡುವುದರಿಂದ

ಯಾರಿಗೂ ಗೊಂದಲ ಆಗಬೇಕಾಗಿಲ್ಲ. ಗೃಹಮಂತ್ರಿಗಳಾಗಿ ತಮಗೆ ಆತ್ಮಸ್ಥೈರ್ಯ ಇದ್ದಲ್ಲಿ, ಶಕ್ತಿ ಸಾಮರ್ಥ್ಯ ಇದ್ದಲ್ಲಿ ಸಾಮಾಜಿಕ ನ್ಯಾಯಕ್ಕೆ ಬದ್ಧರಾಗಿದ್ದಲ್ಲಿ ಹಿಂದುಳಿದ ವರ್ಗದ ಅಹಿಂದ ಚಳುವಳಿಯಲ್ಲಿ ಮೇಲೆದ್ದು ಬಂದಿರುವ ಸರ್ಕಾರ ಆಗಿದ್ದಲ್ಲಿ ಎಲ್ಲರಿಗೂ ಸಾಮಾಜಿಕ ನ್ಯಾಯ ಕೊಡುವವರಾಗಿದ್ದಲ್ಲಿ ಗೃಹ ಮಂತ್ರಿಗಳಾಗಿ ಈ ಪ್ರಕರಣವನ್ನು ತಕ್ಷಣ ಸಿಬಿಐ ಗೆ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದನ್ನು ಸರ್ಕಾರ ಒಪ್ಪುವುದಿಲ್ಲವೆಂದು ನನಗೆ ಗೊತ್ತಿದೆ. ಇಂತಹದ್ದನ್ನು ಯಾವುದು ನೀವು ಒಪ್ಪುವುದಿಲ್ಲ.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:-** ತಮ್ಮ ಅಧಿಕಾರವಧಿಯ 5 ವರ್ಷಗಳಲ್ಲಿ ಯಾವುದನ್ನಾದರೂ ಸಿಬಿಐ ಗೆ ವಹಿಸಿದ್ದೀರಾ ಹೇಳಿ.

**ಶ್ರೀ ಅಭಯಚಂದ್ರ ಜೈನ್:-** ನೀವು ಯಾವ ಪ್ರಕರಣವನ್ನು ಸಿಬಿಐ ಗೆ ವಹಿಸಿದ್ದೀರಾ ಹೇಳಿ? ಸುಮ್ಮನೆ ಮಾತನಾಡಬಾರದು.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:-** ಅನೇಕ ಪ್ರಕರಣಗಳನ್ನು ಸಿಬಿಐ ಗೆ ಕೊಡುವುದಿಲ್ಲ ಎಂದು ಸಾಧಿಸಿ, ಆನಂತರ ಜನರ ಒತ್ತಾಯದ ಮೇರೆಗೆ ಸಿಬಿಐಗೆ ಒಪ್ಪಿಸಿದ್ದು ಜನರಿಗೆ ಗೊತ್ತಿದೆ. ಏಕೆಂದರೆ ಜನಾಭಿಪ್ರಾಯ ನಿಮ್ಮ ವಿರುದ್ಧ ಬರುತ್ತದೆ.

**ಶ್ರೀ ಎಸ್.ಆರ್. ಪಾಟೀಲ್:-** ನೀವು ಸಹ ಸಚಿವರಾಗಿದ್ದೀರಿ, ಒಂದಾದರೂ ಸಿಬಿಐ ಗೆ ಒಪ್ಪಿಸಿದ್ದೀರಾ? ರಾಜ್ಯದ ಸಂಪತ್ತನ್ನು ಲೂಟಿ ಹೊಡೆದು ದಗಲ್ ಬಾಜಿ ಮಾಡಿದರೂ ಸಹ ನಾವು 720 ಕಿ.ಮೀ ಪಾದಯಾತ್ರೆ ಮಾಡಿ ಶಂಖ ಹೊಡೆದರೂ ಒಂದು ಪ್ರಕರಣವನ್ನು ಸಿಬಿಐಗೆ ಒಪ್ಪಿಸಿಲ್ಲ. 5 ವರ್ಷ ಕಾಲ ಏನು ಮಾಡಲಿಲ್ಲ. ಎಲ್ಲವನ್ನು ಸಿಬಿಐ ಗೆ ಒಪ್ಪಿಸುವುದಾದರೆ ನಮ್ಮ ರಾಜ್ಯದಲ್ಲಿ ಪೊಲೀಸ್ ಇಲಾಖೆ ಏಕೆ ಇರಬೇಕು? ರಾಜ್ಯದಲ್ಲಿ ಪೊಲೀಸ್ ಇಲಾಖೆಯನ್ನು ಡಿಸಾಲ್ವ್ ಮಾಡಬೇಕೆ?

**(ಗೊಂದಲ)**

**ಶ್ರೀ ಅಭಯಚಂದ್ರ ಜೈನ್:-** ಇವರು ರಾಜಕಾರಣ ಮಾಡುತ್ತಿದ್ದಾರೆ.

**ಶ್ರೀ ಕೆ.ಬಿ .ಶಾಣಪ್ಪ:-** ಯಾರು ಇಲ್ಲಿ ರಾಜಕಾರಣ ಮಾಡುತ್ತಿದ್ದಾರೆ? ಅಲ್ಲಿ ಏನು ನಡೆದಿದೆ ಎನ್ನುವುದು ನಿಮಗೆ ತಿಳಿದಿದೆಯ? What is that he has said? He is giving all the details. ಜಿಲ್ಲಾ ಉಸ್ತುವಾರಿ ಸಚಿವರು ಕೊಲೆ ಮಾಡಿದ್ದಾರೆ ಎಂದು ಯಾರು ಹೇಳಿಲ್ಲ.

(ಗೊಂದಲ)

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ನೀವು ಅಧಿಕಾರದಲ್ಲಿದ್ದಾಗ ಒಂದಾದರೂ ಸಿಬಿಐ ಗೆ ವಹಿಸಿದ್ದೀರಾ?

**ಉಪ ಸಭಾಪತಿಯವರು:–** ಸರ್ಕಾರದಿಂದ ಉತ್ತರ ಕೊಡುವ ಸಂದರ್ಭದಲ್ಲಿ ನೀವು ಮಾತನಾಡಿ.

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ದೇಶದಲ್ಲಿ ನಡೆಯದಂತಹ ಪ್ರಕರಣಗಳು ನಡೆದರೂ ಸಹ ಯಾವುದನ್ನು ಸಿಬಿಐಗೆ ಒಪ್ಪಿಸಲಿಲ್ಲ. ಈಗ ಪ್ರತಿಯೊಂದಕ್ಕೂ ಸಿಬಿಐ ಎಂದು ಹೇಳುತ್ತಾರೆ. ಏನು ಈಗ ಇದ್ದಕಿದ್ದ ಹಾಗೆ ಸಿಬಿಐ ಮೇಲೆ ಪ್ರೀತಿ ಬಂದಿರುವುದು.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೇ, I am very sorry to tell you about the behavior of the House.

**ಶ್ರೀ ಐವನ್ ಡಿಸೋಜಾ:–** ಈಗೆಲ್ಲ ಸಿಬಿಐ ಎನ್ನುವವರು ಆಗ ಏಕೆ ಸಿಬಿಐ ಗೆ ವಹಿಸಲಿಲ್ಲ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೇ, ನನ್ನ ವಿನಂತಿ ಏನೆಂದರೆ 17 ವರ್ಷದ ಯುವಕನೊಬ್ಬನನ್ನು ಅಟ್ಟಾಡಿಸಿಕೊಂಡು ಕೊಚ್ಚಿಕೊಂದು ಹಾಕಿದ್ದಾರೆ. ಆದರೆ ಆರು ತಿಂಗಳವರೆವಿಗೂ ಆರೋಪಿಗಳ ಬಂಧನ ಆಗಿರಲಿಲ್ಲ. ಇದರ ಬಗ್ಗೆ ಸಮಗ್ರವಾಗಿ ತನಿಖೆ ಆಗಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯಿಸುತ್ತೇನೆ. ಇದನ್ನು ಸರ್ಕಾರ ಸಿಬಿಐ ಗೆ ಒಪ್ಪಿಸಲಿ ಬಿಡಲಿ, ಒಟ್ಟಿನಲ್ಲಿ ಈ ವಿಚಾರದಲ್ಲಿ ಸಮಗ್ರ ತನಿಖೆ ಆಗಬೇಕು. ಏಕೆಂದರೆ ಅಲ್ಲಿರುವ ಸಾಮಾಜಿಕ ಸಂಘಟನೆಗಳು, ಹೆತ್ತವರಾದ ಕೆಂಚಮ್ಮ ವೀರಭದ್ರ ಮತ್ತು ಅವರ ಸಂಬಂಧಿಕರು ಈ ತನಿಖೆ ಮೇಲೆ ನಮಗೆ ವಿಶ್ವಾಸ ಇಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿರುವ ಅಥವಾ ಅವರ ಅಧೀನದಲ್ಲಿರುವ ಪೊಲೀಸ್ ಅಧಿಕಾರಿಗಳಾಗಲಿ ಅಥವಾ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳ ಅಧೀನದಲ್ಲಿರುವ ಸಿಒಡಿ ಮತ್ತು ಬೇರೆ ಯಾವುದೇ ಏಜೆನ್ಸಿಗಳ ಮೇಲೆ ನಮಗೆ ವಿಶ್ವಾಸ ಇಲ್ಲವೆಂದು ಹೇಳುತ್ತಿದ್ದಾರೆ. ಆಗ ಈ ಸದನದಲ್ಲಿ ಇದರ ಬಗ್ಗೆ ಯಾರನ್ನು ಕೇಳಬೇಕು.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಈ ರಾಜ್ಯದಲ್ಲಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಒಡಿ ಅಥವಾ ಸಿಐಡಿ  ಇಡೀ ರಾಷ್ಟ್ರದಲ್ಲಿ ಮಹಾರಾಷ್ಟ್ರ ಬಿಟ್ಟರೆ ನಮ್ಮ ರಾಜ್ಯದ ಪೊಲೀಸ್ ಅಧಿಕಾರಿಗಳು ಬಹಳ credible. ನಮ್ಮ ಅಧಿಕಾರಿಗಳು ಯಾವುದೇ ರೀತಿಯ ಪ್ರಭಾವಕ್ಕೆ ಒಳಗಾಗದೆ ಅತ್ಯಂತ ಪ್ರಾಮಾಣಿಕವಾಗಿ ಅವರು ತನಿಖೆಯನ್ನು ನಡೆಸಿ ಒಮ್ಮೊಮ್ಮೆ ಬಹಳ ಸಮಯ ಆದರೂ ಸಹ ಖಂಡಿತವಾಗಿಯೂ ಆ

ಅಪರಾಧಿಯನ್ನು ಹಿಡಿದು ಶಿಕ್ಷೆ ಮಾಡುವಂತಹ ಒಂದು ಸ್ಥೈರ್ಯ ನಮ್ಮ ಪೊಲೀಸ್ ಅಧಿಕಾರಿಗಳಿಗೆ ಇದೆ. ನಾನು ಸಭಾಪತಿಯ ಸ್ಥಾನದಲ್ಲಿ ಕುಳಿತು ನಿಮ್ಮವೇ 4–5 ಪ್ರಕರಣಗಳನ್ನು ಸಿಬಿಐ ಗೆ ಕೊಡಿಸಲಿಲ್ಲ. ನಮ್ಮ ಪೊಲೀಸ್ ಅಧಿಕಾರಿಗಳೇ ಅಷ್ಟು ಸಮರ್ಥರಿದ್ದಾರೆ ಎನ್ನುವ ಮಾತನ್ನು ಹೇಳಿದ್ದೇನು.

**ಶ್ರೀ ಗೋ. ಮದುಸೂದನ್:–** ಮಾನ್ಯ ಸಭಾಪತಿಗಳೇ, ವೀರಣ್ಣನವರು ಬಹಳ ಒಳ್ಳೆಯ ಮಾತುಗಳನ್ನು ಹೇಳಿದರು. ಆದರೆ ಇದೇ ಸರ್ಕಾರ ಕೆಲವೇ ದಿವಸಗಳ ಮುಂಚೆ ಅದೇ ಅಧಿಕಾರಿಗಳು ಸಿಂಗಲ್ ನಂಬರ್ ಲಾಟರಿಯಲ್ಲಿದ್ದಾರೆ ಎಂದು ಅದನ್ನು ಸಿಬಿಐ ಗೆ ಕೊಟ್ಟಿದ್ದಾರೆ. ಈಗ ಅದನ್ನು ವಾಪಸ್ಸು ಪಡೆಯಬೇಕೆಲ್ಲವೇ?

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಗಳೆ, ಇದು ಒಂದು ವ್ಯವಸ್ಥೆ, ಈ ವ್ಯವಸ್ಥೆಯನ್ನು dilute ಮಾಡಿದರೆ ಇದರಿಂದ ನಮ್ಮ ಪೊಲೀಸ್ ಇಲಾಖೆಯ ಆತ್ಮಸ್ಥರ್ಯೆ ಹೋದರೆ ಮುಂದೆ ಲಾ ಆಂಡ್ ಆರ್ಡ್‌ರ್ ನೋಡಿಕೊಳ್ಳುವುದಕ್ಕೆ, ನಿರಪರಾಧಿಗಳಿಗೆ ರಕ್ಷಣೆ ಕೊಡಲು, ಈ ರಾಜ್ಯದ ಕಾನೂನನ್ನು ರಕ್ಷಣೆ ಮಾಡಲು ಸಾಧ್ಯವಾಗುವುದಿಲ್ಲ. ಇಲ್ಲಿ ಎಲ್ಲರೂ ಒಬ್ಬರ ರೀತಿ ಒಬ್ಬರು ಇಲ್ಲ. ಮಧುಸೂದನ್‌ತರಹ ಬೇರೆಯವರು ಇಲ್ಲ, ಬೇರೆಯವರ ರೀತಿ ಮಧುಸೂದನ್ ಇಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಗಳೆ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ಕೊಡಿಸುತ್ತೀರಾ ಅಥವಾ ಮಂತ್ರಿಯಾಗಬೇಕು ಎಂದು ಆಸೆ ಇಟ್ಟುಕೊಂಡು ವಿಲಿವಿಲಿ ಒದ್ದಾಡುತ್ತಿರುವವರಿಂದ ಉತ್ತರ ಕೊಡಿಸುತ್ತೀರಾ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಇವರು ಸದನವನ್ನು ತಪ್ಪು ದಾರಿಗೆ ಎಳೆಯುತ್ತಿದ್ದಾರೆ. ಮಂತ್ರಿಗಳಾಗುವ ವಿಚಾರವನ್ನು ಬಿಡಿ. ಮಂತ್ರಿಯಾಗುವುದರಲ್ಲಿ ಏನು ಇದೆ? ಅದೇನು ಖಾಯಂ ಇರುತ್ತದೆಯೇ? ನೀವು ಖಾಯಂ ಆಗಿದ್ದೀರಾ ಹೇಳಿ. ರಾಜಕೀಯದಲ್ಲಿ ಇರುವಂತಹ ಬದ್ಧತೆ, ಗೌರವ ನಮಗೆ ಇದೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ನಮ್ಮ ಸಮಯವನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ನಮಗೆ ನೀವು ಸಮಯವನ್ನು ಕೊಡಬೇಕಾಗುತ್ತದೆ. ಅವರಿಗೆ ಮಾತು ನಿಲ್ಲಿಸಲು ಹೇಳಿ.

**ಉಪ ಸಭಾಪತಿಯವರು:–** ನಾನು ಹೇಳುತ್ತಿದ್ದೇನೆ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ನಾನು ಬೇರೆ ಯಾರ ಬಗ್ಗೆಯು ಹೇಳುತ್ತಿಲ್ಲ. ನಾನು ಮಹತ್ವದ ವಿಚಾರವನ್ನು ಹೇಳುತ್ತಿದ್ದೇನೆ. ನಮ್ಮ ಪೊಲೀಸರ ಬಗ್ಗೆ ಹೀಗೆ ಮಾತನಾಡಬೇಡಿ.

**ಉಪ ಸಭಾಪತಿಯವರು:–** ಮತ್ತಿಕಟ್ಟಿಯವರೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಗಳೆ, ಯಲ್ಲಾಲಿಂಗನ ಪ್ರಕರಣದಲ್ಲಿ ಅನಗತ್ಯ ವಿಳಂಬವಾಗಿದೆ. ಎಲ್ಲರಿಗೂ ಚೆನ್ನಾಗಿ ಗೊತ್ತಿದೆ. ಪ್ರಭಾವಿ ವ್ಯಕ್ತಿಗಳ ಒತ್ತಡಕ್ಕೆ ಆಡಳಿತ ಮಣಿದಿದೆ ಎನ್ನುವುದು ಜನಾಭಿಪ್ರಾಯ. ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗಿದೆ. ಧ್ವನಿಯನ್ನೆ ಕಳೆದುಕೊಂಡ ಜನರು ಇಲ್ಲಿ ಇದ್ದಾರೆ. ಅಂತಹ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಭಯದ ವಾತಾವರಣ ನಿರ್ಮಾಣವಾಗಿದೆ. ಜನರು ಸರ್ಕಾರದ ಮೇಲೆ, ಆಡಳಿತದ ಮೇಲೆ, ಪೊಲೀಸರ ಮೇಲೆ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಪೊಲೀಸ್ ಇಲಾಖೆ ಒತ್ತಡಕ್ಕೆ ಮಣಿದಿರುವ ಸ್ಪಷ್ಟಸಂಗತಿಗಳು ಹೊರಗೆ ಬರುತ್ತಿವೆ. ಸಾರ್ವಜನಿಕರ ಒತ್ತಡದ ನಂತರ ಪೊಲೀಸ್ ಇಲಾಖೆ ಕ್ರಮ ತೆಗೆದುಕೊಳ್ಳುವುದು ಅತ್ಯಂತ ಬೇಜವಾಬ್ದಾರಿತನದ ಪರಮಾವಧಿಯಾಗಿದೆ. ನಾನು ತಮ್ಮ ಮೂಲಕ ಸರ್ಕಾರಕ್ಕೆ ಆಗ್ರಹಪಡಿಸುತ್ತೇನೆ. ನನ್ನ ಜೀವ ತೆಗೆಯಬೇಡಿ ನಾನು ನಿಮ್ಮ ಕಾಲು ಹಿಡಿಯುತ್ತೇನೆ ಎಂದು ಹೇಳಿದಂತಹ 17 ವರ್ಷದ ಯಲ್ಲಾಲಿಂಗನಿಗೆ ನ್ಯಾಯ ಕೊಡುತ್ತೀರಾ ಎನ್ನುವುದನ್ನು ನಾನು ಸರ್ಕಾರಕ್ಕೆ ಕೇಳುತ್ತೇನೆ. ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರನ್ನು ಬದಿಗೆ ಒತ್ತಿ ಕೆಲಸವನ್ನು ಮಾಡಬೇಕೆಂದು ನನ್ನ ಆಗ್ರಹ.

**ಡಾ. ಸಿ.ಎನ್. ಅಶ್ವಥ್‌ನಾರಾಯಣ (ವಿಧಾನಸಭಾಕ್ಷೇತ್ರ):–** ಮಾನ್ಯ ಸಭಾಪತಿಗಳೆ, ಕೊಪ್ಪಳ ಜಿಲ್ಲೆಯ ಯಲ್ಲಾಲಿಂಗನ ಪ್ರಕರಣ ನೋಡಿದಾಗ, ಈ ದೇಶದ ಕೆಲವು ಘಟನೆಗಳು ನಮಗೆ ನೆನಪಿಗೆ ಬರುತ್ತವೆ. ಬಿಹಾರದಲ್ಲಿ ಸತ್ಯದೇವ ದುಬೆ ಎನ್ನುವ ಐಎಎಸ್ ಅಧಿಕಾರಿಯವರು ಬಿಹಾರದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣದ ಸಮಯದಲ್ಲಿ ನಡೆದ ಅವ್ಯವಹಾರದ ಬಗ್ಗೆ ಪ್ರಧಾನ ಮಂತ್ರಿಗಳಿಗೆ ಈ ಕಾಮಗಾರಿಯಲ್ಲಿ ಅವ್ಯವಹಾರದ ನಡೆದಿದೆ ಎಂದು ಒಂದು ಪತ್ರವನ್ನು ಬರೆಯುತ್ತಾರೆ. ಪ್ರಧಾನ ಮಂತ್ರಿಗಳ ಕಾರ್ಯಾಲಯದಲ್ಲಿ ಈ ಪತ್ರವನ್ನು ಯಾರೊ ಲಿಂಕ್ ಮಾಡಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಸುದ್ದಿಯನ್ನು ಕೊಡುತ್ತಾರೆ. ನಿಮ್ಮ ಕಾಮಗಾರಿಯ ಬಗ್ಗೆ ಸತ್ಯದೇವ ದುಬೆಯವರು ಪ್ರಧಾನ ಮಂತ್ರಿಗಳಿಗೆ ಪತ್ರವನ್ನು ಬರೆದಿದ್ದಾರೆ ಎಂದು ಹೇಳುತ್ತಾರೆ. ಇದರ ನಂತರ ಆ ಅಧಿಕಾರಿಯ ಕೊಲೆಯಾಗುತ್ತದೆ. ಇಂಡಿಯನ್ ಆಯಿಲ್ ಕಾರ್ಪೋರೇಷನ್‌ನಲ್ಲಿ ನಮ್ಮ ಕರ್ನಾಟಕದ ಕೆ.ಜಿ.ಎಫ್‌ನ ಮಂಜುನಾಥ್ ಎನ್ನುವ ಅಧಿಕಾರಿಯೊಬ್ಬ ಇಲ್ಲಿ ಪೆಟ್ರೋಲ್‌ಗೆ ಆಯಿಲ್ ಮಿಕ್ಸ್ ಮಾಡಿ ದಂಧೆ ನಡೆಸುತ್ತಿದ್ದಾರೆ ಎನ್ನುವ ವಿಚಾರವನ್ನು ಬೆಳಕಿಗೆ ತಂದ ಸಂದರ್ಭದಲ್ಲಿ ಆ ವ್ಯಕ್ತಿಯ ಕೊಲೆಯಾಗುತ್ತದೆ. ಇದೆಲ್ಲವನ್ನು ನೋಡಿದಾಗ ಪೂಜಾರ್‌ರವರು ಮತ್ತು ಆ ಜಿಲ್ಲೆಗೆ ಸಂಬಂಧಪಟ್ಟ ಸೋಮಣ್ಣ ಬೇವಿನಮರದರವರು ಸಾಕಷ್ಟು ವಿಚಾರಗಳನ್ನು ಹೇಳಿದ್ದಾರೆ. ಇಲ್ಲಿ ನಮಗೆ ಒಂದು ಅನುಮಾನ ಬರುವುದು ಏನೆಂದರೆ, ಜನವರಿ 10ನೇ ತಾರೀಖು ಕೊಲೆಯಾದಂತಹ ವ್ಯಕ್ತಿಯ ಶವವನ್ನು ಸಂಸ್ಕಾರ ಮಾಡದೆ ಸುಟ್ಟು ಹಾಕಿದ್ದಾರೆ. ಆ ಕಡತ

ನಾಲ್ಕು ತಿಂಗಳು ರೈಲ್ವೆ ಇಲಾಖೆಯಲ್ಲಿ ಧೂಳು ಹಿಡಿದು ಕುಳಿತಿದೆ. ಆ ಕಡತದ ಕಡೆಗೆ ಯಾರು ಗಮನವನ್ನೆ ಕೊಡುವುದಿಲ್ಲ. ಅದರ ಬಗ್ಗೆ information ಬಂದ ಮೇಲೆ ನಮ್ಮ ರಾಜ್ಯದ ಪೊಲೀಸ್‌ನವರು ಅದನ್ನು ಜವಾಬ್ದಾರಿಯುತವಾಗಿ ತೆಗೆದುಕೊಂಡು ರೈಲ್ವೆ ಪೊಲೀಸ್‌ನವರಿಂದ ಕಡತವನ್ನು ತರಿಸಿಕೊಂಡು ಆ ಪ್ರಕರಣವನ್ನು ಭೇದಿಸಿದ ಮೇಲೆ ಈ ಪ್ರಕರಣದಲ್ಲಿ ಕೆಲವು ಆರೋಪಿಗಳು ಇದ್ದಾರೆ ಎನ್ನುವುದು ಗೊತ್ತಾಗಿ, ಕೆಲವು ವ್ಯಕ್ತಿಗಳನ್ನು ಜೈಲಿಗೆ ಹಾಕುತ್ತಾರೆ. ಪ್ರಾರಂಭಿಕ ಹಂತದಲ್ಲಿ ನಮ್ಮ ಪೊಲೀಸ್‌ನವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದನ್ನು ನಾವು appreciate ಮಾಡುತ್ತೇವೆ. ತದನಂತರ ಆ ಕೊಲೆಗೆ ಬೇರೆ–ಬೇರೆ ತಿರುವುಗಳು ಬರುತ್ತವೆ. ಈ ಕೇಸ್ ಮೇಲೆ ಬೇರೆ–ಬೇರೆ ರೀತಿಯ ಒತ್ತಡಗಳು ಬರುತ್ತವೆ. ನಾನು ಬೆಂಗಳೂರಿನಲ್ಲಿರುವಾಗ ಪೇಪರ್‌ನಲ್ಲಿ ಈ ಪ್ರಕರಣದ ಬಗ್ಗೆ ಓದಿದೆ. ಬೈಕ್ ನೀಡದಕ್ಕೆ ಕೊಲೆಯಾಗಿರುವ ಯಲ್ಲಾಲಿಂಗ ಪ್ರಕರಣಕ್ಕೆ ಹೊಸ ತಿರುವು. ಸಿಐಡಿ ತನಿಖೆಗೆ ಪ್ರಕರಣ ಒಪ್ಪಿಸಲು ಕಸರತ್ತು. ಕೊಪ್ಪಳ ಶಾಸಕರಿಂದ ಜೈಲಿನಲ್ಲಿರುವ ಆರೋಪಿಗಳ ಭೇಟಿ ಎನ್ನುವುದು ಪತ್ರಿಕೆಯಲ್ಲಿ ಬಂದಿದೆ. ಕಾಂಗ್ರೆಸ್ ಶಾಸಕರು ಅಲ್ಲಿಗೆ ಭೇಟಿ ಕೊಟ್ಟಾಗ ನಾನು ಜೈಲಿನ ವ್ಯವಸ್ಥೆಯನ್ನು ನೋಡಲು ಹೋಗಿದ್ದೆ ನನಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ, ಆರೋಪಿಗಳನ್ನು ನೋಡಲು ನಾನು ಹೋಗಿರಲಿಲ್ಲ ಎಂದು ಪತ್ರಿಕೆಗಳಿಗೆ ಹೇಳಿಕೆಯನ್ನು ಕೊಡುತ್ತಾರೆ. ಶ್ರೀ ರಾಘವೇಂದ್ರ ಎನ್ನುವವರು ಅಲ್ಲಿಯ ಶಾಸಕರು. ಅವರು ಕ್ಷೇತ್ರದ ಶಾಸಕರು ಇರಬಹುದು, ಅವರ ಕ್ಷೇತ್ರದಲ್ಲಿ ಬರುವ ಜೈಲಿಗೆ ಅವರು ಭೇಟಿ ಕೊಟ್ಟಿರಬಹುದು. ಸಾರ್ವಜನಿಕರಿಗೆ ಏನು ಅನುಮಾನ ಬರುತ್ತದೆ, ಒಂದೇ ಪಕ್ಷದ ಅನುಮಾನಾಸ್ಪದ ವ್ಯಕ್ತಿ ಜೈಲಿನಲ್ಲಿದಾಗ ಅದೇ ಪಕ್ಷದ ಶಾಸಕರು ಜೈಲಿಗೆ ಭೇಟಿ ಕೊಡುತ್ತಾರೆ ಎಂದಾಗ ಸಹಜವಾಗಿ ಅಪರಾಧಿಗಳನ್ನು ಭೇಟಿ ಮಾಡಲು ಹೋಗಿದ್ದಾರೆ ಎನ್ನುವ ಸಂದೇಹ ಬರುತ್ತದೆ. ಅದೇ ಸುದ್ದಿ ಪತ್ರಿಕೆಗಳಲ್ಲಿ ಬರುತ್ತದೆ. ನಂತರ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ಕೊಡುವುದು, ಅವರ ಮನೆಗಳಿಗೆ ಭೇಟಿ ಕೊಡುವುದು, ಕೆಂಚಮ್ಮನವರಿಗೆ ಏನು ಹೇಳಿ ಕಳುಹಿಸಿದ್ದಾರೆ ಎಲ್ಲವು ಸಾಕಷ್ಟು ಸುದ್ದಿಗಳು ಪತ್ರಿಕೆಗಳಲ್ಲಿ ಬಂದಿವೆ. ರಾಜ್ಯದಲ್ಲಿ ಪ್ರತಿಯೊಂದು ವಿಷಯಕ್ಕೆ ಏಕೆ ಅನುಮಾನ ಬರುತ್ತದೆ ಎಂದರೆ, ಕರ್ನಾಟಕ ರಾಜ್ಯದಲ್ಲಿ ಇಂತಹ ಪ್ರಕರಣಗಳು ಸಾಕಷ್ಟು ನಡೆದಿವೆ. ಮೈಸೂರಿನ ರಶ್ಮೀ ಮೇಲೆ ನಡೆದಿರುವ ಹಲ್ಲೆ ಪ್ರಕರಣ, ಮಂಜುನಾಥ್ ಬಂಡಿ ಪ್ರಕರಣದಲ್ಲಿ ಕರ್ನಾಟಕ ರಾಜ್ಯದ ಪೊಲೀಸ್‌ನವರು ತನಿಖೆ ಮಾಡಿ ವರದಿಯನ್ನು ಕೊಟ್ಟರು. ಆ ಮಂಜುನಾಥ್ ಬಂಡಿಯವರು ಹಾರಿಸಿರುವುದು ಪೊಲೀಸ್ ಇಲಾಖೆಯ ಗುಂಡು ಎನ್ನುವ ವರದಿಯನ್ನು ಕೊಟ್ಟರು. ಇವೆಲ್ಲವನ್ನು ನೋಡಿದಾಗ ಎಲ್ಲೊ ಒಂದು ಕಡೆ ಇಲಾಖೆಯ ಮೇಲೆ ಅನುಮಾನ ಬರುತ್ತದೆ. ರೈಲ್ವೆ ಇಲಾಖೆಯಲ್ಲಿರುವ ಆ ಕಡತವನ್ನು ತಂದು ಪ್ರಾಮಾಣಿಕವಾಗಿ ಆ ಕೇಸನ್ನು ಭೇದಿಸಿ ಅಪರಾಧಿಯನ್ನು ಒಳಗಡೆ ಹಾಕಿದರು. ಅಪರಾಧಿಯನ್ನು ಒಳಗೆ ಹಾಕಿದ ಮೇಲೆ ಆ ತನಿಖೆ ಚುರುಕುಗೊಳ್ಳುವುದಿಲ್ಲ. ತನಿಖೆ ಹಾಗೆ ನಿಲ್ಲುತ್ತದೆ. ಒತ್ತಡಗಳು ಪ್ರಾರಂಭವಾಗಿವೆ ಎನ್ನುವ ಸುದ್ದಿಗಳು

ಬರುತ್ತವೆ. ಆ ಜಿಲ್ಲೆಯ ಒಂದು ರೇಷನ್ ಡಿಪೋ ಬಗ್ಗೆ ಮಾತನಾಡಿದರೆ ಮನೆಗೆ ನುಗ್ಗಿ ಹೊಡೆದು ಮನೆಗೆ ಬೆಂಕಿ ಇಡುತ್ತಾರೆ. ಹುಷಾರು ಈ ಬಗ್ಗೆ ಮಾತನಾಡಿದರೆ ಎಂದು ಹೇಳುತ್ತಾರೆ. ಇದೆಲ್ಲವನ್ನು ನೋಡಿದರೆ 'ಭೂತಯ್ಯನ ಮಗ ಅಯ್ಯು' ಸಿನಿಮಾದಲ್ಲಿ ಜೋಡಿದಾರಿಕೆ ಮಾಡುವ ವ್ಯಕ್ತಿ ಒಬ್ಬ ಹಿಂದುಳಿದ ವರ್ಗದ ವ್ಯಕ್ತಿಯ ಮನೆಗೆ ನುಗ್ಗಿ ಹಸು ಸಮೇತ ಕೊಟ್ಟಿಗೆಗೆ ಬೆಂಕಿ ಇಡುವುದನ್ನು ನಾವು ನೋಡಿದ್ದೇವೆ. ಆದರೆ ಇವತ್ತು ಕೊಪ್ಪಳ ಜಿಲ್ಲೆಯಲ್ಲಿ ಇದು ನಡೆಯುತ್ತಿದೆ. ಇದರಿಂದ ಪ್ರತಿಯೊಬ್ಬರಿಗೂ ಅನುಮಾನ ಬರುತ್ತದೆ. ಉತ್ತರ ಕರ್ನಾಟಕದ ಅಭಿವೃದ್ಧಿ ಬಗ್ಗೆ ಚರ್ಚೆ ಮಾಡಲು ಬೆಳಗಾವಿಯಲ್ಲಿ ವಿಶೇಷ ಅಧಿವೇಶನ ನಡೆದಾಗ, ಇಲ್ಲಿ ಅಭಿವೃದ್ಧಿ ಬಗ್ಗೆಯೇ ಮಾತನಾಡಬೇಕು ಎಂದು ನಾವೆಲ್ಲರೂ ಪಕ್ಷಾತೀತವಾಗಿ ಮಾತನಾಡುತ್ತೇವೆ. ಉತ್ತರ ಕರ್ನಾಟಕ ಅಭಿವೃದ್ಧಿಯಾಗಿರುವುದಿಲ್ಲ, ಹೈದ್ರಾಬಾದ್-ಕರ್ನಾಟಕ, ಮುಂಬೈ ಕರ್ನಾಟಕ ಈ ಪ್ರದೇಶಗಳ ಅಭಿವೃದ್ಧಿ ಬಗ್ಗೆ ಮಾತ್ರ ಮಾತನಾಡಬೇಕು ಎಂದು ನಾವೆಲ್ಲರು ಪಕ್ಷಭೇದ ಮರೆತು ಹೇಳುತ್ತೇವೆ. ಶಾಲೆಗೆ ಹೋಗುವಂತಹ 17 ವರ್ಷದ ಯುವಕ ಆ ಜಿಲ್ಲೆಯ ಯಾವುದೇ ಒಂದು ಕೆಲಸದಲ್ಲಿ ಅವ್ಯವಹಾರವಾಗಿದೆ ಎಂದು ಮಾತನಾಡಿದಾಗ ಅವನ ಕೊಲೆಯಾಗುತ್ತದೆ ಎಂದಾಗ ನಾವೆಲ್ಲರೂ ಪಕ್ಷಾತೀತವಾಗಿ ಅಪರಾಧಿಗಳ ವಿರುದ್ಧ ಧ್ವನಿ ಎತ್ತಬೇಕಾಗುತ್ತದೆ. ಈ ಯಲ್ಲಾಲಿಂಗ ಪ್ರಕರಣ ಬಿಜೆಪಿಗೆ ಜನತಾದಳಕ್ಕೆ ಸಂಬಂಧಪಟ್ಟ ವಿಚಾರ ಎಂದು ಅಲ್ಲ. ಕೊಲೆ ನಡೆದ ಸಂದರ್ಭದಲ್ಲಿ ಯಾವುದೇ ರಾಜಕೀಯ ಪಕ್ಷ ಈ ಸುದ್ದಿಯನ್ನು ಇಟ್ಟುಕೊಂಡಿರುವುದಿಲ್ಲ. ಅಲ್ಲಿನ ಸಾಮಾಜಿಕ ಸಂಘಟನೆಗಳು ಈ ವಿಚಾರವನ್ನು ಮೊದಲು ಬೆಳಕಿಗೆ ತಂದಿವೆ. ಸಾರ್ವಜನಿಕರ ಬಾಯಿಗೆ ಈ ವಿಷಯವನ್ನು ಕೊಟ್ಟಿರುವುದು ಅಲ್ಲಿನ ಕೆಲವು ಸಾಮಾಜಿಕ ಸಂಘಟನೆಗಳು. ನಂತರ ಬೇರೆ-ಬೇರೆ ರಾಜಕೀಯ ಪಕ್ಷಗಳು ಇದೊಂದು ರಾಜಕೀಯನ ಕೊಲೆ ಎಂದು ಆಗ ಈ ವಿಚಾರವನ್ನು ಬೇರೆಯವರು ಕೈಗೆತ್ತಿಕೊಂಡಿರುವುದು. ಆ ದೃಷ್ಟಿಯಲ್ಲಿ ಈಗಾಗಲೆ ಸಾಕಷ್ಟು ವಿಚಾರಗಳನ್ನು ಪೂಜಾರ್‌ರವರು, ಸೋಮಣ್ಣ ಬೇವಿನಮರದರವರು ಮಾತನಾಡಿದ್ದಾರೆ. ನೀವು ಪ್ರತಿಯೊಂದಕ್ಕೂ ಸಿಬಿಐಗೆ ಕೊಡಲು ಕೇಳುತ್ತೀರಿ, ನಿಮ್ಮ ಪಕ್ಷ ಇದ್ದಾಗ ಎಷ್ಟು ಪ್ರಕರಣಗಳನ್ನು ಸಿಬಿಐಗೆ ಕೊಟ್ಟಿದ್ದೀರಿ ಎನ್ನುವ ಪ್ರಶ್ನೆ ಆ ಕಡೆಯಿಂದ ಬಂದೇ ಬರುತ್ತದೆ. ನಮ್ಮ ಸರ್ಕಾರದಲ್ಲಿ ನ್ಯಾಯ ಕೇಳಿದಾಗ ಕೊಲೆ ಮಾಡಿಸಿದಂತಹ ಪ್ರಕರಣಗಳು ಯಾವುದೂ ಇಲ್ಲ, ಪೊಲೀಸ್ ಅಧಿಕಾರಿಗಳು ಕೊಲೆಯಾದಂತಹ ಪ್ರಕರಣಗಳು ಯಾವುದೂ ಇಲ್ಲ, ಪೊಲೀಸ್ ಬುಲೆಟ್‌ನಿಂದ ಕೊಲೆಯಾದ ಪ್ರಕರಣಗಳೂ ಯಾವುದೂ ಇಲ್ಲ. ಐಎಎಸ್ ಅಧಿಕಾರಿ ಮೇಲೆ ಹಲ್ಲೆ ನಡೆದ ಪ್ರಕರಣಗಳು ಯಾವುದೂ ಇಲ್ಲ. ಈ ಸರ್ಕಾರ ಬಂದ ಮೇಲೆ ಇಂತಹ ಪ್ರಕರಣಗಳು ನಡೆದಾಗ ಪೊಲೀಸ್ ಇಲಾಖೆ ಮೇಲೆ ಅನುಮಾನ ಬರುವುದು ಸಹಜ. ಆ ದೃಷ್ಟಿಯಿಂದ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಆ ಹುಡುಗ ಧ್ವನಿ ಎತ್ತಿದ್ದು, ಆ ಹುಡುಗನಿಗೆ ನ್ಯಾಯ ಹಾಗೂ ಆತನ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಸರಿಯಾದ ತನಿಖೆ ಆಗಬೇಕು. ಸಹಜವಾಗಿ ಈ ಪ್ರಕರಣ delay ಆದ ಸಂದರ್ಭದಲ್ಲಿ

ಗೃಹ ಇಲಾಖೆ ವಿಫಲವಾಗಿದೆ, ಗೃಹ ಸಚಿವರು ರಾಜೀನಾಮೆ ಕೊಡಬೇಕು ಎಂದು ಒತ್ತಡ ಹೇರುವುದು ಸಹಜ. ಇದನ್ನು ಸಿಬಿಐಗೆ ಒಪ್ಪಿಸಲಿ, ಇದರಲ್ಲಿ ಈಗಾಗಲೇ ಜಿಲ್ಲಾ ಉಸ್ತುವಾರಿ ಸಚಿವರ ಪ್ರಭಾವ ಇದೆ ಎನ್ನುವ ಬಗ್ಗೆ ಜನರು ಮಾತನಾಡುತ್ತಿದ್ದಾರೆ. ಉಸ್ತುವಾರಿ ಸಚಿವರು ಯಾವುದೇ ರೀತಿಯ ತನಿಖೆಗೂ ಸಿದ್ದ ಹಾಗೂ ಈ ಕೇಸ್‌ಗೂ ಅವರಿಗೂ ಸಂಬಂಧ ಇಲ್ಲ ಎಂದು ಹೇಳಿದ್ದಾರೆ. ಆದ್ದರಿಂದ ಸಿಬಿಐ ಕೊಡಲಿ, ಇದರಿಂದ ಸಾಮಾಜಿಕ ನ್ಯಾಯ ಸಿಗಲಿ. ಆತ ಹಿಂದುಳಿದ ಒಬ್ಬ ವಿದ್ಯಾರ್ಥಿ. ಬೆಂಗಳೂರಿನಲ್ಲಿ ಈ ರೀತಿ ಅನ್ಯಾಯ ನಡೆದಿದ್ದರೆ ಲಕ್ಷಾಂತರ ಜನರು ಬೀದಿಗೆ ಇಳಿದು ಹೋರಾಟ ಮಾಡುತ್ತಿದ್ದರು. ಆದರೂ ಒಬ್ಬ ಹಿಂದುಳಿದ ವಿದ್ಯಾರ್ಥಿ ಪರವಾಗಿ ಹಲವಾರು ಸಾಮಾಜಿಕ ಸಂಘಟನೆಗಳು ಧ್ವನಿ ಎತ್ತಿರುವುದರಿಂದ ಸಹಜವಾಗಿ ನ್ಯಾಯ ಸಿಗಲೇಬೇಕಾಗಿದೆ. ಆದ್ದರಿಂದ ಈ ಯಲ್ಲಾಲಿಂಗನ ಕೊಲೆ ಪ್ರಕರಣವು ರಾಜಕೀವಾಗಿದೆಯೋ ಅಥವಾ ಯಾವ ರೀತಿ ಇದೆಯೋ ಎಂದು ಸರಿಯಾಗಿ ತನಿಖೆ ಆಗಬೇಕಾದರೆ ಸಿಬಿಐ ತನಿಖೆ ಆದರೆ ನಿಜವಾಗಿ ಕೆಂಚಮ್ಮ ಮತ್ತು ಯಲ್ಲಾಲಿಂಗನ ಕುಟುಂಬಕ್ಕೆ ನ್ಯಾಯ ಸಿಗುತ್ತದೆ ಎಂಬ ಮಾತನ್ನು ಹೇಳಿ, ನನ್ನ ಮಾತನ್ನು ಮುಗಿಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೇ, ವಿಜಯ ಕರ್ನಾಟಕ ಪತ್ರಿಕೆಯಲ್ಲಿ "ನಾವಿನ್ನೂ ಯಾವ ಜಮಾನದಲ್ಲಿದ್ದೇವೆ, ಹೇಳ್ತೀರಾ!", "ವಿರೋಧಿಗಳನ್ನು ಹಿಡಿದು ಕತ್ತರಿಸುವ ಬೆಂಬಲಿಗರು ಬೆನ್ನಿಗಿರುವ ನಾಯಕನಿಗೆ ಶತ್ರುಗಳೇ ಬೇಡ" ಎಂದು ಬಂದಿದೆ. ಅದೇ ರೀತಿ ಪ್ರಜಾವಾಣಿ, ಕನ್ನಡ ಪ್ರಭ, ವಿಜಯವಾಣಿ, ಸಂಯುಕ್ತ ಕರ್ನಾಟಕ, ಉದಯವಾಣಿ ಸೇರಿದಂತೆ ಎಲ್ಲಾ ಪತ್ರಿಕೆಗಳ ಕಟಿಂಗ್ಸ್ ನನ್ನ ಬಳಿ ಇವೆ. ಆ ಕೊಲೆ ಪ್ರಕರಣದಲ್ಲಿ ಅಧಿಕಾರಿಗಳು ಎಷ್ಟರಮಟ್ಟಿಗೆ ಅಸಹಾಯಕತೆಯಿಂದ ಇದ್ದಾರೆ ಎಂದೆಲ್ಲಾ ಇದೆ. ಆ ಕೆಂಚಮ್ಮ ಎನ್ನುವವರು" ನಮ್ಮ ಸಮಾಜದಲ್ಲಿ ಮೃತದೇಹವನ್ನು ಹೂಳುವ ಸಂಪ್ರದಾಯ ಇದೆ, ಆದರೆ ನನ್ನ ಮಗ ಯಲ್ಲಾಲಿಂಗನ ಕೊಲೆಯಾದ ಮೃತದೇಹವನ್ನು ಹನುಮೇಶ್ ನಾಯಕ್ ಬೆಂಬಲಿಗರು ಅವಸರ ಅವಸರದಿಂದಲೇ ಸೀಮೆ ಎಣ್ಣೆ ಹಾಗೂ ಕಟ್ಟಿಗೆ ಸಿದ್ದತೆ ಮಾಡಿ ಸುಟ್ಟಿದ್ದಾರೆ, ನಮ್ಮ ಮನೆಯಲ್ಲಿ ಕೆಲವೇ ನಿಮಿಷ ಇಟ್ಟು, ಅವಸರಅವಸರದಲ್ಲಿ ಮೃತದೇಹವನ್ನು ಸಂಸ್ಕಾರ ಮಾಡಲಾಯಿತು, ಮುಂದೆಯಾವ ಸಾಕ್ಷಿಗಳು ಸಿಗದಂತೆ ಮಾಡಲು ಈ ರೀತಿ ಅವಸರ ಮಾಡಿ ಮಗನ ಮೃತದೇಹಕ್ಕೆ ಕಿಚ್ಚು ಹಚ್ಚಲಾಗಿದೆ ಎಂದು ಆರೋಪಿಸಿದರು, ನನ್ನ ಮಗ ಕೊಲೆಯಾದ ಬಳಿಕ ಸಚಿವ ತಂಗಡಗಿಯವರು ನಮ್ಮ ಮನೆಗೆ ಬಾರದೇ 6 ದಿನಗಳು ಗತಿಸಿದ ಬಳಿಕ ನಮ್ಮ ಮನೆಗೆ ಆಗಮಿಸಿ ಸಾಂತ್ವನ ಹೇಳಲು ಮುಂದಾಗಿದ್ದಾರೆ. ತಪ್ಪಿತಸ್ಥರನ್ನು ಬಂಧಿಸಲಾಗುವುದು, ಕಠಿಣಕ್ರಮಕ್ಕೆ ಮುಂದಾಗುವುದೆಂದು ಸಮಾಧಾನ ಮಾಡಲು ಬಂದಾಗ, ಹಣಕೊಡಲು ಮುಂದಾಗಿದ್ದು, ಹಣ ಸ್ವೀಕರಿಸಿಲ್ಲ" ಎಂದು ಹೇಳಿದರು. ಅವರಿಗೆ ಬಡತನ ಎಂಬುದರಲ್ಲಿ ಏನೂ ಅನುಮಾನ ಇಲ್ಲ. ಬಡತನವನ್ನು ಯೋಚನೆ ಮಾಡದೇ ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನು ಯಲ್ಲಾಲಿಂಗ ಹೊರಗೆ

ಹಾಕಲು ಟಿವಿ ಮತ್ತು ಪತ್ರಿಕಾ ಮಾಧ್ಯಮಗಳಿಗೆ ಕೊಡುತ್ತಾನೆ. ಅಲ್ಲಿ ರೇಷನ್ ಅಂಗಡಿಯಲ್ಲಿ ಆಗುತ್ತಿರುವ ಅವ್ಯವಹಾರವನ್ನು ಹೊರಗಡೆ ಹಾಕುತ್ತಾನೆ. ಈ ರೀತಿ ಸಮಾಜದಲ್ಲಿ ಆಗುತ್ತಿರುವ ಅವ್ಯವಹಾರಗಳನ್ನು ಬಹಿರಂಗವಾಗಿ ಎದುರಿಸಿ ಹೋರಾಟ ಮಾಡುವ ಹೋರಾಟಗಾರ. ಸ್ವಾಭಾವಿಕವಾಗಿ ಅಲ್ಲಿಯ ಉಸ್ತುವಾರಿ ಸಚಿವರಾದ ತಂಗಡಗಿಯವರು ಸ್ಪಷ್ಟವಾಗಿ ಆ ಹುಡುಗನನ್ನು ಕರೆದು" ನಾನಿದ್ದೇನೆ, ನೀನು ಧೈರ್ಯವಾಗಿ ನುಗ್ಗು" ಎಂದು ಹೇಳಬೇಕಾಗಿತ್ತು. ಏಕೆಂದರೆ ಈ ಸರ್ಕಾರ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತಿದೆ ಎಂದು ಹೇಳುತ್ತಿರುವ ಸಂದರ್ಭದಲ್ಲಿ ಸಚಿವರಾದ ಮಾನ್ಯ ಶಿವರಾಜ್ ತಂಗಡಗಿಯವರು ಆ ಹುಡುಗನಿಗೆ ಧೈರ್ಯ ಕೊಡುವುದಿಲ್ಲ. ಹನುಮೇಶ್ ನಾಯಕ ಈ ಕೇಸ್‌ನಲ್ಲಿದ್ದಾನೆ ಎಂದು ಗೊತ್ತಾದ ತಕ್ಷಣ ಕಾಂಗ್ರೆಸ್ ಪಕ್ಷ ಆತನನ್ನು ಸಸ್ಪೆಂಡ್ ಮಾಡಿರುವುದಕ್ಕೆ ಅಭಿನಂದಿಸುತ್ತೇನೆ. ಜಿಲ್ಲಾಧಿಕಾರಿ ಮತ್ತು ಎಸ್.ಪಿ. ಅವರನ್ನು ಖಂಡಿತ ಅಭಿನಂದಿಸುತ್ತೇನೆ. ಏಕೆಂದರೆ ಎಷ್ಟು ಸಾಧ್ಯವೋ ಅಷ್ಟು ಅಂದರೆ ಈ ಕಡೆ ಉಸ್ತುವಾರಿ ಸಚಿವರ ಕಾಟ, ಈ ಕಾಟ ಎಷ್ಟರಮಟ್ಟಿಗೆ ಎಂದರೆ "ಸಚಿವ ತಂಗಡಗಿಯವರ ಸೋದರ ಭೂ ಒತ್ತುವರಿ ಮಾಡಿದ್ದಾರೆ ಎಂದು ಕೊಪ್ಪಳ ಜಿಲ್ಲಾಧಿಕಾರಿಯಾಗಿದ್ದ ತುಳಸಿ ಮದ್ದಿನೇನಿಯವರು ಕ್ರಮಕ್ಕೆ ಮುಂದಾದರೆ, ಅವರನ್ನು ಜಿಲ್ಲೆಯಿಂದಲೇ ಎತ್ತಂಗಡಿ ಮಾಡಿಸಿದರು ತಂಗಡಗಿ" ಎಂದು ಪತ್ರಿಕೆಯಲ್ಲಿ ಬಂದಿದೆ. ಪತ್ರಿಕೆಗಳಲ್ಲಿ ಬರೆಯುವುದಕ್ಕೆ ದೇಶದಲ್ಲಿ ತುರ್ತು ಪರಿಸ್ಥಿತಿ ಇಲ್ಲ. ಪತ್ರಿಕಾ ಸ್ವಾತಂತ್ರ್ಯ ಇದೆ. ಮೊನ್ನೆ ನಾವೆಲ್ಲರೂ ತುರ್ತು ಪರಿಸ್ಥಿತಿ ವಿಚಾರದ ಬಗ್ಗೆ ಮಾತನಾಡಿದೆವು.

**ಶ್ರೀ ಕೆ.ಅಭಯಚಂದ್ರ ಜೈನ್:–** ....ಅದು ..... (ಕುಳಿತುಕೊಂಡೇ ಮಾತನಾಡಿದರು).

**ಶ್ರೀ ಕೆ.ಎಸ್. ಈಶ್ವರಪ್ಪ:–** ಅವರೇನು ಕುಡಿದು ಬಂದಿದ್ದಾರೋ ಏನೋ ಎಂದು ನನಗೆ ಗೊತ್ತಿಲ್ಲ. ಅವರಿಗೆ ಏನಾಗಿದೆ? ನಾನು ಮಾತನಾಡಬೇಕೆಂದರೆ ಪ್ರತಿ ಸಾರಿ ಅಡ್ಡ ಬರುವುದಕ್ಕೆ ಏನಿದೆ?

**(ಗೊಂದಲ)**

**ಶ್ರೀ ಕೆ.ಅಭಯಚಂದ್ರ ಜೈನ್:–** ಹೇಳಬಾರದೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಸಾರ್, ಇದು ನ್ಯಾಯವೇ? ನನಗೆ ಸಮಯವನ್ನು ನಿಗದಿ ಮಾಡಿದ್ದೀರಿ, ನಾನು ಅವರ ಸುದ್ದಿಗೆ ಹೋಗಿದ್ದೇನೆಯೇ? ನಾನು ಇದನ್ನು ಒಪ್ಪುವುದಿಲ್ಲ. ಅವರು ಉತ್ತರ ಕೊಡುವಾಗ ಉತ್ತರ ಕೊಡಲಿ. ಮಾನ್ಯ ಗೃಹ ಮಂತ್ರಿ ಹಾಗೂ ಮಾನ್ಯ ಸಭಾನಾಯಕರಿದ್ದಾರೆ. ಪ್ರತಿಯೊಂದಕ್ಕೂ ಅವರು ನಿಂತುಕೊಂಡರೇ ಇದೇನಿದು? ಅಲ್ಲಿ ಕೆಂಚಮ್ಮನ ಮಗ ಸತ್ತಿದ್ದು, ನನಗೂ ಕೆಂಚಮ್ಮ ತಾಯಿಯಿದ್ದ ಹಾಗೆ. ಕೆಂಚಮ್ಮನ ಮಗ ನನ್ನ ಮಗನ ಹಾಗೆ ಎಂದುಕೊಂಡು ನೋವಿನಿಂದ ಹೇಳುತ್ತಿದ್ದೇನೆ. ಇದನ್ನು ಪ್ರಜಾಪ್ರಭುತ್ವ ದೇವಾಲಯದಲ್ಲಿ ನ್ಯಾಯ ಕೊಡಿ ಎಂದು ಸರ್ಕಾರದ ಮುಂದೆ ಹೇಳುತ್ತಿದ್ದೇನೆ. ಇಲ್ಲಿ

ಹೇಳದೇ ನಾನು ಇನ್ನೆಲ್ಲಿ ಹೇಳಲಿ? ನ್ಯಾಯ ಸಿಗುತ್ತದೆ ಎಂದು ನಾನು ಇಲ್ಲಿ ಚರ್ಚೆ ಮಾಡುತ್ತೇನೆ. ಇಲ್ಲಿ ಬಿಜೆಪಿ, ಕಾಂಗ್ರೆಸ್ ಎಂದು ದಯವಿಟ್ಟು ತರಬಾರದು. ಮಾನ್ಯ ಅಭಯಚಂದ್ರರವರ ಬಗ್ಗೆ ನನಗೆ ಗೌರವ ಇದೆ. ಇಲ್ಲಿ ಯಾವುದೋ ಕೊಲೆಗಡುಕರ ಪರವಾಗಿ ಹೋಗಬಾರದು. ಸಿಓಡಿ ಅಥವಾ ಸಿಬಿಐಗೆ ಹಾಕುತ್ತಾರೋ ಎಂಬುದು ಶ್ರೀಯುತ ಜಾರ್ಜ್‌ರವರಿಗೆ ಬಿಟ್ಟದ್ದು. ಏನು ಹೇಳಿದರೂ ಅವರು ಕೊಟ್ಟಿದ್ದರೋ, ನಾವು ಕೊಡಬೇಕೋ ಎಂಬುದು ಅಲ್ಲ. ತನಿಖೆ ಮಾಡುತ್ತಿರುವ ಸಂದರ್ಭದಲ್ಲಿ ಪ್ರಾಮಾಣಿಕವಾಗಿ ತನಿಖೆ ಮಾಡುತ್ತಾರೆ ಎಂದು ಹೇಳುತ್ತಿದ್ದೇನೆ. ತನಿಖೆ ಮಾಡಿದಾಗ ಶಿವರಾಜ್ ತಂಗಡಗಿಯವರು ಕೊಲೆಯಲ್ಲಿ ಅವರಿಗೆ ಸಪೋರ್ಟ್ ಮಾಡಿದ್ದಾರೆ ಎಂದು ನನಗೆ ನೂರಕ್ಕೆ ನೂರು ವಿಶ್ವಾಸ ಇದೆ. ಏಕೆಂದರೆ ಹನುಮೇಶ್ ನಾಯಕ ಅವರ ಜೊತೆಗೆ ಓಡಾಡಿಕೊಂಡಿದ್ದನು. ಜನವರಿಯಲ್ಲಿ ಆತನ ಕೊಲೆಯಾಗಿ ಆರೋಪಿ ಯಾವಾಗ ಅರೆಸ್ಟ್ ಆಗಬೇಕು? ಇಡೀ ಊರಿನಲ್ಲಿ ಮಾತನಾಡುತ್ತಿದ್ದಾರೆ ಮತ್ತು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಇದರಲ್ಲಿ ಯಾರ್‍ಯಾರು ರೌಡಿ ಶೀಟರ್‌ನಲ್ಲಿ ಇದ್ದಾರೆ. ಮಾನ್ಯ ಗೃಹ ಸಚಿವರು ಬಹಳ ಜನರನ್ನು ಅರೆಸ್ಟ್ ಮಾಡಿಸಿದ್ದಾರೆ. ಸಂತೋಷ. ಅವರು ಅರೆಸ್ಟ್ ಮಾಡಿಸದಿದ್ದರೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಈ ಸರ್ಕಾರದ್ದು ಮುಗಿದು ಹೋಯಿತು, ಏಕೆ ಈ ಸತ್ತು ಹೋಗಿರುವ ಸರ್ಕಾರದ ಹತ್ತಿರ ಮಾತನಾಡಬೇಕು ಎಂದು ಅನಿಸುತ್ತಿತ್ತು. ಅವರಿನ್ನೂ ಜೀವಂತವಾಗಿದ್ದಾರೆ. ಅರೆಸ್ಟ್ ಮಾಡಿರುವುದಕ್ಕೆ ಖಂಡಿತ ಅಭಿನಂದನೆ ಸಲ್ಲಿಸುತ್ತೇನೆ. ಆದರೆ ಕೊಲೆಗಡುಕರಿಗೆ ರಕ್ಷಣೆ ಸಿಗುತ್ತಿದೆ. ಜನವರಿಯಲ್ಲಿ ಕೊಲೆಯಾಗಿ ಜೂನ್‌ನಲ್ಲಿ ಸಿಐಡಿಗೆ ಕೊಟ್ಟ ನಂತರ ಅರೆಸ್ಟ್ ಆಗುತ್ತದೆ. ಅಂದರೆ 6 ತಿಂಗಳ ನಂತರಅರೆಸ್ಟ್ ಮಾಡಿದ್ದಾರೆ. ಇದರಲ್ಲಿ ಉಸ್ತುವಾರಿ ಸಚಿವರ ಪಾತ್ರ ಎಷ್ಟರಮಟ್ಟಿಗೆ ಪೊಲೀಸ್ ಇಲಾಖೆ ಮೇಲೆ ಆಗಿದೆ ಎಂಬುದನ್ನು ದಯವಿಟ್ಟು ಗಮನಿಸಬೇಕು. ಸಿಓಡಿ ಕೊಡುತ್ತಿದ್ದ ಹಾಗೆ ಆತನನ್ನು ಹೇಗೆ ಅರೆಸ್ಟ್ ಮಾಡಿದರು? ಯಲ್ಲಾಲಿಂಗನ ತಾಯಿ" ನನಗೆ ಸಮಾಧಾನ ಆಗಬೇಕೆಂದರೆ ದಯವಿಟ್ಟು ಆ ಹನುಮೇಶ್ ನಾಯಕನನ್ನು ಬಂಧಿಸಿ" ಎಂದು6 ತಿಂಗಳ ಕೆಳಗೆ ಯಲ್ಲಾಲಿಂಗ ಸತ್ತಾಗ ಹೇಳಿದ್ದಾರೆ. ಇದು ಪೊಲೀಸ್ ಇಲಾಖೆಗೆ ಗೊತ್ತಿರಲಿಲ್ಲವೇ? ನಮ್ಮ ಅಧ್ಯಕ್ಷರಾದ ಪ್ರಹ್ಲಾದ್ ಜೋಷಿಯವರು ಆ ಹಳ್ಳಿಗೆ ಹೋಗುತ್ತಾರೆ. ದಯವಿಟ್ಟು ಆ ಹಳ್ಳಿಯ ವಾತಾವರಣವನ್ನು ಯೋಚನೆ ಮಾಡಬೇಕು. ನಮ್ಮ ಅಧ್ಯಕ್ಷರು ಅವರ ಮನೆಗೆ ಹೋದಾಗ ಇಡೀ ಊರಿನಲ್ಲಿ ಯಾವ ಮನೆಯಲ್ಲಿಯೂ ಬಾಗಿಲನ್ನೇ ತೆರೆಯುವುದಿಲ್ಲ. ಅವರು ಇದು ಯಾವನಿಗೆ ಬೇಕಪ್ಪ!, ಅವರು ಅಲ್ಲಿಗೆ ಬಂದು ಅವರ ಕೊಲೆಯಾದರೆ, ಅವರ ಮಕ್ಕಳ ಕೊಲೆಯಾದರೆ ಯಾರು ರಕ್ಷಣೆಗೆ ಬರುತ್ತಾರೆ ಎಂಬ ಭಯದ ವಾತಾವರಣ ಇತ್ತು. ನಾವೇನು ಕರ್ನಾಟಕದಲ್ಲಿದ್ದೇವೆಯೇ? ಅಧಿಕಾರದಲ್ಲಿದ್ದೇವೆ ಎಂಬ ಒಂದೇ ಕಾರಣದಿಂದ ಯಾರನ್ನೂ ಬೇಕಾದರೂ ಕೊಲೆ ಮಾಡಬಹುದೇ? ಆ ಕೊಲೆ ಮಾಡಿದವರ ರಕ್ಷಣೆ ಮಾಡಬಹುದು.

(5.30 ಗಂಟೆ)

ಸನ್ಮಾನ್ಯ ಸಭಾಪತಿಯವರೇ, ಒಬ್ಬ ವ್ಯಕ್ತಿಯನ್ನು ಕೊಲೆ ಮಾಡಿದ್ದಾರೆ ಎನ್ನುವ ಕಾರಣಕ್ಕಾಗಿ ಅಥವಾ ಯಲ್ಲಾಲಿಂಗನ ತಾಯಿ ಕೆಂಚಮ್ಮನ ಸಮಾಧಾನಕ್ಕಾಗಿ ಆ ಕೊಲೆಗಡುಕರನ್ನು ಬಂಧಿಸಬೇಕೆನ್ನುವುದು ಅಷ್ಟೇ ಅಲ್ಲ, ಇವತ್ತು ಪ್ರಜಾಪ್ರಭುತ್ವದ ಸಾಮಾಜಿಕ ಮೌಲ್ಯಗಳ ಕೊಲೆಯಾಗುತ್ತಿದೆ ಅದಕ್ಕಾಗಿ ಯಲ್ಲಾಲಿಂಗನ ಕೊಲೆಗಡುಕರು ಯಾರು ಎನ್ನುವುದು ಹೊರಬರಬೇಕಾಗಿದೆ. ಈ ರೀತಿ ಕೊಲೆಗಡುಕರು ಅಧಿಕಾರದಲ್ಲಿ ಇರಲಿ, ಅಧಿಕಾರದಿಂದ ರಕ್ಷಣೆ ಪಡೆಯಲಿ ಎನ್ನುವುದಕ್ಕೋಸ್ಕರ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಪ್ರಾಣ ಬಲಿ ಕೊಟ್ಟು ನಮಗೆ ಸ್ವಾತಂತ್ರ್ಯವನ್ನು ದೊರಕಿಸಿ ಕೊಡಲಿಲ್ಲ.

ಸನ್ಮಾನ್ಯ ಸಭಾಪತಿಯವರೇ, 'ಹನುಮೇಶ್ ನಾಯ್ಕ್‌ನ ವಿರುದ್ಧ ಟಿ.ವಿ.ಗಳಲ್ಲಿ ಯಾಕೆ ಹೇಳಿಕೆ ಕೊಡುತ್ತಿಯಾ, ಇದರಿಂದ ನಿನಗೇನು ಬರುತ್ತದೆ. ಇಂತಿಂಥವರನ್ನು ಎದುರು ಹಾಕಿಕೊಂಡರೆ ಪರಿಣಾಮ ಏನಾಗುತ್ತದೆ ಗೊತ್ತೇ? ಇದರಿಂದ ನಿನಗೇನು ಲಾಭ? ಒಬ್ಬನೇ ಏನು ಮಾಡುತ್ತೀಯಾ?' ಎಂದು ಅವನ ಮನೆಗೆ ಹೋಗಿ ಹೆದರಿಸುತ್ತಾರೆ. ಯಲ್ಲಾಲಿಂಗಾ ಕೊಪ್ಪಳದಿಂದ ಗಂಗಾವತಿಗೆ ಬಸ್ಸಿನಲ್ಲಿ ಹೋಗುತ್ತಿರುತ್ತಾನೆ. ಕೆಲವು ದುಷ್ಕರ್ಮಿಗಳು ಬೈಕ್‌ನಲ್ಲಿ ಆತನನ್ನು ಅಟ್ಟಿಸಿಕೊಂಡು ಬರುತ್ತಾರೆ. ಇದನ್ನು ನೋಡಿ ಅವನು ಗಾಬರಿಯಾಗುತ್ತಾನೆ. ಕಾರಟಗಿಗೆ ಹೋಗಬೇಕಾದರೆ ಆತನಿಗೆ ತನ್ನನ್ನು ಸಾಯಿಸುತ್ತಾರೆ ಎನ್ನುವುದು ಗೊತ್ತಾಗುತ್ತದೆ. ಅವನು 8151996408 ಮೊಬೈಲ್ ನಂಬರ್‌ನಿಂದ, 'ನನ್ನನ್ನು ಕೊಲೆ ಮಾಡುವುದಕ್ಕೆ ಬರುತ್ತಿದ್ದಾರೆ. ನನಗೆ ರಕ್ಷಣೆ ಕೊಡಿ' ಎಂದು ಸ್ಥಳೀಯ ಟಿ.ವಿ.ಚಾನಲ್ ನವರಿಗೆ ಫೋನ್ ಮಾಡುತ್ತಾನೆ. ಸುವರ್ಣಸಿರಿ ವರದಿಗಾರನಿಗೆ, ಜಿಲ್ಲಾ ಪಂಚಾಯಿತಿ ಸದಸ್ಯರಿಗೆ ಮತ್ತು ಪಬ್ಲಿಕ್ ಟಿವಿಯ ಮುಕ್ಕಣ್ಣಕತ್ತಿಧರ್ ಅವರಿಗೆ ಫೋನ್ ಮಾಡುತ್ತಾನೆ ಹಾಗೂ ಗೆಳತಿ ಭಾರತಿಗೆ ಫೋನ್ ಮಾಡುತ್ತಾನೆ. ಇದರ ಜೊತೆಗೆ ಕನಕಗಿರಿ ಪೊಲೀಸ್ ಠಾಣೆಯ ಎಸ್.ಐ. ವೀರಣ್ಣಮಾಗಿ ಎನ್ನುವವರಿಗೂ ಕರೆ ಮಾಡುತ್ತಾನೆ. ಈ ವಿಚಾರದಲ್ಲಿ ನಾನೂ ರಾಜಕೀಯ ಮಾಡುತ್ತಿಲ್ಲ. ಅವರೂ ಕೂಡ ರಾಜಕಾರಣ ಮಾಡುವುದಿಲ್ಲವೆಂದು ನಾನು ಭಾವಿಸುತ್ತೇನೆ. ಕೊಲೆಗಡುಕರು ಸಂತೋಷವಾಗಿದ್ದಾರೆ, ಕೊಲೆಗಡುಕರಿಗೆ ರಕ್ಷಣೆಯನ್ನು ಮಂತ್ರಿಗಳು ನೀಡುತ್ತಿದ್ದಾರೆ. ಇಂತಹ ಮಂತ್ರಿಗಳನ್ನು ಸಚಿವ ಸಂಪುಟದಲ್ಲಿ ಇಟ್ಟುಕೊಳ್ಳಬೇಕೇ ಬೇಡವೇ ಎನ್ನುವ ತೀರ್ಮಾನವನ್ನು ಅವರೇ ಮಾಡಬೇಕಾಗಿದೆ. ಈ ಸರ್ಕಾರಕ್ಕೆ ಬಹುಮತವಿದೆ. ಸಚಿವ ಸಂಪುಟದಲ್ಲಿ ಯಾರನ್ನು ಬೇಕಾದರೂ ಇಟ್ಟುಕೊಳ್ಳಬಹುದು ಅಥವಾ ತೆಗೆಯಬಹುದು. ಆದರೆ, ನಾವೇನು ಹೇಳುತ್ತಿದ್ದೇವೆ ಎಂದರೆ, ಯಲ್ಲಾಲಿಂಗನಂತಹ ಪ್ರಾಮಾಣಿಕ ಯುವಕನನ್ನು ಕೊಲೆ ಮಾಡಲಾಗಿದೆ. ಆ ಭಾಗದಲ್ಲಿರುವ ಎಲ್ಲ ಜಾತಿ, ವರ್ಗದವರು ಮತ್ತು ಪ್ರಗತಿಪರ ಸಂಘಟನೆಗಳು ಎಲ್ಲರೂ ಈ ಘಟನೆಯನ್ನು ಪ್ರತಿಭಟಿಸುತ್ತಾರೆ. ಇವರ ಬೆಂಬಲಕ್ಕೆ ಸ್ಥಳೀಯ ಜನರು ಬರಲಿಲ್ಲವೆಂದು ಜಾತಿ ಹೆಸರಿನಲ್ಲಿ ಜನರನ್ನು ಎತ್ತಿ ಕಟ್ಟುತ್ತಾರೆ. ಒಂದು ನಿರ್ದಿಷ್ಟ ಜಾತಿ ಜನರನ್ನು ಕರೆದುಕೊಂಡು ಬಂದು ಮಂತ್ರಿಗಳ ಪರವಾಗಿ ಮೆರವಣಿಗೆ ಮಾಡಿಸುತ್ತಾರೆ. ನನ್ನ ಜೀವನದಲ್ಲಿ ಇಷ್ಟರಮಟ್ಟಿಗೆ ಅಧಃಪತನಕ್ಕೆ ಹೋದಂತಹ ವ್ಯಕ್ತಿಯನ್ನು ನೋಡಿಯೇ

ಇಲ್ಲ. ಆ ಕ್ಷೇತ್ರದ ಮಂತ್ರಿಗಳು ಈ ಕೆಲಸವನ್ನು ಮಾಡಿರದಿದ್ದರೇ ಜನರು, 'ನಮ್ಮ ಮಂತ್ರಿಗಳು ಕೊಲೆ ಮಾಡಿಲ್ಲ, ಕೊಲೆಗಡುಕರಿಗೆ ನಮ್ಮ ಮಂತ್ರಿಗಳು ರಕ್ಷಣೆ ಕೊಟ್ಟಿಲ್ಲ, ಸುಮ್ಮನೆ ನೀವು ಇಲ್ಲಿಗೆ ಬಂದು ಯಾಕೆ ರಾಜಕಾರಣ ಮಾಡುತ್ತಿದ್ದೀರಿ?' ಎಂದು ಹೇಳಬೇಕಾಗಿತ್ತು. ಆದರೆ, ಎಲ್ಲರೂ ಕದ್ದುಮುಚ್ಚಿ 'ನಾವು ಬದುಕುವುದು ಕಷ್ಟವಾಗಿದೆ ಸಾರ್. ದಯವಿಟ್ಟು ಏನಾದರೂ ಮಾಡಿ ನಮಗೆ ರಕ್ಷಣೆ ಕೊಡಿ' ಎಂದು ಫೋನ್ ಮಾಡುತ್ತಾರೆ. ಕೊಲೆಗಡುಕರಿಗೆ ರಕ್ಷಣೆ ಕೊಡುವುದು ಕೊಲೆ ಮಾಡುವುದಕ್ಕಿಂತಲೂ ಹೆಚ್ಚಿನ ಅಪರಾಧವಾಗಿದೆ. ಆದ್ದರಿಂದ ಕೊಲೆಗಡುಕರಿಗೆ ರಕ್ಷಣೆ ಕೊಟ್ಟಿರುವ ಮಂತ್ರಿ ಕೊಲೆ ಮಾಡಿರುವುದಕ್ಕಿಂತಲೂ ದೊಡ್ಡ ಅಪರಾಧ ಮಾಡಿದ್ದಾರೆ. ಇಂತಹ ಮಂತ್ರಿಗೆ ಸರ್ಕಾರ ರಕ್ಷಣೆ ಕೊಟ್ಟರೆ ಬಹಳ ಕಷ್ಟವಾಗುತ್ತದೆ. ಸರ್ಕಾರಕ್ಕೆ ಸಹ ಕೆಟ್ಟ ಹೆಸರು ಬರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಯಲ್ಲಾಲಿಂಗನಿಗೆ ತಾನು ಸಾಯುತ್ತೇನೆಂದು ಗೊತ್ತಾದ ಕೂಡ ಲೇಡೆತ್ ನೋಟ್ ಬರೆದು ಜೇಬಿನಲ್ಲಿ ಇಟ್ಟುಕೊಳ್ಳುತ್ತಾನೆ. ನಾವು ಹೇಳುತ್ತಿರುವುದು ಸುಳ್ಳು ಎನ್ನುವುದಾದರೆ ಮಾನ್ಯ ಗೃಹ ಸಚಿವರು 'ಸುಳ್ಳು' ಎಂದು ಹೇಳಲಿ. ಆಗ ನಾವು ಅವರಕ್ಷಮೆ ಕೇಳಿ, ಇನ್ನೊಮ್ಮೆ ಈ ರೀತಿ ತಪ್ಪು ಮಾಡುವುದಿಲ್ಲವೆಂದು ಹೇಳಿ ಹೊರಟು ಹೋಗುತ್ತೇವೆ. ನಾವು ಸುಮ್ಮನೆ ಯಾರ್‍ಯಾರೋ ಮೇಲೆ ಆಪಾದನೆ ಮಾಡುವುದಕ್ಕೆ ಇಲ್ಲಿ ನಿಂತಿಲ್ಲ. ಪ್ರಾಮಾಣಿಕ ಹೋರಾಟಗಾರರ ಜೊತೆಗೆ ನಾವಿದ್ದೇವೆ, ಅವರೂ ಇದ್ದಾರೆ. ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಸರ್ಕಾರ ತನ್ನ ಪ್ರಯತ್ನವನ್ನು ಮುಂದುವರಿಸಿದೆ. ಪೊಲೀಸ್ ಇಲಾಖೆಯವರಿಗೆ ಹೇಳಿ ಅಪರಾಧಿಗಳನ್ನು ಅರೆಸ್ಟ್ ಮಾಡಿಸಿದ್ದಾರೆ. ಪ್ರಕರಣವನ್ನು ಸಿ.ಐ.ಡಿ.ಗೆ ವಹಿಸಿಕೊಟ್ಟಿದ್ದಾರೆ. ಸುಮಾರು 5 ತಿಂಗಳಾದರೂ 'ಯಾರು ನಮ್ಮನ್ನು ಅರೆಸ್ಟ್ ಮಾಡುವುದಕ್ಕೆ ಆಗುವುದಿಲ್ಲ' ಎಂದು ಗೂಂಡಾಗಿರಿ ಮಾಡಿಕೊಂಡು ಓಡಾಡುತ್ತಿದ್ದ ರೌಡಿ ಶೀಟರ್‌ನಲ್ಲಿ ಇದ್ದವರನ್ನು ಅರೆಸ್ಟ್ ಮಾಡಲಾಗಿದೆ ಮತ್ತು ಅವರನ್ನು ಜೈಲಿಗೆ ಕಳುಹಿಸಲಾಗಿದೆ. ಸರ್ಕಾರದ ಈ ಎಲ್ಲ ಕ್ರಮಗಳ ಬಗ್ಗೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತಿದ್ದೇನೆ. ಈ ರೌಡಿಶೀಟರ್‌ನಲ್ಲಿ ಇರುವವರು ಹೊಸದಾಗಿ ರೌಡಿಗಳಾಗಿಲ್ಲ. ಅವರುಗಳು ರೌಡಿ ಶೀಟರ್‌ನಲ್ಲಿ ಇರುವುದು ಗೊತ್ತು, ಕೊಲೆ ಮಾಡುವ ಸಂದರ್ಭದಲ್ಲಿ ಅವರ ಮೇಲೆ ಕಂಪ್ಲೆಂಟ್‌ಗಳು ಇರುವುದು ಗೊತ್ತು. ಆದರೂ ಸಹ ಪೊಲೀಸ್‌ನವರು ಪರಮೇಶ್ ನಾಯ್ಕನನ್ನು ಯಾಕೆ 6 ತಿಂಗಳ ಕೆಳಗೇ ಅರೆಸ್ಟ್ ಮಾಡಲಿಲ್ಲ ಎನ್ನುವುದು ನಮ್ಮ ಪ್ರಶ್ನೆಯಾಗಿದೆ. ಯಾಕೆ ಅರೆಸ್ಟ್ ಮಾಡಲಿಲ್ಲ ಎನ್ನುವುದಕ್ಕೆ ಕಾರಣವನ್ನು ನಾನೇ ಹೇಳುತ್ತೇನೆ. ಆತನಿಗೆ ಮಂತ್ರಿಗಳ ರಕ್ಷಣೆ ಇತ್ತು. 'ಆತನನ್ನು ಅರೆಸ್ಟ್ ಮಾಡಿ ಎಫ್.ಐ.ಆರ್. ಫೈಲ್ ಮಾಡಿ, ಏನಾದರೂ ಜೈಲಿಗೆ ಹಾಕಿದರೆ, ನೀನು ಈ ಊರಿನಲ್ಲಿ ಇರುವುದಿಲ್ಲ. ನಿನ್ನನ್ನು ಎತ್ತಂಗಡಿ ಮಾಡಿಸುತ್ತೇನೆ' ಎಂದು ಬೆದರಿಕೆ ಹಾಕಿರುತ್ತಾರೆ. ಅಲ್ಲಿನ ಪೊಲೀಸ್‌ರಿಗೆ ಇದರ ಭಯವಿರುತ್ತದೆ.

ಸನ್ಮಾನ್ಯ ಸಭಾಪತಿಯವರೇ, ನಾನು ಈ ಸದನದಲ್ಲಿ ಹೇಳುತ್ತಿದ್ದೇನೆ. ಬಹಳಷ್ಟು ಜನ ಸದಸ್ಯರು ಈ ವಿಚಾರದ ಬಗ್ಗೆ ಮಾತನಾಡಿದ್ದೇವೆ. ಈ ಸದನ ಮುಗಿದು ನಾವು ಹೊರಗೆ ಹೋದಾಗ, ನಮ್ಮ ಜೀವಕ್ಕೆ ಏನಾದರೂ ಹೆಚ್ಚು ಕಡಿಮೆಯಾದರೆ ನೀವೇ ರಕ್ಷಣೆ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಇದಕ್ಕೆ ಯಾರು ಕಾರಣ ಎನ್ನುವುದನ್ನು ನೀವೇ ಯೋಚನೆ ಮಾಡಬೇಕಾಗುತ್ತದೆ.

ಸನ್ಮಾನ್ಯ ಸಭಾಪತಿಯವರೇ, ಯಲ್ಲಾಲಿಂಗನನ್ನು ಕೊಲೆ ಮಾಡಿ ತಕ್ಷಣವೇ ಆ ದೇಹವನ್ನು ತೆಗೆದುಕೊಂಡು ಹೋಗಿ ರೈಲ್ವೆ ಹಳಿಯ ಮೇಲೆ ಹಾಕುತ್ತಾರೆ. ಅಲ್ಲಿಗೆ ಈ ಪ್ರಕರಣ ಮುಚ್ಚಿ ಹೋಗುತ್ತದೆ. ನಮ್ಮಲ್ಲಿ ಹೆಣ್ಣುಮಕ್ಕಳು ಬಹಳ ಧೈರ್ಯವಂತರಿದ್ದಾರೆ. ಯಲ್ಲಾಲಿಂಗನ ಅಕ್ಕ ಮಂಜುಳ 'ಯಾರು ಏನು ಮಾಡುತ್ತಾರೆ ಮಾಡಲಿ' ಎಂದು ಈ ಪ್ರಕರಣವನ್ನು ಹೊರತಂದರು. ಪೊಲೀಸ್ ಇಲಾಖೆ ಸದರಿ ಪ್ರಕರಣವನ್ನು ರೈಲ್ವೆ ಇಲಾಖೆಯಿಂದ ತಮ್ಮ ಇಲಾಖೆಗೆ ವರ್ಗಾಯಿಸಿಕೊಂಡರು. ಇದಕ್ಕಾಗಿ ಪೊಲೀಸ್ ಇಲಾಖೆಯವರನ್ನು ಅಭಿನಂದಿಸುತ್ತಿದ್ದೇನೆ. ಪೊಲೀಸ್ ಇಲಾಖೆಯಲ್ಲಿ ಎಲ್ಲರೂ ತಪ್ಪಿತಸ್ಥರಿದ್ದಾರೆಂದು ಹೇಳುವುದಿಲ್ಲ, ಪ್ರಾಮಾಣಿಕರೂ ಇದ್ದಾರೆ. ಎಲ್ಲರೂ ತಪ್ಪಿತಸ್ಥರೆಂದು ಹೇಳಿದರೆ ಸಮಾಜವೇ ಇರುವುದಿಲ್ಲ. ಆದ್ದರಿಂದ ಭಯಕ್ಕೆ ಹೆದರಿ ಪೊಲೀಸ್ ಇಲಾಖೆಯ ಕೆಲವರು 'ನಮಗೆ ಇದರ ತಂಟೆಯಾಕಪ್ಪ ನಮ್ಮ ಹೆಂಡತಿ ಮಕ್ಕಳನ್ನು ನಾವು ನೋಡಿಕೊಂಡು ಸುಮ್ಮನೆ ಇದ್ದರೆ ಸಾಕು' ಎಂದು ಅವರುಗಳು ಸಹ ಸುಮ್ಮನಾದರು. ಯಲ್ಲಾಲಿಂಗನ ಹತ್ಯೆಯಾದ ನಂತರ 6 ತಿಂಗಳುಗಳ ಕಾಲ ಇಡೀ ಸಮಾಜ ನ್ಯಾಯಕ್ಕಾಗಿ ಹೋರಾಟ ಮಾಡಿತು. ಆಗ ಸರ್ಕಾರ ಸದರಿ ಪ್ರಕರಣದ ತನಿಖೆಯನ್ನು ಸಿ.ಐ.ಡಿ.ಗೆ ವಹಿಸಿಕೊಟ್ಟಿತು. ಆಗ ಹನುಮೇಶ್ ನಾಯ್ಕನನ್ನು ಅರೆಸ್ಟ್ ಮಾಡಲಾಯಿತು. ನಂತರ ಇನ್ನೂ ಅನೇಕರನ್ನು ಅರೆಸ್ಟ್ ಮಾಡಲಾಯಿತು.

ಸನ್ಮಾನ್ಯ ಸಭಾಪತಿಯವರೇ, ಯಲ್ಲಾಲಿಂಗನ ಜೊತೆಗೆ ಆ ತಾಲ್ಲೂಕಿನಲ್ಲಿರುವ ಗೂಂಡಾಗಿರಿಯೂ ಸಮಾಪ್ತಿಯಾಗಬೇಕು. 'ಇಂತಹ ಗೂಂಡಾಗಿರಿ ವರ್ತನೆಯನ್ನು ಕರ್ನಾಟಕ ರಾಜ್ಯದಲ್ಲಿರುವ ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಎಂದಿಗೂ, ಯಾವ ಕಾರಣಕ್ಕೂ ಸಹಿಸುವುದಿಲ್ಲ, ಎಷ್ಟೇ ಪ್ರಭಾವಿ ಮಂತ್ರಿಯಾಗಿದ್ದರೂ ಇಂತಹ ಗೂಂಡಾ ವರ್ತನೆಯನ್ನು ನಾವು ಸಹಿಸುವುದಿಲ್ಲ.' ಎನ್ನುವ ಇಚ್ಛಾಶಕ್ತಿಯನ್ನು ಅವರು ತೋರಿಸಬೇಕಾಗಿದೆ. 'ಸದರಿ ಪ್ರಕರಣವನ್ನು ಸಿ.ಬಿ.ಐ.ಗೆ ವಹಿಸಿಕೊಡಿ' ಎಂದು ನಾನು ಕೇಳಿದ ಕೂಡಲೇ ಸರ್ಕಾರ ಸಿ.ಬಿ.ಐ.ಗೆ ವಹಿಸಿ ಕೊಡುವುದಿಲ್ಲ. ಅದಕ್ಕೆ ಬದಲಾಗಿ 'ನಿಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಆ ಕೆಲಸ ಮಾಡಿತ್ತೇ?' ಎನ್ನುವ ಪ್ರಶ್ನೆಯನ್ನು ಅವರು ಕೇಳಬಹುದು. ನಾವು ಮಾಡಿಲ್ಲ, ಅದಕ್ಕಾಗಿಯೇ ನಾವು ಈ ಸ್ಥಾನದಲ್ಲಿ ಬಂದು ಕುಳಿತುಕೊಂಡಿದ್ದೇವೆ. ಈ ರೀತಿಯ ಗೂಂಡಾಗಿರಿ ಸಮಾಪ್ತಿಯಾಗಬೇಕು, ಭಯದ ವಾತಾವರಣ ದೂರವಾಗಬೇಕು. ಅದಕ್ಕೋಸ್ಕರ

ಸಾರ್ವಜನಿಕ ಜೀವನದ ಮೌಲ್ಯಗಳು ಉಳಿಯಬೇಕೆನ್ನುವುದಕ್ಕಾಗಿ ಯಾರು ಕೊಲೆ ಮಾಡಿದ್ದಾರೆ, ಯಾರು ಕೊಲೆಗಡುಕರಿಗೆ ರಕ್ಷಣೆ ಕೊಡುವ ಮಂತ್ರಿ ಇದ್ದಾರೆ, ಅವರ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ಅಲ್ಲಿರುವ ಜನರು 'ಮಂತ್ರಿಗಳಾದ ಶಿವರಾಜ್ ತಂಗಡಗಿಯವರು ಕೊಲೆಗಡುಕರಿಗೆ ರಕ್ಷಣೆ ಕೊಡುತ್ತಿದ್ದಾರೆ' ಎಂದು ಮಾತಾಡಿಕೊಳ್ಳುತ್ತಿದ್ದಾರೆ. ನಾನು ಅವರೇ ಈ ಕೆಲಸವನ್ನು ಮಾಡಿದ್ದಾರೆಂದು ಹೇಳುವುದಿಲ್ಲ. ಆದರೆ, ಕೊಲೆ ಮಾಡಿರುವವರನ್ನು ರಕ್ಷಣೆ ಮಾಡುವುದು ಕೊಲೆ ಮಾಡಿರುವುದಕ್ಕಿಂತಲೂ ದೊಡ್ಡ ಅಪರಾಧವಾಗಿದೆ. ಮಾನ್ಯ ಗೃಹ ಮಂತ್ರಿಗಳಿಗೆ ನಾನು ಕಾನೂನು ಹೇಳಿಕೊಡುವುದಕ್ಕೆ ಹೋಗುವುದಿಲ್ಲ. ಮನಸ್ಸಿನಲ್ಲಿ ಏನು ನೋವಿದೆ, ಅವರ ತಂದೆ–ತಾಯಿಯ ನೋವು, ಆ ಭಾಗದಲ್ಲಿ ನೋಡಿಕೊಂಡು ಬಂದಿರುವವರ ನೋವು, ಆ ನೋವನ್ನು ನಾನು ನಿಮ್ಮ ಗಮನಕ್ಕೆ ತಂದಿದ್ದೇನೆ. ಇದನ್ನು ಸಿಬಿಐ ಗೆ ವಹಿಸಬೇಕೆಂಬುದು ನನ್ನ ಸ್ಪಷ್ಟವಾದ ನಿಲುವು ಆಗಿದೆ. ಅದಕ್ಕೋಸ್ಕರ ಅಲ್ಲಿ ವಾಸ್ತವಾಂಶವೇನಿದೆ ಎಂಬುದನ್ನು ನೋಡಿಕೊಂಡು ಮಾತನಾಡಿದರೆ ಯಾರು ಬೇಕಾದರೂ ಮಾತನಾಡಲಿ. ನಾನು ಅವರ ಮೇಲೆ ಅನುಮಾನಪಡುತ್ತಿಲ್ಲ. ನಾನು ರಾಜಕಾರಣವನ್ನು ಮಾಡುತ್ತಿಲ್ಲವೆಂಬುದನ್ನು ಪುನಃ ಹೇಳುತ್ತಿದ್ದೇನೆ. ಏಕೆಂದರೆ ಇಷ್ಟೊಂದು ಜನ ಮಂತ್ರಿಗಳು ಇರಬೇಕಾದರೆ, ನಾನು ಶಿವರಾಜ ತಂಗಡಗಿಯವರ ಬಗ್ಗೆಯೇ ಏಕೆ ಮಾತನಾಡುತ್ತೇನೆ? ಪ್ರಾಮಾಣಿಕ ಮಂತ್ರಿಗಳು ಬೇಕಾದಷ್ಟು ಜನರಿದ್ದಾರೆ. ಎಲ್ಲರೂ ತಪ್ಪಿತಸ್ಥರು ಎಂದು ನಾನು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಇನ್ನು ಮಂತ್ರಿಗಳಾಗುವುದಕ್ಕೂ ಸಹ ಪ್ರಮಾಣಿಕರು ತುಂಬಾ ಜನರಿದ್ದಾರೆ. ಈ ರೀತಿ ಕೊಲೆಗಡುಕರನ್ನು ರಕ್ಷಣೆ ಮಾಡುತ್ತಿರುವಂಥ ವ್ಯಕ್ತಿಯನ್ನು ಕಿತ್ತು ಹಾಕಿ ಪ್ರಾಮಾಣಿಕರಿಗೆ ಮಂತ್ರಿಗಿರಿಯನ್ನು ಕೊಡಿ. ಕಾಂಗ್ರೆಸ್ ಪಕ್ಷತಪ್ಪು ಮಾಡುತ್ತಿದೆ ಎಂದು ನಾನು ಹೇಳುತ್ತಿಲ್ಲ. ಗೃಹ ಮಂತ್ರಿಗಳಾದ ಶ್ರೀ ಜಾರ್ಜ್‌ರವರು ತಪ್ಪು ಮಾಡಿದ್ದಾರೆಂದು ನಾನು ಹೇಳುತ್ತಿಲ್ಲ ಅಥವಾ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರತಪ್ಪು ಮಾಡಿದೆ ಎಂದು ನಾನು ಹೇಳುತ್ತಿಲ್ಲ. ಕೊಪ್ಪಳ ಜಿಲ್ಲೆಯ ಉಸ್ತುವಾರಿ ಸಚಿವರಾದ ಶ್ರೀ ಶಿವರಾಜ್ ತಂಗಡಗಿಯವರು ಕೊಲೆಗಡುಕರಿಗೆ ರಕ್ಷಣೆಯನ್ನು ಕೊಟ್ಟುಕೊಂಡು ಬಂದಿರುವುದಕ್ಕೋಸ್ಕರ ಅವರಿಗೆ ಇಷ್ಟು ಧೈರ್ಯ ಬಂದಿದೆ. ಕೆಲವರನ್ನು ಮಟ್ಟ ಹಾಕಿದ್ದಾರೆ, ಕೆಲವರನ್ನು ಜೈಲಿಗೆ ಕಳುಹಿಸಿದ್ದಾರೆ. ಹೊಸ ಸಿಐಡಿ ಬಂದ ನಂತರ ಅವರು ಇವರಿಗೆ ಬಗ್ಗಿಲ್ಲ. ಅವರಿಗೆ ಆರು ತಿಂಗಳುಗಳ ಕಾಲ ರಕ್ಷಣೆಯನ್ನು ಕೊಟ್ಟುಕೊಳ್ಳುತ್ತಾ ಬಂದರು. ಹಾಗಾದರೆ 6 ತಿಂಗಳ ಮುಂಚೆ ಏಕೆ ಹನುಮೇಶ್ ನಾಯಕ್‌ನನ್ನು ಜೈಲಿಗೆ ಕಳುಹಿಸಲಿಲ್ಲ? ಅವರು ಏಕೆ ಬಾಯಿ ಬಿಟ್ಟರು, ಅದಕ್ಕಾಗಿ ನಾನು ಹೇಳುತ್ತಿದ್ದೇನೆ.

**ಶ್ರೀ ಎನ್. ಶರಣಪ್ಪ ಮಟ್ಟೂರು (ಶಿಕ್ಷಕರ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಅವರ ಮೇಲೆ ಏನು ಆರೋಪ ಇದೆ, ಎಫ್‌ಐಆರ್‌ನಲ್ಲಿ ಅವರ ಹೆಸರಿದೆಯೇ? Is there any police record or voluntary statement made against him?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರ ಹೆಸರು ಎಫ್‌ಐಆರ್‌ನಲ್ಲಿ ಇಲ್ಲದೇ ಇರುವ ಹಾಗೆ ನೋಡಿಕೊಂಡಿದ್ದಾರೆ.

**ಶ್ರೀ ಎನ್. ಶರಣಪ್ಪ ಮಟ್ಟೂರು (ಶಿಕ್ಷಕರ ಕ್ಷೇತ್ರ):–**ಎಫ್‌ಐಆರ್‌ನಲ್ಲಿ ಅವರ ಹೆಸರಿಲ್ಲದಿದ್ದರೂ.. why you are making such an allegation?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಹೇಳಿದರಲ್ಲಾ, ಈಗ ನಾನು ಹೇಳುವುದನ್ನು ಅವರು ಕೇಳಲಿ. ನಾನು ಹೇಳುವುದನ್ನು ಅವರು ಪೂರ್ಣವಾಗಿ ಕೇಳಲಿ. ಅವರು ಮಾತನಾಡಬೇಕಾದರೆ ಮಾತನಾಡಲಿ. ಅವರಿಗೆ ಧ್ವನಿ ಇಲ್ಲವೇ? ನಾನು ಹೇಳುವುದೇನೆಂದರೆ, ಶಿವರಾಜ್ ತಂಗಡಗಿ ಮೇಲೆಯೇ ಎಫ್‌ಐಆರ್... (ಗೊಂದಲ) ಇದೇನಿದು? ಶಿವರಾಜ್ ತಂಗಡಗಿಯವರ ಮೇಲೆಯೇ ಎಫ್‌ಐಆರ್ ಇದ್ದಿದ್ದರೆ ಅವರನ್ನು ಇವತ್ತೇ ಬಂಧನಕ್ಕೊಳಪಡಿಸಿ ಎಂದು ನಾನು ಹೇಳುತ್ತಿದ್ದೆ. ಅದಕ್ಕಾಗಿಯೇ ನಾನದನ್ನು ಹೇಳುತ್ತಿಲ್ಲ. ಸಿಬಿಐ ನವರಿಗೆ ವಹಿಸಿ ಎಂದು ಏತಕ್ಕಾಗಿ ಹೇಳುತ್ತಿದ್ದೇನೆಂದರೆ,

**ಶ್ರೀ ಶಿವರಾಜ ತಂಗಡಗಿ (ಸಣ್ಣ ನೀರಾವರಿ ಸಚಿವರು):–** ಮಾನ್ಯ ವಿರೋಧ ಪಕ್ಷದ ನಾಯಕರೆ,..

**ಶ್ರೀ ಕೆ.ಎಸ್. ಈಶ್ವರಪ್ಪ:–** ನೀವು ಸತ್ಯ ಹರಿಶ್ಚಂದ್ರರ ಮೊಮ್ಮಗ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಶಿವರಾಜ ತಂಗಡಗಿ:–** ಮಾನ್ಯ ಸಭಾಪತಿಯವರೆ, ನಾಲ್ಕು ತಿಂಗಳುಗಳವರೆವಿಗೂ ಈ ಪ್ರಕರಣ ರೈಲ್ವೆ ಪೊಲೀಸರ ಬಳಿ ಇತ್ತು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಎಲ್ಲಾ ಗೊತ್ತಿದೆ.

**ಶ್ರೀ ಶಿವರಾಜ ತಂಗಡಗಿ:–** ಅಲ್ಲಿಂದ ಬಂದ ನಂತರ ತಕ್ಷಣವೇ ನಾವು ಉಸ್ತುವಾರಿ ಸಚಿವರಿಗೆ ಹೇಳಿದ್ದೇವೆ. ಅದನ್ನು ತಕ್ಷಣವೇ ತನಿಖೆ ಮಾಡಿ ಎಂದಿದ್ದೇವೆ. ಸುಮ್ಮನೇ ಶಿವರಾಜ್ ತಂಗಡಗಿ, ಶಿವರಾಜ್ ತಂಗಡಗಿ ಎಂದರೆ ಹೇಗೆ? ಶಿವರಾಜ್ ತಂಗಡಗಿ ಮಾಡಿದ್ದು ಏನು ಎಂಬುದನ್ನು ಕೇಳಿ. ಏನೋ ಒಂದು ಪ್ರಶ್ನೆಯನ್ನು ಮಾಡುವುದಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇವರು ಉತ್ತರವನ್ನು ಕೊಡುತ್ತಾರೋ ಅಥವಾ ಅವರು ಉತ್ತರವನ್ನು ಕೊಡುತ್ತಾರೋ ನನಗೆ ಗೊತ್ತಿಲ್ಲ?

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರದ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಅವರು ಒಬ್ಬರು ಕ್ಯಾಬಿನೆಟ್ ಸಚಿವರಿದ್ದಾರೆ ಮತ್ತು ಅವರು ಹಾಜರಿದ್ದಾರೆ. ಅವರ ಮೇಲೆ ನೇರವಾಗಿ ಆಪಾದನೆಯನ್ನು ಮಾಡಿದರೆ ಅವರು ಉತ್ತರವನ್ನು ಕೊಡಬೇಕಾಗುತ್ತದೆ. ಇವರಿಗೆ ಏನು ಬೇಕೋ ಅದನ್ನೆಲ್ಲಾ ಹೇಳಿಬಿಡುತ್ತಾರೆ.

**ಶ್ರೀ ಶಿವರಾಜ್ ತಂಗಡಗಿ:–** ವಾಸ್ತವವಾಗಿ ನನ್ನ ಮನಸ್ಸಿಗೆ ನೋವಾಗುತ್ತದೆ. ನನ್ನ ಕ್ಷೇತ್ರ ಅದು. ನನ್ನ ಕ್ಷೇತ್ರದೊಳಗೆ ಯಾವ ರೀತಿ ಜನರಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಅದರ ಜೊತೆಗೆ ಅದೊಂದು ಸಣ್ಣ ಊರು. ಆ ಊರು ಬಹಳ ಅನುಕೂಲವಾದಂಥ ಊರು. ಇವರು ಹೇಳಿದ ಹಾಗೆ ಅಲ್ಲಿಲ್ಲ. ಇವರು ಶಿವರಾಜ್ ತಂಗಡಗಿ ಎಂದು ಹೇಳುತ್ತಿದ್ದಾರೆ. ಶಿವರಾಜ್ ತಂಗಡಗಿ ತಪ್ಪು ಮಾಡಿದ್ದರೆ ಶಿಕ್ಷೆಯನ್ನು ಅನುಭವಿಸುತ್ತಾನೆ. ನಾನು ಇಂಥವರಿಗೆ ಸಪೋರ್ಟ್ ಮಾಡುವಂಥ ಪ್ರಶ್ನೆ ಬರುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ವಿನಂತಿಯನ್ನು ಮಾಡುತ್ತೇನೆ. ನನ್ನ ಕ್ಷೇತ್ರ, ನನ್ನ ಊರು ಅದು. ಅದರ ಬಗ್ಗೆ ನನಗೆ ಅಪಾರವಾದ ಗೌರವವಿದೆ. ಆ ಊರಿಗೆ ಹೋದರೆ ಅವರು ಹೇಳುವ ರೀತಿಯಲ್ಲಿ ಅಲ್ಲಿಲ್ಲ. ಅವರು ನಾನು ಅವರಿಗೆ ರಕ್ಷಣೆಯನ್ನು ಮಾಡಿದ್ದೇನೆಂದು ಹೇಳುತ್ತಿದ್ದಾರೆ. ನಾನು ರಕ್ಷಣೆಯನ್ನು ಮಾಡುವುದಕ್ಕಾಗುವುದಿಲ್ಲ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಸಚಿವರಿಗೆ ಈಗಲೇ ಉತ್ತರವನ್ನು ಕೊಡುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಾ? ಈಗ ನಾನು ಮಾತನಾಡಬೇಕೋ ಅಥವಾ ಅವರು ಮಾತನಾಡಬೇಕೋ?

**ಉಪ ಸಭಾಪತಿಯವರು:–** ಮಾನ್ಯ ಸಚಿವರೆ, ದಯಮಾಡಿ ಕುಳಿತುಕೊಳ್ಳಿ. ಮಾನ್ಯ ವಿರೋಧ ಪಕ್ಷದ ನಾಯಕರು ತಮ್ಮ ಮಾತುಗಳನ್ನು ಮುಗಿಸಲಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಮನೆ ದೇವರ ಮೇಲೆ ಆಣೆ ಮಾಡಿ ಹೇಳುತ್ತೇನೆ. ನಾನು ರಾಜಕೀಯವನ್ನು ಮಾಡುತ್ತಿಲ್ಲ. ಯಲ್ಲಾಲಿಂಗನ ಸಾವು ಆದ ನಂತರ ಇವರು ಹನುಮೇಶ್ ನಾಯಕರಿಗೆ ಸಪೋರ್ಟ್ ಮಾಡಿದ್ದಾರೆ. ಆರು ತಿಂಗಳ ಕಾಲ ಅವರನ್ನು ಬಿಟ್ಟಿಲ್ಲ. ಅವರ ಮನೆಗೆ ಹೋಗಿ ಹೆದರಿಕೆಯನ್ನು ಹಾಕಿಸಿದ್ದಾರೆ, ಅವನಿಗೆ ಫಾಲೋಅಪ್ ಮಾಡಿಸಿದ್ದಾರೆ. ಫೋನ್ ಮಾಡಿದರೂ ಕೂಡ ಅವನಿಗೆ ಭಯ. ತನ್ನ ಕೊಲೆಗೆ ಯಾರು ಕಾರಣ ಎಂದು ಚೀಟಿಯಲ್ಲಿ ಬರೆದುಕೊಂಡಿದ್ದಾನೆ. ಇದೆಲ್ಲಾ ಈಗ ತನಿಖೆಯಾಗಬೇಕು. ಉಸ್ತುವಾರಿ ಸಚಿವರಾಗಿ ಆವತ್ತೇ ಇವರು ತನಿಖೆಯನ್ನು ಮಾಡಿಸುವುದಕ್ಕಾಗಲಿಲ್ಲವೇ? ಈಗ ಇಲ್ಲಿ ಹೇಳುತ್ತಿದ್ದಾರೆ. ಇವರೇಕೆ ಆರು ತಿಂಗಳ

ಮುಂಚೆಯೇ ತನಿಖೆಯನ್ನು ಮಾಡಿಸಲಿಲ್ಲ? ಉಸ್ತುವಾರಿ ಸಚಿವರಿಗೆ ನೀವೇನಾದರೂ ತನಿಖೆ ಮಾಡಿಸಬೇಡಿ ಎಂದು ಹೇಳಿದ್ದೀರಾ?

**ಉಪ ಸಭಾಪತಿಯವರು:–** ದಯಮಾಡಿ ತಮ್ಮ ಮಾತುಗಳನ್ನು ಮುಕ್ತಾಯ ಮಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಗೃಹ ಸಚಿವರಿಗೆ ಹೇಳುವುದೇನೆಂದರೆ, ಸರ್ಕಾರ ಸಾಕಷ್ಟು ಮುಂದೆ ಹೋಗಿದೆ. ನಾನು ಮತ್ತೊಮ್ಮೆ ಹೇಳುತ್ತೇನೆ. ಇದರಲ್ಲಿ ಗೃಹ ಸಚಿವರ ಕೈವಾಡವಿದೆ ಎಂದು ನಾನು ಹೇಳುತ್ತಿಲ್ಲ.

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ಎಷ್ಟು ಸಾರಿ ಹೇಳುತ್ತೀರಿ?

**ಶ್ರೀ ಕೆ.ಎಸ್. ಈಶ್ವರಪ್ಪ:–** ನೂರು ಸಾರಿ ಹೇಳುತ್ತೇನೆ. ನಿಮ್ಮ ಪರ್ಮಿಷನ್ ತೆಗೆದುಕೊಂಡು ಹೇಳಲೇ? ಪರಮೇಶ್ವರ ನಾಯಕ್‌ರವರೆ, ಬೇಡ ಮರ್ಯಾದೆಯಿಂದಿರಿ.

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ನೀವು ನೇರವಾಗಿ ಯಾರ ಮೇಲಾದರೂ ಆರೋಪ ಮಾಡಬೇಕೆಂದರೆ ಅದಕ್ಕೆ ಸಾಕ್ಷಿ ಏನಿದೆ?

**ಶ್ರೀ ಕೆ.ಎಸ್. ಈಶ್ವರಪ್ಪ:–** ನನಗೆ ಮಾತನಾಡುವುದಕ್ಕೆ ಬಿಡುತ್ತಿಲ್ಲ.

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ಅದನ್ನೇ ಎಷ್ಟು ಸಾರಿ ಹೇಳುತ್ತೀರಿ?

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ವಿಧಾನ ಪರಿಷತ್ತು ಎಂದರೆ ದೊಡ್ಡವರ ಮನೆ. ಇಲ್ಲಿ ವಿರೋಧ ಪಕ್ಷದ ನಾಯಕರಿಗೆ ಮಾತನಾಡುವುದಕ್ಕೆ ಬಿಡುವುದಿಲ್ಲ.

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ನಾವು ನೋಡದೆ ಇರುವ ಈಶ್ವರಪ್ಪನವರೆ ನೀವು, ಏನಿದೆ ಹೇಳಿ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ನನ್ನ ಮಾತನ್ನು ಕೇಳುವುದಿಲ್ಲ, ನೀವೇ ಹೇಳಿ.

**(ಗೊಂದಲ)**

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ಹರಿಶ್ಚಂದ್ರ ಮಾತನಾಡಿದ ಹಾಗೆ ಮಾತನಾಡುತ್ತೀರಿ. ಎಲ್ಲರಿಗೂ ಗೊತ್ತಿದೆ.

**ಉಪ ಸಭಾಪತಿಯವರು:–** ಮಾನ್ಯ ವಿರೋಧ ಪಕ್ಷದ ನಾಯಕರೆ, ತಮ್ಮ ಮಾತುಗಳನ್ನು ಮುಗಿಸುತ್ತೀರಾ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರು ಮಾತನಾಡುವುದಕ್ಕೆ ಬಿಡುವುದಿಲ್ಲವೆಂದರೆ ನಾನು ಹೇಗೆ ಮುಗಿಸಲಿ?

**(ಗೊಂದಲ)**

**ಶ್ರೀ ಪಿ.ಟಿ. ಪರಮೇಶ್ವರ್ ನಾಯಕ್:–** ನೀವು ಹಿರಿಯರು, ನಿಮಗೆ ಎಲ್ಲಾ ರೀತಿಯ ಸ್ವಾತಂತ್ರ್ಯ. ನೀವು ಸರ್ಕಾರವನ್ನು ಟೀಕೆ ಮಾಡಿ ನಾವು ಸ್ವಾಗತ ಮಾಡುತ್ತೇವೆ. ಆ ರೀತಿ ನೀವು ದಬ್ಬಾಳಿಕೆ ಮಾಡುವುದಕ್ಕಾಗುವುದಿಲ್ಲ. ನೀವು ಮಾತನಾಡುತ್ತಿರುವುದು ನಿಮ್ಮ ಸ್ಥಾನಕ್ಕೆ ಗೌರವ ತರುವುದಿಲ್ಲ. ಜವಾಬ್ದಾರಿಯುತವಾಗಿ ಮಾತನಾಡಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಹತ್ತು ಬಾರಿ ಹೇಳುತ್ತೇನೆ, ನೂರು ಬಾರಿ ಹೇಳುತ್ತೇನೆ. ಅವರಿಗೆ ಅರ್ಥವಾಗುವ ತನಕ ಹೇಳುತ್ತೇನೆ. ಮಾನ್ಯ ರೇವಣ್ಣನವರೆ, ನಾನು ಟೀಕೆ ಮಾಡುತ್ತಿಲ್ಲ. ಇರುವ ವಿಚಾರವನ್ನು ಹೇಳುತ್ತಿದ್ದೇನೆ.

**ಉಪ ಸಭಾಪತಿಯವರು:–** ಸಚಿವರೆ, ದಯಮಾಡಿ ಕುಳಿತುಕೊಳ್ಳಿ.

**ಶ್ರೀ ಎಸ್.ಆರ್. ಪಾಟೀಲ್ (ಸಭಾನಾಯಕರು):–** ಮಾನ್ಯ ಸಭಾಪತಿಯವರೆ, ಮಾನ್ಯ ವಿರೋಧ ಪಕ್ಷದ ನಾಯಕರು ಆ ಜಿಲ್ಲೆಯ ಉಸ್ತುವಾರಿ ಸಚಿವರನ್ನು ಕುರಿತು ಅವರು ಕೊಲೆಗಡುಕರಿಗೆ ರಕ್ಷಣೆ ಮಾಡುತ್ತಿದ್ದಾರೆ ಎಂದು ಹೇಳುವುದಕ್ಕೆ ಇವರಿಗೆ ಸಾಕ್ಷಿ ಏನಿದೆ? ಅವರು ಹೇಳಿದರು, ಇವರು ಹೇಳಿದರು ಎಂದರೆ is it a right? ಅವರು ಯಾವುದಾದರೂ ಒಬ್ಬ ಮಂತ್ರಿಗಳ ಮೇಲೆ ಆರೋಪವನ್ನು ಮಾಡಬೇಕಾದರೆ ಪೂರ್ವಭಾವಿಯಾಗಿ ನೋಟಿಸ್ ಕೊಡಬೇಕಾಗುತ್ತದೆ. ಅವರು ಕೊಲೆಗಡುಕರಿಗೆ ಆ ಜಿಲ್ಲೆಯ ಉಸ್ತುವಾರಿ ಸಚಿವರು ರಕ್ಷಣೆಯನ್ನು ಕೊಟ್ಟಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇದಕ್ಕೆ ಇವರ ಬಳಿ ಏನು ಸಾಕ್ಷಿ ಇದೆ? He has to adduce the evidence. ಸಾಕ್ಷಿ ಇದ್ದರೆ ಕೊಡಲಿ. ಏನು ಸಾಕ್ಷಿ ಇಲ್ಲದೇ ಜನ ಅಲ್ಲಿ–ಇಲ್ಲಿ ಮಾತನಾಡಿದರು ಎಂದರೆ ಜನರ ಊಹಾಪೋಹಗಳನ್ನು

ಹೇಳುವುದಕ್ಕಾಗುತ್ತದೆಯೇ? ಈಗ ಈಶ್ವರಪ್ಪನವರ ಮೇಲೆ ಜನರು ಏನೇನು ಮಾತನಾಡಿದರು ಎಂಬುದನ್ನು ಬಂದು ಇಲ್ಲಿ ಹೇಳುವುದಕ್ಕಾಗುತ್ತದೆಯೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಹೇಳಿ.

**ಶ್ರೀ ಎಸ್.ಆರ್. ಪಾಟೀಲ್:–** ನೀವು ಜವಾಬ್ದಾರಿಯುತವಾದ ಸ್ಥಾನದಲ್ಲಿದ್ದೀರಿ, ವಿರೋಧ ಪಕ್ಷದ ನಾಯಕರಾಗಿದ್ದೀರಿ. ಒಬ್ಬ ಸಚಿವರ ಮೇಲೆ ನೀವು ನೇರವಾದ ಆಪಾದನೆಯನ್ನು ಮಾಡಬೇಕಾದರೆ there should be an evidence.

**Sri K.B.SHANAPPA:-** Circumstantial evidence ಇದ್ದಾವೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ನೀವು ಪೀಠದಲ್ಲಿ ಕುಳಿತಿದ್ದೀರಿ. ಇದಕ್ಕೆ ಸಾಕ್ಷಿ ಬೇಕು.ಒಬ್ಬಮಂತ್ರಿಗಳ ಮೇಲೆ ಅವರು ನೇರವಾಗಿ allege ಮಾಡುತ್ತಾರೆ. ನೇರವಾಗಿ allege ಮಾಡುವುದಕ್ಕೆ ಬರುತ್ತದೆಯೋ ಹೇಗೋ ಎಂಬುದನ್ನು ನೀವು ನಿಯಮಗಳನ್ನು ತೆಗೆದು ನೋಡಿ. ಅವರು ಇದಕ್ಕೆ prior notice ಕೊಡಬೇಕಾಗುತ್ತದೆ. ಒಬ್ಬರು ಮಂತ್ರಿಗಳ ಮೇಲೆ ನೇರವಾಗಿ allege ಮಾಡುವುದಕ್ಕೆ ಬರುತ್ತದೆಯೇ? ಅವರ ಬಳಿ ಏನು documentary evidence ಇದ್ದಾವೆ? ಸಾಕ್ಷ್ಯಾಧಾರಗಳಿದ್ದರೆ ಅದನ್ನು ತಮ್ಮ ಎದುರಿಗೆ ಈ ಪವಿತ್ರವಾದಂಥ ಸದನದಲ್ಲಿ ಹಾಜರುಪಡಿಸಲಿ. ಯಾವುದೇ ಒಬ್ಬ ಸದಸ್ಯರ ಮೇಲೆ without giving notice, directly a member cannot allege. It is under the rules of procedure. ಏನೂ evidence ಇಲ್ಲದೇ ಮಾತನಾಡಿದರೆ ಈಗ ಅವರ ಚಾರಿತ್ರ್ಯ ವಧೆಯಾಗುವುದಿಲ್ಲವೇ? ಮಾಧ್ಯಮಕ್ಕೆ ಈ ಮಾಹಿತಿ ಹೋಗುವುದಿಲ್ಲವೇ? ಏನೂ ಸಾಕ್ಷಿ ಇಲ್ಲದೇ, ಯಾರೋ ಹೇಳುತ್ತಿದ್ದರು, ನಾವು ಹೋದಾಗ ಕೆಲವು ಜನ ಮಾತನಾಡುತ್ತಿದ್ದರು, ಅವರು ಕೊಲೆಗಡುಕರಿಗೆ ರಕ್ಷಣೆ ಮಾಡುತ್ತಾರೆಂದರೆ.. Is it the way? ಜವಾಬ್ದಾರಿಯುತವಾದ ಸ್ಥಾನದಲ್ಲಿರುವ ವಿರೋಧ ಪಕ್ಷದ ನಾಯಕರು ಏನೇ ಮಾತನಾಡಬೇಕಾಗಿದ್ದರೂ ಅದು ಕಾನೂನಿಗೆ rules and regulations ಗೆ ಒಳಪಟ್ಟು, rules of procedure ಪ್ರಕಾರ ಮಾತನಾಡಬೇಕಾಗುತ್ತದೆ. ಹಾಗೇನಾದರೂ ಅವರು allege ಮಾಡುತ್ತಿದ್ದರೆ ನೋಟಿಸ್ ಕೊಟ್ಟು ಚರ್ಚೆ ಮಾಡಲಿ.

**Sri V.S. UGRAPPA:-** Sir, I am on a point of order.

**ಉಪ ಸಭಾಪತಿಯವರು:–** ಒಂದು ನಿಮಿಷ ಅವರು ಮುಗಿಸಲಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ನಾನು ಪಾಯಿಂಟ್ ಆಫ್ ಆರ್ಡರ್‌ನ್ನು ಎತ್ತಿದ್ದೇನೆ.

**ಶ್ರೀ ಕೆ.ಬಿ. ಶಾಣಪ್ಪ (ನಾಮ ನಿರ್ದೇಶಿತರು):–** ಮಾನ್ಯ ಸಭಾಪತಿಯವರೆ, ಒಬ್ಬ ಉಸ್ತುವಾರಿ ಸಚಿವರಾಗಿ ಅದರ ಬಗ್ಗೆ ಕಾಳಜಿಯನ್ನೇ ಮಾಡುವುದಿಲ್ಲ. ನಾವು ಅದರ ಬಗ್ಗೆ ಚರ್ಚೆ ಮಾಡಿ ಅವರ ಮೇಲೆ ನಾವು ಆಪಾದನೆಯನ್ನು ಮಾಡುತ್ತಿದ್ದೇವೆ. ಅವರು ತನಿಖೆ ಮಾಡಿಲ್ಲವೆಂಬುದು ಸಾಬೀತಾಗುತ್ತದೆ. Definitely, it will come to the conclusion.

**Sri S.R. PATIL:-** When you are making allegation against the Minister, you should give prior notice and you should produce the evidence here.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ನಿಮ್ಮ ಹತ್ತಿರ ಸಾಕ್ಷಿ–ಆಧಾರಗಳಿಲ್ಲದೇ ಮಂತ್ರಿಗಳ ಮೇಲೆ ಅಲಿಗೇಷನ್ ಮಾಡುವುದಕ್ಕೆ ಸಾಧ್ಯವೇ? (ಗೊಂದಲ) ನಿಯಮಗಳನ್ನು ಗಾಳಿಗೆ ತೂರಿ ಏಕೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಜನರಿಗೆ ರಕ್ಷಣೆ ಕೊಡದಿದ್ದ ಮೇಲೆ, what is the meaning of District Minister? ಜನರಿಗೆ ರಕ್ಷಣೆ ಕೊಡಲಿಲ್ಲ ಎಂದ ಮೇಲೆ ಜಿಲ್ಲಾ ಉಸ್ತುವಾರಿ ಮಂತ್ರಿ ಏಕಾಗಿರಬೇಕು?

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಇನ್‌ವೆಸ್ಟಿಗೇಷನ್‌ಗೆ ಕೊಡಬೇಕು ಎಂದು ಕೇಳಿ. ಸರಿಯಾದ ಇನ್‌ವೆಸ್ಟಿಗೇಷನ್ ಆಗಲಿ. ಆದರೆ ಒಬ್ಬ ಮಂತ್ರಿಗಳ ಮೇಲೆ ಸಾಕ್ಷಿ–ಆಧಾರಗಳು ಇಲ್ಲದೇ ಬಾಯಿಗೆ ಬಂದ ಹಾಗೆ ಮಾತನಾಡುವುದು ಸರಿಯಲ್ಲ. It is an offence under Sec. 201 of Indian Penal Code. ಅದಕ್ಕೆ ಇವರಲಿ ಎವಿಡೆನ್ಸ್ ಏನಿದೆ?

**(ಗೊಂದಲ)**

**ಶ್ರೀ ಕೆ.ಬಿ. ಶಾಣಪ್ಪ:–** ಅವೆಲ್ಲವನ್ನು ಕೋರ್ಟ್‌ನಲ್ಲಿ ಪ್ರೊಡ್ಯೂಸ್ ಮಾಡುತ್ತಾರೆ . . .(ಗೊಂದಲ)

**ಶ್ರೀ ಎಸ್.ಆರ್. ಪಾಟೀಲ್:–** ನಿಯಮಗಳನ್ನು ತೂರಿಒಬ್ಬ ಮಂತ್ರಿ ಮೇಲೆ ಅಲಿಗೇಷನ್ ಮಾಡುವುದು ಸರಿಯಲ್ಲ. (ಗೊಂದಲ) ಸರಿಯಾದಂಥ ತನಿಖೆಯಾಗಲಿ, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸಿ ಎಂದು ಹೇಳಲಿ, ಯಾವುದಾದರೂ ಒಂದು ಏಜೆನ್ಸಿ ಮುಖಾಂತರ ತನಿಖೆ ಮಾಡಿಸಿ ಎಂದು ಹೇಳಲಿ. ಆದರೆಒಬ್ಬ ಮಂತ್ರಿಗಳ ಮೇಲೆ ನೇರವಾಗಿ ಏನೂ ಸಾಕ್ಷಿ–ಆಧಾರಗಳಿಲ್ಲದೇ ಆರೋಪ ಮಾಡುವುದು ವಿರೋಧ ಪಕ್ಷದ ನಾಯಕರಿಗೆ ಶೋಭೆತರುವುದಿಲ್ಲ. ಒಂದು ವೇಳೆ ಆ ರೀತಿ ಆರೋಪ ಮಾಡಬೇಕಾದರೆ ನಿಯಮಗಳ ಪ್ರಕಾರ ಮೊದಲು ನೋಟಿಸ್ ಕೊಡಬೇಕಾಗುತ್ತದೆ. ಮಾನ್ಯ ಸಭಾಪತಿಗಳೆ, ಬೇರೆ ವಿಷಯಗಳನ್ನು ಮಾತನಾಡುವುದಕ್ಕೆ ತಾವು ದಯವಿಟ್ಟು ಅವಕಾಶ ಮಾಡಿಕೊಡಬೇಡಿ.

**ಶ್ರೀ ಕೆ.ಬಿ. ಶಾಣಪ್ಪ:–** ಇಷ್ಟೊಂದು ಡಿಫೆನ್ಸ್ ಮಾಡುವುದನ್ನು ನೋಡಿದರೆ we cannot believe them. ನಮಗೆ ಅನುಮಾನ ಬರುತ್ತದೆ . . .

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ನಾನು ತಮ್ಮಲ್ಲಿ ಅನುಮತಿ ಕೇಳಿದ್ದೇನೆ . . .(ಗೊಂದಲ)

**ಶ್ರೀ ಕೆ.ಬಿ. ಶಾಣಪ್ಪ:–** ಯಾರು ಇದರ ಹಿಂದೆ ಇದ್ದಾರೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದಿರಿ, ಅದನ್ನು ನಾವು ಒಪ್ಪುತ್ತೇವೆ . . .(ಗೊಂದಲ)... but don't defend them.

**ಶ್ರೀ ಎಸ್.ಆರ್. ಪಾಟೀಲ್:–** ಈ ದೇಶದ ರಾಷ್ಟ್ರಾಧ್ಯಕ್ಷರಾಗಲಿ, ಪ್ರಧಾನ ಮಂತ್ರಿಯಾಗಲಿ, ಮುಖ್ಯಮಂತ್ರಿಯಾಗಲಿ, everybody should abide by the law of the land. ಕಾನೂನಿಗಿಂತ ಯಾರೂ ದೊಡ್ಡವರಲ್ಲ. ನಮ್ಮ ಸರ್ಕಾರದಿಂದ ಯಾರನ್ನೂ ರಕ್ಷಣೆ ಮಾಡುವಂತಹ ಪ್ರಶ್ನೆ ಇಲ್ಲ. ನಿಷ್ಪಕ್ಷಪಾತವಾಗಿ ತನಿಖೆ ಮಾಡಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡುವ ಕೆಲಸ ಮಾಡಿದ್ದೇವೆ, ಆದ್ದರಿಂದಲೇ ಇದನ್ನು ಸಿಐಡಿಗೆ ರೆಫರ್ ಮಾಡಿದ್ದೇವೆ. ಆದರೆ ನೀವು ಈ ರೀತಿಯಾಗಿ ಬೇಜವಾಬ್ದಾರಿಯಿಂದ ಒಬ್ಬ ಸಚಿವರ ಮೇಲೆ ಯಾವುದೇ ಸಾಕ್ಷ್ಯಾಧಾರಗಳಿಲ್ಲದೆ ಆರೋಪ ಮಾಡಿ, ಚಾರಿತ್ರ್ಯವದೆ ಮಾಡುವಂಥದ್ದು ಶುದ್ಧ ತಪ್ಪು. ನಿಯಮಾವಳಿಗಳಲ್ಲಿ ಇದಕ್ಕೆ ಅವಕಾಶ ಇಲ್ಲ. (ಗೊಂದಲ) ತಾವು ಇದಕ್ಕೆ ಅವಕಾಶ ಕೊಡಬಾರದು.

**ಶ್ರೀ ಕೆ.ಬಿ. ಶಾಣಪ್ಪ:–** ತಪ್ಪಿತಸ್ಥರನ್ನು ಶಿಕ್ಷಿಸುತ್ತೇವೆ ಎಂದಷ್ಟೇ ಹೇಳಿ. ಸಾಕ್ಷ್ಯಾಧಾರಗಳನ್ನು ಸದನದಲ್ಲಿ ಕೊಡುವುದಕ್ಕಾಗುವುದಿಲ್ಲ. ಕೋರ್ಟ್‌ನಲ್ಲಿ ಸಾಕ್ಷ್ಯಾಧಾರ ಒದಗಿಸಲಾಗುತ್ತದೆ, ಇಲ್ಲಿ ತಂದು ನಿಮಗೆ ಕೊಡುವುದಕ್ಕಾಗುತ್ತದೆಯೇ?

**(ಗೊಂದಲ)**

**ಉಪ ಸಭಾಪತಿಗಳು:–** ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಬೆಳಿಗ್ಗೆ ಮಾತನಾಡಿದಾಗ ತಾವು ಮುಖಂಡರುಗಳು ಈ ವಿಷಯವನ್ನು 2 ಗಂಟೆಅವಧಿ ಒಳಗೆ ಮುಗಿಸಬೇಕು ಎಂದು ಹೇಳಿದ್ದೀರಿ. ಅದಕ್ಕೋಸ್ಕರ ಪ್ರಶ್ನೋತ್ತರ ವೇಳೆಯನ್ನು ಮುಂದಿನ ಬುಧವಾರಕ್ಕೆ ಹಾಕಿಸಿದ್ದೀರಿ. 2 ಗಂಟೆ ಅವಧಿ ಒಳಗೆ ಮುಗಿಸುತ್ತೇವೆ ಎಂದು ಹೇಳಿ, ದಿನಪೂರ್ತಿ ಮಾತನಾಡಿ ನಾಳೆಯೂ ಮುಂದುವರೆಯುವ ಹಾಗೆ ಮಾಡುತ್ತೀರಾ? ಹೀಗೆ ಚರ್ಚೆ ಮಾಡಿದರೆ ಅಜೆಂಡಾವನ್ನು ಹೇಗೆ ಪೂರ್ಣಗೊಳಿಸುವುದಕ್ಕೆ ಆಗುತ್ತದೆ.

**ಶ್ರೀ ಆರ್.ವಿ. ವೆಂಕಟೇಶ್:–**ಈ ವಿಚಾರ ತಮಗೆ ಚೆನ್ನಾಗಿ ಗೊತ್ತಿತ್ತು. ಒಬ್ಬರಿಗೆಯೇ ತಾವು ಒಂದೂ ಮುಕ್ಕಾಲು ಗಂಟೆ ಚರ್ಚೆ ಮಾಡಲು ಅವಕಾಶ ಕೊಟ್ಟು ಬೇರೆಯವರಿಗೆ, 15 ನಿಮಿಷದಲ್ಲಿ ಮುಗಿಸಿ ಎಂದು ಹೇಳಿದರೆ ಹೇಗೆ? . . .(ಗೊಂದಲ)

**ಉಪ ಸಭಾಪತಿಗಳು:–** ನಾನು ಅದನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ 5.45 ಗಂಟೆಗೆ ಮುಗಿಸಿ ಎಂದು ಹೇಳಿದ್ದೇನೆ. ಮತ್ತೆ ಮತ್ತೆ ಈ ವಿಷಯವನ್ನು ಎಳೆದುಕೊಂಡು ಹೋದರೆ ಹೇಗೆ ಮುಗಿಸುವುದಕ್ಕಾಗುತ್ತದೆ? ಅಜೆಂಡಾದಲ್ಲಿ ನಿಮ್ಮ ಪ್ರಶ್ನೆಗಳಿವೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಗಳೆ, Article.21 of the Constitution of India says right to life is a fundamental right of a citizen. ಇದನ್ನು ಅರ್ಥ ಮಾಡಿಕೊಳ್ಳಬೇಕು. ಯಾವುದೇ ಕಾರಣದಿಂದ ಯಾವುದೇ ಒಬ್ಬ ವ್ಯಕ್ತಿಯ ಪ್ರಾಣವನ್ನು ತೆಗೆಯುವುದಕ್ಕೆ ಕಾನೂನಿನಲ್ಲಿ ಅವಕಾಶ ಇಲ್ಲ. ಅದರ ಬಗ್ಗೆ ಯಾರು ಬೇಕಾದರೂ ಸಹ ಕಾನೂನಿನ ಚೌಕಟ್ಟಿನಲ್ಲಿ ಕ್ರಮ ಜರುಗಿಸಬಹುದಾಗಿದೆ. ಈ ಇಶ್ಯೂಗೆ ಸಂಬಂಧಪಟ್ಟಂತೆ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನನ್ನ ಜಿಲ್ಲಾ ಮಂತ್ರಿಗಳು ಅದರಲ್ಲಿ ಇನ್‌ವಾಲ್ವ್ ಆಗಿದ್ದಾರೋ ಇಲ್ಲವೋ ಎನ್ನುವ ಬಗ್ಗೆ ಚರ್ಚೆ ಮಾಡುವುದಕ್ಕೂ ಹೋಗುವುದಿಲ್ಲ. ಪಾಯಿಂಟ್ ಆಫ್ ಆರ್ಡರ್ ಏನೆಂದರೆ, ದಯಮಾಡಿ ನಿಯಮ 307 ಅನ್ನು ಓದಿ. ಅದರಲ್ಲಿ, ***'Procedure regarding allegation against a person:-*** *No allegations of a defamatory or incriminatory nature shall be made by a member against any person…'* ನೀವುಗಳು ಕೊಲೆಗಡಕರು, ನಿಮ್ಮ ಇನ್‌ವಾಲ್ವ್‌ಮೆಂಟ್ ಇದೆ, ಅವರಿಗೆ ರಕ್ಷಣೆ ಕೊಟ್ಟಿದ್ದೀರಿ ಎಂಬ ಮಾತನ್ನು ಹೇಳಿದ್ದಾರೆ. ನಮ್ಮ ಸದನ ಸಂಪ್ರದಾಯ ಮತ್ತು ನಿಯಮಾವಳಿಗಳ ಅಡಿಯಲ್ಲಿ ನಡೆಯಬೇಕು. ಸದನದ ಸದಸ್ಯರಾಗಿ, ಮಂತ್ರಿಗಳಾಗಿ ಅಥವಾ ವಿರೋಧ ಪಕ್ಷದ ನಾಯಕರಾಗಿಯಾರೂ ಸಹ not above the law and not above the rules ಮಾನ್ಯ ಸಭಾಪತಿಗಳೆ, ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಅನೇಕ ಜನ ಸದಸ್ಯರು ಮಾನ್ಯ ಮಂತ್ರಿಗಳ ಮೇಲೆ defamatory and incriminatory statements ಮಾಡಿದ್ದಾರೆ. ಇದು ಕಾನೂನಿಗೆ, ನಿಯಮಾವಳಿಗಳಿಗೆ ವಿರುದ್ಧವಾಗಿ ಆಗಿರುವಂಥದ್ದು. ನಿಯಮಾವಳಿಯಲ್ಲಿ as a

Chairman you have a right to prevent ಎಂದು ಹೇಳಲಾಗಿದೆ. ಅಂದರೆ '*Provided that the Chairman, may, at any time, prohibit any member from making any such allegation…*' ಎಂದಿದೆ. ದಯಮಾಡಿ ಈಗೇನು ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಯಾವುದೇ ನೋಟಿಸ್ ಕೊಡದೇ, ಆಧಾರವಿಲ್ಲದೇ ಆರೋಪವನ್ನು ಮಾಡಿದ್ದಾರೋ ಅದು ಕಡತಕ್ಕೆ ಹೋಗುವುದು ಸಮಂಜಸವಲ್ಲ. ಒಂದು ವೇಳೆ ಅದು ಕಡತಕ್ಕೆ ಹೋದರೆ ನಿಯಮಾವಳಿ 307ರ ವಿರುದ್ಧವಾಗುತ್ತದೆ. ಹಾಗಾಗಿ ದಯವಿಟ್ಟು ತಾವು ಇದರ ಮೇಲೆ ಆದೇಶ ಮಾಡಬೇಕು. ಆ ಆದೇಶದ ರೀತ್ಯ ಏನು defamatory ಮಾಡಿರುವ ಸ್ಟೇಟ್‌ಮೆಂಟ್ ಇವೆ ಅವುಗಳನ್ನು expunge ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡಬಯಸುತ್ತೇನೆ.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಗಳೆ, ದಯವಿಟ್ಟು ತಮ್ಮ ರೂಲಿಂಗ್ ಕೊಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ದಯವಿಟ್ಟು ತಮ್ಮ ರೂಲಿಂಗ್ ಕೊಡಿ. I demanding an order on this.

**(ಗೊಂದಲ)**

**ಶ್ರೀ ಕೃಷ್ಣ ಭೈರೇಗೌಡ:–** ಸದನ ನಿಯಮಾವಳಿಗಳ ಪ್ರಕಾರ ನಡೆಯಬೇಕಾಗುತ್ತದೆ. ಒಂದು ಬಾರಿ ಇದಕ್ಕೆ ತಾವು ಅವಕಾಶ ಕೊಟ್ಟರೆ ಇದು ಎಲ್ಲಿ ಹೋಗಿ ತಲುಪುತ್ತದೆ ಎಂದು ಊಹೆ ಮಾಡಿಕೊಳ್ಳುವುದಕ್ಕೂ ಸಾಧ್ಯವಾಗುವುದಿಲ್ಲ. ಸದನ ನಿಯಮಾವಳಿಗಳ ಪ್ರಕಾರ ನಡೆಯಲಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಗಳೆ, ರೂಲಿಂಗ್ ಆಮೇಲೆ ಕೊಡಿ. ಈಗಲೇ ಕೊಡಬೇಕು ಎಂದೇನಿಲ್ಲ . . .(ಗೊಂದಲ) ಈಗಲೇ ರೂಲಿಂಗ್ ಕೊಡಬೇಕೆಂದು ಕಾನೂನೇ ನಿಲ್ಲ, ಆಮೇಲೆ ಕೊಡಬಹುದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, ದಯವಿಟ್ಟು ನಿಯಮ 307 ಅನ್ನು ಓದಿ . .

**(ಗೊಂದಲ)**

**ಶ್ರೀ ಬಿ. ರಾಮಕೃಷ್ಣ:–** ಮಾನ್ಯ ಸಭಾಪತಿಗಳೆ, ಈ ವಿಷಯ 2 ಗಂಟೆಯಿಂದ ಚರ್ಚೆ ಆಗುತ್ತಿದೆ, ಈಗ ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡಿದ್ದಾರೆ. ರೂಲಿಂಗನ್ನು ಕಾಯ್ದಿರಿಸಿ ಚರ್ಚೆಯನ್ನು ಮುಂದುವರೆಸುವುದಕ್ಕೆ ಅವಕಾಶ ಕೊಡಿ . . . .(ಗೊಂದಲ)

**ಉಪ ಸಭಾಪತಿಗಳು:–** ಮಾನ್ಯ ಉಗ್ರಪ್ಪನವರು ಪಾಯಿಂಟ್ ಆಫ್ ಆರ್ಡರ್ ಎತ್ತಿದ್ದಾರೆ ಅದಕ್ಕೆ ನಂತರ ರೂಲಿಂಗ್ ಕೊಡುತ್ತೇನೆ. ಈಗ ಈ ಚರ್ಚೆ ಮುಂದುವರೆಯಲಿ. 6.15 ಗಂಟೆಯೊಳಗೆ ಇದು ಮುಗಿಯಬೇಕು. ಮಾನ್ಯ ವಿರೋಧ ಪಕ್ಷದ ನಾಯಕರೆ, ದಯವಿಟ್ಟು ನೀವು ಇನ್ನು 2 ನಿಮಿಷದಲ್ಲಿ ಮುಗಿಸಬೇಕು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಗಳೆ, ಮಾನ್ಯ ಗೃಹ ಸಚಿವರಲ್ಲಿ ಕೊನೆಯ ಒತ್ತಾಯ ಏನೆಂದರೆ, ಎಲ್ಲಾ ಪತ್ರಿಕೆಗಳ ವರದಿಗಾರರು ತಮ್ಮ ಜೀವವನ್ನು ಒತ್ತೆ ಇಟ್ಟು ಪತ್ರಿಕೆಗಳಲ್ಲಿ ಸುದ್ದಿಯನ್ನು ಹಾಕಿದ್ದಾರೆ. ಈ ಪತ್ರಿಕಾ ವರದಿಗಳ ಮೇಲೆ, ನಾನು ಆ ಸ್ಪಾಟ್‌ಗೆ ಹೋಗಿ ನೋಡಿದ ಮೇಲೆ, ಅವರ ತಾಯಿಯನ್ನೂ ಭೇಟಿ ಮಾಡಿ ಎಲ್ಲಾ ಆದಮೇಲೆ ಏನು ನಡೆದಿದೆ ಎನ್ನುವುದನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ತಾವು ಇದರ ಬಗ್ಗೆ ಪರಿಶೀಲನೆ ಮಾಡಿ, ಸಂಬಂಧಪಟ್ಟ ಮಂತ್ರಿಗಳನ್ನು ಸಚಿವ ಸಂಪುಟದಿಂದ ಹೊರಗೆ ಹಾಕಿ ಇದನ್ನು ಸಿಬಿಐ ತನಿಖೆಗೆ ಕೊಡಬೇಕು ಎಂದು ಒತ್ತಾಯ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ. ನಮಸ್ಕಾರ.(ಗೊಂದಲ)

**ಶ್ರೀ ಆರ್.ಕೆ. ಸಿದ್ದರಾಮಣ್ಣ:–** ಮಾನ್ಯ ಸಭಾಪತಿಗಳೆ, ತಾವು ರೂಲಿಂಗ್ ಕೊಡುವುದಕ್ಕೆ ಮುಂಚೆ ಮಾತನಾಡಲು ನನಗೆ ಅವಕಾಶ ಕೊಡಿ . . . .(ಗೊಂದಲ)

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಗಳೆ, ತಮ್ಮಲ್ಲಿ ವಿನಯವಾಗಿ ಪ್ರಾರ್ಥನೆ ಮಾಡುತ್ತೇವೆ. ಹೊಸ ಹೊಸ ಸಂಪ್ರದಾಯಗಳಿಗೆ ನಾಂದಿ ಹಾಕಿಕೊಟ್ಟು ಈ ಸದನವನ್ನು ಯಾವ ದಿಕ್ಕಿಗೆ ತೆಗೆದುಕೊಂಡು ಹೋಗಲು ತೀರ್ಮಾನ ಮಾಡಿದ್ದಾರೆ ಎನ್ನುವುದರ ಬಗ್ಗೆ ತಾವು ತೀರ್ಮಾನ ಮಾಡಬೇಕು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಗಳೆ, ನಾನು ನಿಯಮದಲ್ಲಿರುವುದನ್ನು ಓದುತ್ತೇನೆ.

**(ಗೊಂದಲ)**

**(6.00 ಗಂಟೆ)**

**ಉಪ ಸಭಾಪತಿಯವರು:–** ಉಗ್ರಪ್ಪನವರಿಗೆ ನಂತರ ತಿಳಿಸುತ್ತೇನೆಂದು ಹೇಳಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ನೀವು ನಿಷೇಧ ಮಾಡಬೇಕು ಎಂದು ಇದೆ. You should not permit the Member to make allegations against the Hon'ble Minister, that too without giving the Notice. Rule 307 is very clear. ನೀವು ನಿಷೇಧ ಮಾಡಬೇಕು

ಎಂದು ಇದೆ. If you permit, then they will go on making allegations. Can I read this Rule 307 once again? ನಿಮ್ಮ ಗಮನಕ್ಕೆ ಮತ್ತೊಂದು ಸಲ ತರುತ್ತೇನೆ.

**ಉಪ ಸಭಾಪತಿಯವರು:–** ಅದು ಗೊತ್ತಾಗಿದೆ, ತಾವು ಇದರ ಬಗ್ಗೆ ಮಾತನಾಡುವುದಾದರೆ ಮಾತನಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂತಹ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು. ನಿಷೇಧಿಸುವಂತಹ ಅಧಿಕಾರ ತಮಗೆ ಇದೆ. ಇಲ್ಲಿ Prior Notice ಇಲ್ಲ, unnecessary allegation ಮಾಡಿದ್ದಾರೆ, evidence ಇಲ್ಲ, sarcastic allegations ಮಾಡಿದ್ದಾರೆ. ನಿಷೇಧ ಮಾಡುವಂತಹ ಅಧಿಕಾರ ತಮಗೆ ಇದೆ.

**ಉಪ ಸಭಾಪತಿಯವರು:–** ನಾನು ನಂತರ ತಿಳಿಸುತ್ತೇನೆ ಎಂದು ಹೇಳಿದ್ದೇನೆ. ನೀವು ಇದರ ಬಗ್ಗೆ ಚರ್ಚೆ ಮಾಡಿ.

**ಶ್ರೀ ಎಸ್.ಆರ್. ಪಾಟೀಲ್:–** ನೀವು expunge ಮಾಡುವುದಕ್ಕೆ ಆದೇಶ ಕೊಡಿ.

**ಉಪ ಸಭಾಪತಿಯವರು:–** ಉಗ್ರಪ್ಪನವರು ಹೇಳಿರುವಂತಹ point of orderಗೆ ನಾನು ನಂತರ ತಿಳಿಸುತ್ತೇನೆಂದು ಹೇಳಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ಈಗ ಏನು allege ಮಾಡಿದ್ದಾರೆ, unnecessarily without any evidence and without giving any Notice ಅವರು ಏನು allege ಮಾಡಿದ್ದಾರೆ, unnecessarily against the Hon'ble Minister. That should be expunged from the record.

**ಉಪ ಸಭಾಪತಿಯವರು:–** ನೀವು ಮಾತನಾಡಿ, ನಾನು ಅದರ ಬಗ್ಗೆ ನಂತರ ತಿಳಿಸುತ್ತೇನೆ.

**ಶ್ರೀ ಆರ್.ವಿ. ವೆಂಕಟೇಶ್:–** ಅದರ ಬಗ್ಗೆ ruling ಕೊಡಿ.

**ಉಪ ಸಭಾಪತಿಯವರು:–** ಈಗಲೇ ಕೊಡಿ ಎಂದು ಏಕೆ ಕೇಳುತ್ತೀರಿ, ನಾನು ತಿಳಿಸುತ್ತೇನೆ ಎಂದು ಹೇಳಿದ್ದೇನೆ.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೇ, ತನಿಖೆಯನ್ನು ಸರಿಯಾಗಿ ಮಾಡಲಿ, agency ಬಗ್ಗೆ ಮತ್ತು ಇನ್ನಿತರ culprits ಗಳ ಬಗ್ಗೆ ಹೇಳಲಿ. Allegation ಮಾಡಿರುವುದನ್ನು ನೀವು expunge ಮಾಡಲೇಬೇಕು. You should not permit. It should be expunged from the record. ಇಲ್ಲವೆಂದರೆ ಈ ರೀತಿಯಾಗಿ ಮುಂದುವರೆದರೆ ನಾಳೆ ಯಾರ ಮೇಲಾದರೂ ಏನೇನೋ without Notice ಎಲ್ಲರ ಮೇಲೂ ಆರೋಪ ಮಾಡುತ್ತಾ ಹೋಗಬಹುದು.

**ಶ್ರೀ ಕೃಷ್ಣ ಭೈರೇಗೌಡ:–** ಮಾನ್ಯ ಸಭಾಪತಿಯವರೇ, ಏನಾದರೂ ಅವರದ್ದು ಆರೋಪ ಇದ್ದು ಸಾಕ್ಷ್ಯಾಧಾರ ಇದ್ದರೆ ವೈಯಕ್ತಿಕವಾಗಿ ಅವರಿಗೆ ಸೂಚನೆಯನ್ನು ಕೊಟ್ಟು ಪ್ರಸ್ತಾಪ ಮಾಡಬೇಕಾಗುತ್ತದೆ. ಸಾಕ್ಷ್ಯಾಧಾರ ಇಲ್ಲದೆ ಇವರು ಮಾತನಾಡಿದರೆ ನಾಳೆ ಯಾರ ಮೇಲು ಯಾರು ಏನು ಬೇಕಾದರೂ ಹೇಳಬಹುದು ಎಂದರೆ ತಾವು ಸದನವನ್ನು ಹೇಗೆ ನಡೆಸುತ್ತೀರಿ?

**ಶ್ರೀ ಎಸ್.ಆರ್. ಪಾಟೀಲ್:–** ಅದನ್ನು ಮಾಡಬೇಕಾದರೂ ನೋಟಿಸ್ ಕೊಡಬೇಕು.

**(ಗೊಂದಲ)**

**ಉಪ ಸಭಾಪತಿಯವರು:–** ವೆಂಕಟೇಶ್‌ರವರೇ, ನಿಮ್ಮ ಕಡೆ ಯಾರು ಮಾತನಾಡುತ್ತಾರೆ, ಮಾತನಾಡುವುದಾದರೆ ಮಾತನಾಡುವುದಕ್ಕೆ ಹೇಳಿ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೇ, ಎಷ್ಟು ಪ್ರಕರಣಗಳಲ್ಲಿ ಪತ್ರಿಕೆಗಳಲ್ಲಿ ಬಂದಿದೆ ಏನೇನು ಆಗಿದೆ ಎಂದು ತಮಗೆ ಗೊತ್ತಿದೆ. ಉದಾಹರಣೆಗೆ, Nanditha case in Thirthahalli, ಶಿವಮೊಗ್ಗದ ಮಂಜುನಾಥ್ ಪ್ರಕರಣ, ಎಲ್ಲದರಲ್ಲೂ ಇದೇ ರೀತಿ ರಾಜಕೀಯ ಪ್ರಯತ್ನಗಳನ್ನು ಮಾಡುತ್ತಿದ್ದರು.

**ಉಪ ಸಭಾಪತಿಯವರು:–** ಇಷ್ಟು ಜನ ಏಕೆ ನಿಲ್ಲುತ್ತೀರಿ? ಈಗ ಮಾತನಾಡುವುದಕ್ಕೆ ನಿಮಗೆ ಅವಕಾಶ ಇದೆಯಲ್ಲಾ? ಇದರ ಬಗ್ಗೆ ಯಾರಾದರೊಬ್ಬರು ಮಾತನಾಡಿ. ಅದು ಏನು ಮಾತನಾಡುತ್ತೀರೋ ಮಾತನಾಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ,.....

**ಉಪ ಸಭಾಪತಿಯವರು:–** ಸಚಿವರೇ, ಕುಳಿತುಕೊಳ್ಳಿ. ಒಬ್ಬರು ಮಾತನಾಡುವಾಗ ಹೇಗೆ ನಿಂತುಕೊಳ್ಳುತ್ತೀರಿ? ನಾನು ಹೇಳಿದರೂ ಕುಳಿತುಕೊಳ್ಳುವುದಿಲ್ಲವಲ್ಲ ಏಕೆ? ಇಲ್ಲದಿದ್ದರೆ ನೀವೇ ಮಾತನಾಡಿ, ಅವರು ಕುಳಿತುಕೊಳ್ಳಲಿ.

**ಶ್ರೀ ಕೃಷ್ಣಭೈರೇಗೌಡ:–** ಮಾನ್ಯ ಸಭಾಪತಿಯವರೇ, ನಾನು ಮತ್ತೊಮ್ಮೆ ಹೇಳುತ್ತೇನೆ. ಏಕೆಂದರೆ, ಇದು ಸದನದ ಗೌರವದ ಪ್ರಶ್ನೆ. ಯಾರಾದರೊಬ್ಬರ ಮೇಲೆ ಆರೋಪ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇದೆ. ಇಲ್ಲ ಎಂದಲ್ಲ. ನಾವು ಆರೋಪ ಮಾಡಬಾರದು ಎಂದು ಹೇಳುತ್ತಿಲ್ಲ. ನಿಯಮದ ಚೌಕಟ್ಟಿನಲ್ಲಿ ಮಾಡಬೇಕೇ ಹೊರತು ನಾನು ಇಷ್ಟ ಬಂದ ಹಾಗೆ ನಿಂತುಕೊಂಡು ಯಾರೋ ಒಬ್ಬರ ಮೇಲೆ ಏನು ಬೇಕಾದರು ಅರೋಪವನ್ನು ಮಾಡಿದರೆ ಅದರ ಪರಿಣಾಮಗಳೇನು ಆಗುತ್ತದೆ? ಜವಾಬ್ದಾರಿ ಸ್ಥಾನದಲ್ಲಿರುವ ನಮ್ಮಂಥವರಿಗೆ ಇದು ಸದನದ ಎಲ್ಲಾ ಸದಸ್ಯರ ಪ್ರಶ್ನೆ. ಅವರು ಯಾರ ಮೇಲಾದರೂ ಆರೋಪ ಮಾಡಬೇಕಾದರೆ ವೈಯುಕ್ತಿಕವಾಗಿ ಸೂಚನೆಯನ್ನು ಕೊಡಬೇಕಾಗುತ್ತದೆ. ವೈಯುಕ್ತಿಕ ಸೂಚನೆ ಕೊಟ್ಟು ಅವರ ಹೆಸರನ್ನು ಪ್ರಸ್ತಾಪ ಮಾಡಿದರೆ ಪರವಾಗಿಲ್ಲ. ಸಾರ್ವತ್ರಿಕ ಸೂಚನೆಯನ್ನು ಕೊಟ್ಟು ಆರಕ್ಷಕ ಇಲಾಖೆಯಲ್ಲಿ ಏನಾದರೂ ತಪ್ಪಾಗಿದ್ದರೆ ನೀವು ಅದನ್ನು ತನಿಖೆ ಮಾಡುತ್ತಿರುವುದು ಸರಿಯಿಲ್ಲ ಎಂದು ಹೇಳಲಿ. ಅದು ಹೇಳುವಂತಹ ಎಲ್ಲಾ ಹಕ್ಕು ಸ್ವಾತಂತ್ರ್ಯ ಅವರಿಗಿದೆ. ಆರಕ್ಷಕ ಇಲಾಖೆಯವರು ಸರಿಯಾಗಿ ತನಿಖೆ ಮಾಡುತ್ತಿಲ್ಲ ಎಂದು ಹೇಳುವುದನ್ನು ಬಿಟ್ಟು ಯಾರದೋ ಒಬ್ಬರ ಹೆಸರನ್ನು ಪ್ರಸ್ತಾಪ ಮಾಡಿ ಅವರಿಗೆ ಶಿಕ್ಷೆಯನ್ನು ಕೂಡ ನೀವು ವಿಧಿಸಿಬಿಟ್ಟರೆ ಕಾನೂನು, ರೀತಿ ರಿವಾಜು ಅವುಗಳೆಲ್ಲಾ ಯಾಕಾದರೂ ಇರಬೇಕು? ನಾವೇ ಇಲ್ಲಿ ತೀರ್ಮಾನ ಮಾಡಿಬಿಡುವುದಾದರೆ ಒಬ್ಬರಿಗೆ ಅವಕಾಶ ಕೊಡದೆ ನೀನು ಅಪರಾಧಿ ಎಂದು ಅವರಿಗೆ ತೀರ್ಪು ಕೊಡುವಂತಹ ವ್ಯವಸ್ಥೆಯಾದರೆ ಇದು ಸರಿಯೇ? ನಾಳೆ ನಾನು ಕೂಡ ಈ ರೀತಿ ಹೇಳುವುದಕ್ಕೆ ಶುರು ಮಾಡಿದರೆ, ಹಿರಿಯರಾದ ಈಶ್ವರಪ್ಪನವರ ಬಗ್ಗೆ ನಾಳೆ ನಾನು ಹೀಗೆ ಮಾತನಾಡುತ್ತಾ ಮಧ್ಯೆದಲ್ಲಿ ಏನು ಬೇಕಾದರೂ ಅವರಿಗೆ ಹೇಳಿಬಿಟ್ಟರೆ ಅದನ್ನು ಕಡತಕ್ಕೆ ಹೋಗುವುದಕ್ಕೆ ಬಿಟ್ಟರೆ ಅಲ್ಲಿಗೆ ಆ ಸದಸ್ಯರ ಹಕ್ಕು ಏನಾಯಿತು? ಇದಕ್ಕೆ ತಾವು ಅವಕಾಶ ಮಾಡಿಕೊಡುವುದಾದರೆ ಸದನ ನಡೆಸುವುದಾದರು ಹೇಗೆ? ತಪ್ಪು ಎಂದು ಸಾಬೀತಾಗಲಿ. ಆಮೇಲೆ ಸಾಂದರ್ಭಿಕ ಸಾಕ್ಷ್ಯಾಧಾರಕ್ಕೆ ಚೌಕಟ್ಟು ಇವೆ. ಅವರು ಶಾಸಕರು, ವಕೀಲರು ಕೂಡ ಆಗಿದ್ದಾರೆ. ಸಾಂದರ್ಭಿಕ ಸಾಕ್ಷ್ಯಾಧಾರಕ್ಕೂ ಅದಕ್ಕೂ ಚೌಕಟ್ಟು ಇದೆ. ಯಾರನ್ನಾದರೂ ನಾವು ಅಪರಾಧಿಯನ್ನಾಗಿ ಸೂಚಿಸಬೇಕಾದರೆ ಅದಕ್ಕೆ ಎಲ್ಲಾದರೂ ಒಂದು ಕಡೆ ತನಿಖೆಯಲ್ಲಿ ಬಂದಿರಬೇಕು ಅಥವಾ ತನಿಖೆಯಲ್ಲಿ ಬಿಟ್ಟು ಹೋಗಿದೆ ಎಂದು ಅದನ್ನು ಬೇಕಾದರೂ ಹೇಳಲಿ, ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಅದನ್ನು ಬಿಟ್ಟು ನೇರವಾಗಿ ಒಬ್ಬರ ಮೇಲೆ ಹೆಸರನ್ನು ಪ್ರಸ್ತಾಪಿಸಿ ಆರೋಪ ಮಾಡುವುದು ಸೂಕ್ತ ಅಲ್ಲ. ಅದಕ್ಕೆ ಕಾನೂನಿನಲ್ಲಿ ಅವಕಾಶವೂ ಇಲ್ಲ. ಅದಕ್ಕೆ ದಯವಿಟ್ಟು ಅವಕಾಶ ಕೊಡಬಾರದು. ಅವರೇನು ಒಂದು

ಹಕ್ಕುಚ್ಯುತಿ Point of Order ನ್ನು ಎತ್ತಿದ್ದಾರೆ ದಯವಿಟ್ಟು ಅದಕ್ಕೆ ಅನುಗುಣವಾಗಿ ಅವರ ಪರವಾಗಿ ನಾನು ಕೂಡ ತಮ್ಮಲ್ಲಿ ಮನವಿ ಮಾಡುತ್ತೇನೆ. ಇಂಥವು ಕಡತಕ್ಕೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬಾರದು. ಈ ವಿಚಾರದ ಬಗ್ಗೆ ಚರ್ಚೆಯಾಗಲಿ. ಸರ್ಕಾರ ತಪ್ಪು ಮಾಡಿದ್ದರೆ ಸರ್ಕಾರವನ್ನು ಬಡಿದು ಎಬ್ಬಿಸಿ. ತಪ್ಪು ಮಾಡಿದ್ದರೆ ನಮ್ಮನ್ನು ಸರಿಪಡಿಸಿ. ಅದಕ್ಕೆ ನಾವು ಸ್ವಾಗತ ಮಾಡುತ್ತೇವೆ. ನಮ್ಮಿಂದ ಏನಾದರೂ ತಪ್ಪಾಗಿದ್ದರೆ ಅದನ್ನು ಸರಿ ಮಾಡಿಕೊಳ್ಳೋಣ. ಅದನ್ನು ಬಿಟ್ಟು ನೇರವಾಗಿ ಈ ರೀತಿ ಮಾಡುವುದಕ್ಕೆ ದಯವಿಟ್ಟು ತಾವು ಅವಕಾಶ ಕೊಡಬಾರದು.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ನನ್ನ ಮನವಿ ಏನೆಂದರೆ, Point of Order ಅನ್ನು ಉಗ್ರಪ್ಪನವರು ಎತ್ತಿದ್ದಾರೆ. ಚರ್ಚೆಯಲ್ಲಿ ಸವಿಸ್ತಾರವಾದ ವಿಚಾರವನ್ನು ಎಲ್ಲರೂ ಹೇಳಿದ್ದಾರೆ. ಇಲ್ಲಿವರೆಗೆ ಏನೇನು ಆಗಿದೆ ಎಂಬುದನ್ನು ಹೇಳಿದ್ದಾರೆ. ಕಡತದಲ್ಲಿ ತೆಗೆಯಬೇಕು, ತೆಗೆಯಬಾರದು ಎನ್ನುವುದು ರೂಲಿಂಗ್‌ನಲ್ಲಿ ತಮಗೆ ಬಿಟ್ಟ ವಿಷಯ. ಈಗ ರೂಲಿಂಗ್ ಕೊಡುತ್ತೀರೋ ಆಮೇಲೆ ಕೊಡುತ್ತೀರೋ ತೀರ್ಮಾನ ಆಮೇಲೆ ಮಾಡಿ.

**ಉಪ ಸಭಾಪತಿಯವರು:–** ನಾನು ರೂಲಿಂಗ್‌ನ್ನು ನಂತರ ಕೊಡುತ್ತೇನೆಂದು ಹೇಳಿದ್ದೇನೆ. ಈಗ ಯಾರಾದರೂ ಮಾತನಾಡಿ.

**ಶ್ರೀ ಬಸವರಾಜ ಹೊರಟ್ಟಿ:–** ಮಾನ್ಯ ಸಭಾಪತಿಯವರೇ, ಈಗ Point of Order ಅನ್ನು ಮಾನ್ಯ ಉಗ್ರಪ್ಪನವರು ಎತ್ತಿದ್ದಾರೆ. ಈಗ ನಿಮ್ಮ ಮುಂದೆ ಇರುವುದು Point of Order ಬಗ್ಗೆ ತೀರ್ಮಾನವನ್ನು ಈಗ ಕೊಡುತ್ತೀರೋ ಆಮೇಲೆ ಕೊಡುತ್ತೀರೋ ಎಂದು ಹೇಳಿದರೆ ಮುಗಿದು ಹೋಯಿತು. ಉಳಿದವರು ಮಾತನಾಡುವ ಅವಶ್ಯಕತೆ ಇಲ್ಲ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರು ಏನು Point of Order ಎತ್ತಿದ್ದಾರೆ ಅದಕ್ಕೆ ನಂತರ ರೂಲಿಂಗ್ ಕೊಡುತ್ತೇನೆಂದು ನಾನು ಆಗಲೇ ಹೇಳಿದ್ದೇನೆ.

**ಶ್ರೀ ಬಸವರಾಜ ಹೊರಟ್ಟಿ:–** ಸರಿ ಆಯಿತು, ಅದು ಮುಗಿದು ಹೋಯಿತು. ಮತ್ತೇಕೆ ಮಾತನಾಡಬೇಕು? ಮತ್ತೆ ಮಾತನಾಡುವುದು ಅಥವಾ ಇನ್ನೊಬ್ಬರು ಅದರ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೇ, ತಾವೀಗ ಏನು ರೂಲಿಂಗ್‌ನ್ನು reserve ಮಾಡುತ್ತಿದ್ದೀರಿ, ಈಗಾಗಲೇ ಕಡತಕ್ಕೆ ಅವರ ಮೇಲೆ ಅನೇಕ defamatory ಹೇಳಿಕೆಗಳು ಹೋಗಿದ್ದಾವೆ. ತಮ್ಮ ರೂಲಿಂಗ್‌ನ ಅವಶ್ಯಕತೆ ಈಗ ಏಕೆ ಇದೆ ಎಂದರೆ ಮಾತನಾಡತಕ್ಕಂಥವರು ಈ ರೀತಿ repeat ಆದರೆ ಸದನಕ್ಕೆ ಮತ್ತು ಸದಸ್ಯರ ಹಕ್ಕಿಗೆ ಧಕ್ಕೆಯಾಗುತ್ತದೆ. ದಯಮಾಡಿ ತಾವು ಆದೇಶವನ್ನು ಕೊಡತಕ್ಕಂಥಾದ್ದು ಸೂಕ್ತವೆಂದು ನಾನು ವಿನಂತಿಸುತ್ತೇನೆ. ಮಾನ್ಯ ಬಸವರಾಜ ಹೊರಟ್ಟಿಯವರು ಸುಮಾರು 30 ರಿಂದ 35 ವರ್ಷಗಳ ಕಾಲ ಈ ಸದನದ ಸದಸ್ಯರಾಗಿದ್ದಾರೆ. ಮಾನ್ಯ ಹೊರಟ್ಟಿಯವರು ಈ ಸದನದ ಹಿರಿಯ ಸದಸ್ಯರು. ಇದಕ್ಕೆ ಅವಕಾಶವನ್ನು ನೀಡಿದರೆ ಇದೇ ರೀತಿ ಪದಬಳಕೆ ಆಗತಕ್ಕಂಥಾದ್ದೇನಿದೆ, defamatory ಹೇಳಿಕೆಗಳು ಬರುತ್ತದೆ.

**ಉಪ ಸಭಾಪತಿಯವರು:–** ಮಾನ್ಯ ಉಗ್ರಪ್ಪನವರೆ, ಮೊದಲೇ ತಿಳಿಸಿದ್ದೀರಿ ಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಆಯಿತು.

**ಶ್ರೀ ಆರ್.ಕೆ. ಸಿದ್ದರಾಮಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ):–** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು ನಿಯಮ 307ನ್ನು ಪ್ರಸ್ತಾಪ ಮಾಡಿ ಒಂದು ವಿಧಿ ಬಿಂದುವನ್ನು ಸದನದ ಗಮನಕ್ಕೆ ತಂದಿದ್ದಾರೆ.

"ವಿಧಾನ ಪರಿಷತ್ತಿನ ಕಾರ್ಯವಿಧಾನ ಮತ್ತು ನಡವಳಿಕೆ ನಿಯಮ 307: **ಒಬ್ಬ ವ್ಯಕ್ತಿಯನ್ನು ಕುರಿತ ಆಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ:–** ಸದಸ್ಯರು ಸಭಾಪತಿಯವರಿಗೆ ಮತ್ತು ಸಂಬಂಧಪಟ್ಟಂಥ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾರೇ ವ್ಯಕ್ತಿಯ ವಿರುದ್ಧ ಅಪಮಾನಕರವಾದ ಅಥವಾ ಅಪರಾಧದ ಸ್ವರೂಪದ ಯಾವ ಆರೋಪವನ್ನು ಮಾಡತಕ್ಕದ್ದಲ್ಲ."

ಎಂದು ಪ್ರಸ್ತಾಪವಾಗಿದೆ ಮತ್ತು ಅದಕ್ಕೆ ಒಂದು provision ಸಹ ಕೊಟ್ಟಿದೆ.

"ಪರಂತು, ಸಭಾಪತಿಯವರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ರಕ್ಷಣೆಯಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂತಹ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು" ಎಂದಿದೆ. ಇದು ನಿಯಮ 307 ರಲ್ಲಿ ಪ್ರಸ್ತಾಪವಾಗಿದೆ. ಇಲ್ಲಿ ಪ್ರಸ್ತಾಪವಾಗತಕ್ಕಂಥ ವಿಷಯವೇನಿದೆ, ಇದು ಸಾರ್ವಜನಿಕವಾಗಿ ಅತ್ಯಂತ ಮಹತ್ವವಾದ

ವಿಷಯವಾಗಿದೆ. ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಪ್ರಸ್ತಾಪವಾಗುವಂಥಾದ್ದಿದೆ. ಅಲ್ಲಿರತಕ್ಕಂಥ ಜೀವ ರಕ್ಷಣೆಯ ವಿಚಾರವಿದೆ. ಹಾಗಾಗಿ ನನಗೆ ಮಾತನಾಡಲು ಅವಕಾಶವನ್ನು ಕೊಡಿ.

**ಶ್ರೀ ಕೆ. ಅಭಯಚಂದ್ರ:–** ಅದಕ್ಕೆ ಯಾರ ಮೇಲಾದರೂ ಆಪಾದನೆಯನ್ನು ಮಾಡಬಹುದೇ?

**ಶ್ರೀ ಆರ್.ಕೆ.ಸಿದ್ದರಾಮಣ್ಣ:–** ಮಾನ್ಯ ಸಭಾಪತಿಯವರೇ, ಇಲ್ಲಿ ಪ್ರಸ್ತಾಪವಾಗಿರುವ ವಿಷಯ ಸಾಮಾನ್ಯವಾದುದಲ್ಲ. ಇಲ್ಲಿ ಪ್ರಸ್ತಾಪವಾಗಿರುವುದು ವ್ಯಕ್ತಿಯ ಮೂಲಭೂತ ಸ್ವಾತಂತ್ರದ ಬಗ್ಗೆ. ಆ ಪ್ರದೇಶದಲ್ಲಿರತಕ್ಕಂಥವರ ಸ್ವಾತಂತ್ರ್ಯದ ಬಗ್ಗೆ ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಏನಿದೆ ಎಂಬುದನ್ನು ಸದನದ ಗಮನಕ್ಕೆ ತಂದಿದ್ದೇನೆ.

**(ಗೊಂದಲ)**

**ಉಪ ಸಭಾಪತಿಯವರು:–** ಗೃಹ ಸಚಿವರು ಮಾತನಾಡುತ್ತಾರೆ. ಎಲ್ಲರೂ ಕುಳಿತುಕೊಳ್ಳಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಒಂದು ನಿಮಿಷ.

**ಡಾ॥ ಮತ್ತಿಕಟ್ಟಿ ವೀರಣ್ಣ:–** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ಡಾ॥ ಮತ್ತಿಕಟ್ಟಿ ವೀರಣ್ಣನವರೆ, ಒಂದು ನಿಮಿಷ. ನೋಡಿ, ಶ್ರೀಯುತ ಉಗ್ರಪ್ಪನವರು ಒಂದು Point of Order ಎತ್ತಿದ್ದಾರೆ. ವಿರೋಧ ಪಕ್ಷದ ನಾಯಕರುಮಂತ್ರಿಗಳ ಮೇಲೆ ನೇರವಾದ ಆರೋಪ ಮಾಡಿದ್ದು, ಅದು ಕಡತಕ್ಕೆ ಹೋಗಿದೆ. ಅದರಿಂದ ಅವರಿಗೆ ಚಾರಿತ್ರ್ಯ ವಧೆ ಆಗಿದ್ದು, ಅದನ್ನು ಕಡತದಿಂದ ತೆಗೆಯಬೇಕೆಂದು ನಿಯಮ 307 ರಲ್ಲಿ ಶ್ರೀಯುತ ಉಗ್ರಪ್ಪನವರು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ರೂಲಿಂಗ್ ನಂತರ ಕೊಡುತ್ತೇನೆಂದು ಹೇಳಿದ್ದೇನೆ. ಈಗ ಸರ್ಕಾರದಿಂದ ಗೃಹ ಮಂತ್ರಿಗಳು ಉತ್ತರವನ್ನು ಕೊಡಲಿ.

**ಶ್ರೀ ವಿ.ಎಸ್.ಉಗ್ರಪ್ಪ:–** ಮಾನ್ಯ ಸಭಾಪತಿಯವರೆ,

**(ಗೊಂದಲ)**

**ಶ್ರೀ ಕೋಟ ಶ್ರೀನಿವಾಸ ಪೂಜಾರಿ:–** ಮಾನ್ಯ ಸಭಾಪತಿಯವರೆ,

**ಶ್ರೀ ಬಿ.ಜೆ.ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ,

**ಉಪ ಸಭಾಪತಿಯವರು:–** ದಯಮಾಡಿ ಕುಳಿತುಕೊಳ್ಳಿ. ಮಾನ್ಯ ಗೃಹ ಸಚಿವರು ಸರ್ಕಾರದ ವತಿಯಿಂದ ಉತ್ತರವನ್ನು ಕೊಡುತ್ತಾರೆ. ಶ್ರೀಯುತ ಪುಟ್ಟಸ್ವಾಮಿಯವರೆ, ಶ್ರೀಯುತ ಶ್ರೀನಿವಾಸ ಪೂಜಾರಿ ಅವರೆ, ದಯವಿಟ್ಟು ಕುಳಿತುಕೊಳ್ಳಿ. ಗೃಹ ಸಚಿವರು ಮಾತನಾಡಬೇಕು.

**ಶ್ರೀ ಆರ್.ವಿ. ವೆಂಕಟೇಶ್ (ಸರ್ಕಾರಿ ಮುಖ್ಯ ಸಚೇತಕರು):–** ಮಾನ್ಯ ಸಭಾಪತಿಯವರೆ, ಒಂದೇ ಪಕ್ಷಕ್ಕೆ ಹೆಚ್ಚು ಸಮಯವನ್ನು ಕೊಡುತ್ತಿದ್ದೀರಿ ಎಂದು ತಮ್ಮಲ್ಲಿ ಈಗಾಗಲೇ ವಿನಂತಿ ಮಾಡಿಕೊಂಡಿದ್ದೇನೆ. ನಮ್ಮ ಕಡೆಯಿಂದಲೂ ಮಾತನಾಡುವವರಿದ್ದಾರೆಂದು ತಮ್ಮಲ್ಲಿ ಎರಡು ಬಾರಿ ಮನವಿ ಮಾಡಿಕೊಂಡಿದ್ದೇನೆ. ಆ ಕಡೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟು ನಮ್ಮನ್ನು ಮಾತನಾಡಬೇಡಿ ಎಂದರೆ ಇದು ಯಾವ ನ್ಯಾಯ?

**ಉಪ ಸಭಾಪತಿಯವರು:–** ಮಾತನಾಡಲಿಕ್ಕೆ ಯಾರೇ ಕೈ ಎತ್ತಿದ್ದರೂ ಸಹ ನಾನು ಅವರಿಗೆ ಮಾತನಾಡಲಿಕ್ಕೆ ಅವಕಾಶವನ್ನು ಕೊಡುತ್ತಿದ್ದೆ. ಯಾರೂ ಮಾತನಾಡಲಿಕ್ಕೆ ಕೈ ಎತ್ತಿರುವುದಿಲ್ಲ. ನೀವು ಯಾರೂ ಚೀಟಿಯನ್ನು ಸಹ ಕೊಟ್ಟಿಲ್ಲ. ಕೊಟ್ಟಿದ್ದರೆ ನಾನು ಖಂಡಿತವಾಗಿಯೂ ಅವಕಾಶ ಕೊಡುತ್ತಿದ್ದೆ. ಮಾತನಾಡುತ್ತೇನೆಂದು ಕೇಳಿದ್ದರೆ, ನಾನು ಅವಕಾಶ ಮಾಡಿಕೊಡುತ್ತಿದ್ದೆ.

**ಶ್ರೀ ಆರ್.ವಿ. ವೆಂಕಟೇಶ್ :–** ನಮ್ಮ ಕಡೆಯಿಂದ ಮಾತನಾಡುವವರಿದ್ದಾರೆಂದು ತಮಗೆ ಹೇಳಿದ್ದೆ. 5 ಗಂಟೆ 45 ನಿಮಿಷಗಳ ತನಕ ಅವರಿಗೆ ಮಾತನಾಡಲಿಕ್ಕೆ ಬಿಟ್ಟಿದ್ದೀರಿ.

**ಉಪ ಸಭಾಪತಿಯವರು:–** ಶ್ರೀಯುತ ಉಗ್ರಪ್ಪನವರೆ, ತಾವು 5 ನಿಮಿಷದಲ್ಲಿ ಮಾತನಾಡಿ ಮುಗಿಸಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ನನಗೆ 1 ಒಂದು ನಿಮಿಷ ಅವಕಾಶ ಕೊಡಿ ಎಂದರೆ ತಾವು ಕೊಡುತ್ತಿಲ್ಲವಲ್ಲ.

**ಉಪ ಸಭಾಪತಿಯವರು:–** ತಾವು 2 ಗಂಟೆಗಳ ಕಾಲ ಮಾತನಾಡಿದ್ದೀರಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ನಾನು ಒಬ್ಬ ಸದಸ್ಯನಲ್ಲವೇ. ನನಗೆ ಒಂದು ನಿಮಿಷ ಮಾತನಾಡಲಿಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

**ಉಪ ಸಭಾಪತಿಯವರು:–** ತಾವು 2 ಗಂಟೆಗಳ ಕಾಲ ಮಾತನಾಡಿದ್ದೀರಿ. ಈಗ ಶ್ರೀಯುತ ಉಗ್ರಪ್ಪನವರು ಮಾತನಾಡಲಿ ಬಿಡಿ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಶ್ರೀಯುತ ಉಗ್ರಪ್ಪನವರು ಮಾತನಾಡಿರುವ ವಿಷಯದ ಮೇಲೆ ನಾನು ಮಾತನಾಡಬೇಕು.

**ಉಪ ಸಭಾಪತಿಯವರು:–** ನಾನೀಗ ಶ್ರೀಯುತ ಉಗ್ರಪ್ಪನವರನ್ನು ಮಾತನಾಡಲಿಕ್ಕೆ ಕರೆದಿದ್ದೇನೆ. ಎಲ್ಲರೂ ಮಾತನಾಡಲಿಕ್ಕೆ ಏತಕ್ಕೆ ಎದ್ದು ನಿಲ್ಲುತ್ತೀರಿ?

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಸಂವಿಧಾನದ Article 21 of the Constitution of India. ಇದೆಲ್ಲಾ ಶ್ರೀಯುತ ರಾಮಕೃಷ್ಣ ಅವರಿಗೆ ಸ್ವಲ್ಪ ಅರ್ಥವಾಗುವುದಿಲ್ಲ.

**ಉಪ ಸಭಾಪತಿಯವರು:–** ನನ್ನನ್ನು ನೋಡಿಕೊಂಡು ತಾವು ಮಾತನಾಡಬೇಕು.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ,

**ಶ್ರೀ ಬಸವರಾಜ ಹೊರಟ್ಟಿ:** ಮಾನ್ಯ ಸಭಾಪತಿಯವರೆ, ನನ್ನದೊಂದು ಪ್ರಶ್ನೆ. ಈಗ ನಿಲುವಳಿ ಸೂಚನೆಯನ್ನು ತಂದವರು ಇಲ್ಲಿದ್ದಾರೆ. ನಿಲುವಳಿ ಸೂಚನೆ ಮೇಲೆ ಅವರಿಗೆ ಮಾತನಾಡಲಿಕ್ಕೆ ಅಧಿಕಾರ ಇದೆಯೇ ಎನ್ನುವುದನ್ನು ತಿಳಿಸಬೇಕು.

**ಉಪ ಸಭಾಪತಿಯವರು:–** ಶ್ರೀಯುತ ಉಗ್ರಪ್ಪನವರು 5 ನಿಮಿಷ ಮಾತನಾಡುತ್ತೇನೆಂದು ಹೇಳಿದ್ದಾರೆ.

**ಶ್ರೀ ವಿ.ಎಸ್. ಉಗ್ರಪ್ಪ:–** ಇದು ನಿಲುವಳಿ ಸೂಚನೆಯಲ್ಲ. ಇದನ್ನು ನಿಯಮ 68ಕ್ಕೆ convert ಮಾಡಲಾಗಿದೆ.

**ಶ್ರೀ ಎಸ್.ಆರ್. ಪಾಟೀಲ್:–** ನಿಯಮ 68 ರಡಿಯಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಾಗ ಬಹಳಷ್ಟು ಸಂದರ್ಭಗಳಲ್ಲಿ ಈ ಕಡೆಯವರು ಮತ್ತು ಆ ಕಡೆಯವರು ಮಾತನಾಡಿದಂತಹ ಇತಿಹಾಸ ಇದೆ. ಇದಕ್ಕೆ ಸಭಾಪತಿಯವರು ಅವಕಾಶ ಮಾಡಿಕೊಟ್ಟಿದ್ದಾರೆ.

**(ಗೊಂದಲ)**

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರನ್ನು ಈ ವಿಷಯವಾಗಿ ನಾವು ಮಾತನಾಡಬಹುದೇ ಎಂದು ಕೇಳಿದಾಗ ಅವರು ಮಾತನಾಡಬಹುದು ಎಂದು ಹೇಳಿದ ಮೇಲೆ ಮಾತನಾಡುತ್ತಿರುವುದಾಗಿದೆ. ಸಭಾಪತಿಯವರಿಂದ ಈ ಬಗ್ಗೆ ಸ್ಪಷ್ಟೀಕರಣ ಕೇಳಿದ ಮೇಲೆ ನಾವು ಮಾತನಾಡುತ್ತಿರುವುದು.

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರು ಅವಕಾಶ ಮಾಡಿದ ಮೇಲೆ ಮತ್ತೆ ಏನಿದೆ?

**ಶ್ರೀ ಬಸವರಾಜ ಹೊರಟ್ಟಿ:–** ಈಗ Point of Order ವಿಷಯ ಮುಗಿಯಿತು. ಮುಂದೆ ಅವರಿಗೆ ಮಾತನಾಡಲಿಕ್ಕೆ ಕೊಟ್ಟಿರುವುದು ಯಾವ ವಿಷಯದ ಮೇಲೆ?

**ಉಪ ಸಭಾಪತಿಯವರು:–** ಇದು Point of Order ಮೇಲೆ ಅಲ್ಲ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಮಾನ್ಯ ಸಭಾಪತಿಯವರೆ, ನಾನು ಒಂದು ನಿಮಿಷ ಮಾತನಾಡಬೇಕು.

**ಉಪ ಸಭಾಪತಿಯವರು:–** ತಾವು ಮಾತನಾಡುವುದಾದರೆ, ಒಂದೇ ನಿಮಿಷದಲ್ಲಿ ಮಾತನಾಡಬೇಕು.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಈಗ ನಾನು ಒಂದೇ ವಿಚಾರವನ್ನು ಹೇಳಲಿಕ್ಕೆ ಬಯಸುತ್ತೇನೆ. ಈಗ ನಮ್ಮ ನಾಯಕರು ಮಾತನಾಡಿರುವಂತಹದ್ದು ಪತ್ರಿಕೆ ಆಧಾರದ ಮೇಲೆ ಮಾತನಾಡಿದ್ದಾರೆ. FIR ನಲ್ಲಿ ಮಿನಿಸ್ಟರ್ ಹೆಸರಿಲ್ಲವೆಂದು ಹೇಳಿದ್ದಾರೆ, ಅದನ್ನು ನಾವು ಒಪ್ಪಿಕೊಳ್ಳೋಣ. ಅವರ ಹೆಸರಿಲ್ಲದ ಮೇಲೆ ಪತ್ರಿಕೆ ಮೇಲೆ defamation case ಹಾಕಿದ್ದಾರಾ?

**ಶ್ರೀ ವಿ.ಎಸ್. ಉಗ್ರಪ್ಪ:–**ಒಂದು ನಿಮಿಷ. ನಾನು ಮಾತನಾಡುತ್ತಿದ್ದು, ನಾನು yield ಆಗಿಲ್ಲ.

**ಶ್ರೀ ಬಿ.ಜೆ. ಪುಟ್ಟಸ್ವಾಮಿ:–** ಇವರು ಪತ್ರಿಕೆ ಮೇಲೆ ಏನು ಕ್ರಮ ತೆಗೆದುಕೊಂಡಿದ್ದಾರೆ? He has accepted. ಅದನ್ನು ಅವರು ಹೇಳಿದ್ದಾರೆ. ಇದರಲ್ಲಿ ತಪ್ಪು ಏನಿದೆ? ಯಾವ defamation ಇದೆ ಇದರಲ್ಲಿ? Defamation ಇದ್ದರೆ, ಹಾಕಬೇಕಾಗಿತ್ತು.

**ಉಪ ಸಭಾಪತಿಯವರು:** ದಯವಿಟ್ಟು ಕುಳಿತುಕೊಳ್ಳಿ. ಶ್ರೀಯುತ ಉಗ್ರಪ್ಪನವರೆ, ದಯವಿಟ್ಟು ತಾವು 5 ನಿಮಿಷದ ಮೇಲೆ ಹೆಚ್ಚು ಸಮಯ ತೆಗೆದುಕೊಳ್ಳಬೇಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಯಾವುದೇ ವ್ಯಕ್ತಿಯ ಸಾವು ಅಸಹಜವಾಗಿ ಆಗಬಾರದು. ಆ ಅಸಹಜ ಸಾವಿಗೆ ಯಾರೇ ಕಾರಣರಾಗಿದ್ದರೂ ಅವರ ಮೇಲೆ ಕ್ರಮ ಜರುಗಿಸುವಂತಹದ್ದು ಸರ್ಕಾರದ ಕರ್ತವ್ಯ ಇದೆ ಎಂದು ಹೇಳಿ, ನಾನು ಒಬ್ಬ ಕಾನೂನಿನ ವಿದ್ಯಾರ್ಥಿಯಾಗಿ ಅರ್ಥ ಮಾಡಿಕೊಳ್ಳಬಲ್ಲೆ. ಆದರೆ, ಇವತ್ತಿನ ಕೇಸಿನ ವಿಚಾರದಲ್ಲಿ ನಾವು ಗಮನಹರಿಸಬೇಕಾದುದು ಏನೆಂದರೆ ಈ ಯಲ್ಲಾಲಿಂಗ ಎನ್ನುವಂತಹ ಯಾರು ಯುವಕ ಇದ್ದಾರೆ,

ಯಲ್ಲಾಲಿಂಗರವರ ಅಸಹಜ ಸಾವನ್ನು ಹೊಂದತಕ್ಕಂತಹ ಸುಮಾರು 4–5 ದಿವಸಗಳ ಹಿಂದೆ ಅವರು ಅವರ ಗ್ರಾಮ ಪಂಚಾಯಿತಿಯ ಮೇಲೆ ಕೆಲವು allegations ಗಳನ್ನು ಮಾಧ್ಯಮಗಳಲ್ಲಿ ಹಾಕಿದ್ದಾರೆ. ಗ್ರಾಮ ಪಂಚಾಯಿತಿಯ ಮೇಲೆ ಹಾಕಿರುವಂತಹ allegations ಗಳ ವಿಚಾರವಾಗಿ ನಾನು ಹೆಚ್ಚು ವಿಸ್ತಾರ ಮಾಡಲಿಕ್ಕೆ ಹೋಗುವುದಿಲ್ಲ. ಅವರ ಮೃತದೇಹ ರೈಲ್ವೇ ಸ್ಟೇಷನ್‌ನಲ್ಲಿ ಲಭ್ಯವಾದಂತಹ ದಿನ ಅಂದರೆ ದಿನಾಂಕ: 11ನೇ ಜನವರಿ, 2015 ರಂದು ರೈಲ್ವೇ ಪೊಲೀಸ್‌ನವರು ಕೇಸ್ ನೋಂದಣಿ ಮಾಡಿಕೊಂಡಿದ್ದಾರೆ. ಆ ಕೇಸ್ ನೋಂದಣಿ ಮಾಡಿಕೊಂಡ ಮೇಲೆ 1 ತಿಂಗಳು 10 ದಿವಸಗಳ ನಂತರ, I think somewhere on 18ನೇ ಫೆಬ್ರವರಿ, 2015 ರಂದು ಪೊಲೀಸ್‌ಆಕ್ಟ್ ಪ್ರಕಾರ ಈ ಕೇಸ್ ಅನ್ನು regular ಪೊಲೀಸರಿಗೆ ವರ್ಗಾವಣೆ ಮಾಡಿದ್ದಾರೆ. ಈ ಮಧ್ಯೆ ವರ್ಗಾವಣೆ ಮಾಡಿರತಕ್ಕಂತಹ ಹಿನ್ನೆಲೆಯಲ್ಲಿ First Information Report. Rather the first statement made by the diseased sister. ಆ diseased sister ಅವರ FIR ಅಥವಾ statement ಏನಿದೆ, ಆ statement ನಲ್ಲಿ ಯಾರ್‍ಯಾರ ಹೆಸರುಗಳನ್ನು ಹೇಳಿದ್ದಾರೆ, ಅದರಲ್ಲಿ ಸುಮಾರು 9 ಜನರ ಹೆಸರುಗಳನ್ನು ಅದರಲ್ಲಿ ಪ್ರಸ್ತಾಪ ಮಾಡಿದ್ದಾರೆ. ಅದರ ಪೈಕಿ ನಂದಕುಮಾರ ಮತ್ತು ಯಮನೂರಪ್ಪ ಅವರು ಶರಣಾಗಿದ್ದಾರೆ, ಮಿಕ್ಕ ಎಲ್ಲರನ್ನೂ ದಸ್ತಗಿರಿ ಮಾಡಿದ್ದಾರೆ. ಮತ್ತೆ, ಯಾರು ಶರಣಾದವರ anticipatory bail application under Section 438 of the Criminal Procedure Code ಅದರಲ್ಲಿ ರಾಜ್ಯ ಸರ್ಕಾರ ಯಾವುದೇ ಸಂದರ್ಭದಲ್ಲಿ prosecutor ಬೇಲ್‌ಗೆ ಅವಕಾಶ ಕೊಡದೇ ಬೇಲ್ application reject ಮಾಡಿಸಿದ್ದಾರೆ. ಇದು ಮೊದಲನೆಯ stage. ಇನ್ನು ಎರಡನೆಯ stage, ಯಾರ್‍ಯಾರ ಅಪರಾಧಿಗಳ ಹೆಸರು ಪ್ರಸ್ತಾಪ ಆಗಿದೆ, ಅವರೆಲ್ಲರನ್ನೂ ಅರೆಸ್ಟ್ ಮಾಡಿದ್ದಾರೆ. ತನಿಖೆಯನ್ನು ಪೂರ್ಣಗೊಳಿಸುವಂತಹ ಅಂತಿಮಘಟ್ಟದ ಹಂತದಲ್ಲಿ ಇವತ್ತು ಇದೆ. ಈ ಮೊದಲ FIR ನಲ್ಲಿ ಆಗಲಿ, ಅಥವಾ ಯಾರೇ ಹೇಳಿಕೆಗಳನ್ನು ಕೊಟ್ಟಿರುವಂತಹದ್ದರಲ್ಲಿ ಆಗಲಿ, ಮಂತ್ರಿಗಳ ಮೇಲೆ ಯಾವುದೇ ಚಕಾರ ಎತ್ತಿರುವಂತಹದ್ದು ಇಲ್ಲ. ಈಗ ನನ್ನ ಸನ್ಮಿತ್ರರು ಏನು ಹೇಳುತ್ತಿದ್ದಾರೆಂದರೆ ಸ್ಟೇಟ್ ಪೊಲೀಸ್ ಸರಿಯಿಲ್ಲವೆಂದು, ಇದನ್ನು ಸಿಬಿಐ.ಗೆ ಕೊಡಬೇಕೆಂದು ಅವರು ಹೇಳುತ್ತಿದ್ದಾರೆ. ಸ್ಟೇಟ್ ಪೊಲೀಸ್‌ನವರ ಯಾವ ಕರ್ತವ್ಯಗಳಲ್ಲಿ ಇವತ್ತು ಯಾವುದು ಲೋಪವಾಗಿದೆ ಎಂದು ದಯವಿಟ್ಟು ಹೇಳಬೇಕು. ಸ್ಟೇಟ್ ಪೊಲೀಸ್ ಇರತಕ್ಕಂತಹವರು ಸಂಬಂಧಪಟ್ಟ FIR ನಲ್ಲಿ ಅವರ ಸಹೋದರಿ ಯಾರ್‍ಯಾರ ಮೇಲೆ ಆರೋಪ ಮಾಡಿ ಹೇಳಿದ್ದಾರೆ, ಅವರೆಲ್ಲರನ್ನೂ ದಸ್ತಗಿರಿ ಮಾಡಿದ್ದಾರೆ. ದಸ್ತಗಿರಿ ಮಾಡಿ ಜೈಲಿಗೆ ಕಳುಹಿಸಿದ್ದಾರೆ. ಅವರ ಬೇಲ್ reject ಮಾಡಿಸಿದ್ದಾರೆ. ಆ ಸಂಬಂಧ charge sheet ಹಾಕುತ್ತಿದ್ದಾರೆ. ಇದರಲ್ಲಿ ಲೋಪ ಏನಾಗಿದೆ. 24 ಗಂಟೆಯೊಳಗೆ ಮ್ಯಾಜಿಸ್ಟ್ರೇಟ್ ಕೋರ್ಟ್‌ನಿಂದ

ಸೆಷನ್ಸ್‌ಕೋರ್ಟ್‌ಗೆ commit ಮಾಡಿಸಿ trial ಮುಗಿಸಿ, ಅವರನ್ನು ಜೈಲಿಗೆ ಹಾಕಲಿಕ್ಕೆ ಸಾಧ್ಯತೆ ಇದೆಯೇ? ಇದರಲ್ಲಿ ಸಾಧ್ಯತೆ ಇಲ್ಲ. ಈ ಕೇಸ್ ಅನ್ನು ಸಿಬಿಐ.ಗೆ ಕೊಡಬೇಕೆಂದು ನನ್ನ ಸನ್ಮಿತ್ರರಾದ ಶ್ರೀಯುತ ಈಶ್ವರಪ್ಪನವರು ಹೇಳಿದರು. ಅವರು ಈಗ ಸದನದಿಂದ ಹೊರಗಡೆ ಹೋಗಿದ್ದಾರೆ. ನಾನು ವಿರೋಧ ಪಕ್ಷದ ನಾಯಕನಾಗಿದ್ದಂತಹ ಸಂದರ್ಭದಲ್ಲಿ ಆ ಉಡುಪಿಯ ಪದ್ಮಪ್ರಿಯ ಪ್ರಕರಣದಲ್ಲಿ ಬಹಳವಾಗಿ ಒತ್ತಾಯ ಮಾಡಿದೆವು. ಅಲ್ಲಾ ರೀ, ಉಡುಪಿಯಿಂದ ಬೆಂಗಳೂರಿಗೆ ಬಂದು, ಬೆಂಗಳೂರಿನಿಂದ ದೆಹಲಿಗೆ ಹೋಗಿ, ಅಲ್ಲಿ ಅವರ ಅಸಹಜ ಸಾವು ಆಗಿದೆ, interstate ramification ಇದೆ, ಸಿಬಿಐ.ಗೆ ಕೊಡಬೇಕೆಂದು ಒತ್ತಾಯ ಮಾಡಿದಾಗ ಈ ಜನ ಅಂದರೆ ವಿರೋಧ ಪಕ್ಷದಲ್ಲಿರುವಂತಹ ಜನರು ಸಿಬಿಐ.ಗೆ ಬೇಡ, ನಮ್ಮ ರಾಜ್ಯ ಪೊಲೀಸರು competent ಇದ್ದಾರೆ, ಅವರ ಕಡೆಯಿಂದ ತನಿಖೆ ಮಾಡಿಸುತ್ತೇವೆಂದು ಹೇಳಿದ್ದರು. ಈಗ ಇವರು ಏನು ಮಾಡುತ್ತಿದ್ದಾರೆ, ಇದನ್ನು ರಾಜಕೀಯ ಕಾರಣಗಳಿಗೋಸ್ಕರ ಮಾಡಲಿಕ್ಕೆ ಹೊರಟಿದ್ದಾರೆ. ಇವತ್ತು ಯಾವ ಮಂತ್ರಿಗಳ ಮೇಲೆ ಇವರು charge ಮಾಡುತ್ತಿದ್ದಾರೆ, ಅವರು 5 ವರ್ಷಗಳ ಕಾಲ ಅವರ ಸರ್ಕಾರದಲ್ಲಿ ಮಂತ್ರಿಗಳಾಗಿದ್ದರು ಎರಡು ವರ್ಷಗಳ ಕಾಲ ಅವರ ಅವರ ಪಕ್ಷದಲ್ಲಿ ಸದಸ್ಯರಾಗಿ ಇದ್ದರು. ಉಸ್ತುವಾರಿ ಸಚಿವರಾಗಿದ್ದರು. ಆಗ ಈ ಮಂತ್ರಿಯವರು ಬಹಳ ಒಳ್ಳೆಯವರಾಗಿ ಕಾಣುತ್ತಿದ್ದರು. ಏಕೆಂದರೆ ಅವರು ಇಲ್ಲದಿದ್ದರೆ ನಿಮ್ಮ ಸರ್ಕಾರವೇ ಇರುತ್ತಿರಲಿಲ್ಲ.

(ಗೊಂದಲ)

**ಶ್ರೀ ಪಿ.ಟಿ. ಪರಮೇಶ್ವರ ನಾಯಕ್:-** ಸತ್ಯ ಹೇಳಿದರೆ ಅದನ್ನು ತಡೆದುಕೊಳ್ಳುವುದಕ್ಕಾಗುವುದಿಲ್ಲವೇ ನಿಮಗೆ, ಸತ್ಯ ಯಾವಾಗಲೂ ಕೂಡ ಕಹಿಯಾಗಿರುತ್ತದೆ.

(ಗೊಂದಲ)

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಹಲವು ಸದಸ್ಯರು ಒಮ್ಮೆಗೆ ಎದ್ದುನಿಂತು ಮಾತನಾಡ ತೊಡಗಿದರು)**

**ಶ್ರೀ ಎನ್.ಎಸ್. ಬೋಸರಾಜು:-** ಮಾನ್ಯ ಸಭಾಪತಿಯವರೆ, ಮಾನ್ಯ ಸದಸ್ಯರು. . . .

**ಉಪ ಸಭಾಪತಿಯವರು:-** ಮಾನ್ಯ ಬೋಸರಾಜು ಅವರೇ ನೀವು ಏಕೆ ಎದ್ದು ನಿಲ್ಲುತ್ತೀರಿ ನಿಮಗೆ ಏನಾಗಿದೆ. ಅವರು ಮಾತನಾಡುತ್ತಾರೆ ಬಿಡಿ.

**ಶ್ರೀ ವಿ.ಎಸ್. ಉಗ್ರಪ್ಪ:–** ಮಾನ್ಯ ಸಭಾಪತಿಯವರೆ, ಯಾವುದೇ angle ನಲ್ಲಿ ನೋಡಿದರೂ ಕೂಡ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಇದರಲ್ಲಿ abettor ಆಗುವುದಕ್ಕೆ ಸಾಧ್ಯತೆ ಇಲ್ಲ. ಲಲಿತ್ ಮೋದಿಗೆ abettor ಆಗಿರತಕ್ಕಂತಹವರ ಬಗ್ಗೆ ಯಾರೂ ಕೂಡ ಮಾತನಾಡುವುದೇ ಇಲ್ಲ. ಆ ಲಲಿತ ಮೋದಿಯವರು abettor ಆಗಿ ದೇಶಕ್ಕೆ ದ್ರೋಹ ಮಾಡಿದ್ದಾರೆ.

**(ಗೊಂದಲ)**

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಹಲವು ಸದಸ್ಯರು ಒಮ್ಮೆಗೆ ಎದ್ದುನಿಂತು ಮಾತನಾಡತೊಡಗಿದರು)**

**ಶ್ರೀ ವಿ.ಎಸ್. ಉಗ್ರಪ್ಪ:–** ಕೇಂದ್ರ ಸರ್ಕಾರದ ಒಬ್ಬ ಮಂತ್ರಿ ರೇಪ್ ಮಾಡಿ ಅವರ ಮೇಲೆ ಎಫ್.ಐ.ಆರ್. ಆಗಿದೆ. ಅವರ ಬಗ್ಗೆ ಇವರು ಮಾತನಾಡುವುದಿಲ್ಲ. ಇವರಿಗೆ ನಾಚಿಕೆಯಾಗುವುದಿಲ್ಲ. ಅವರ ಬಗ್ಗೆ ಇವರು ಮಾತನಾಡುವುದಿಲ್ಲ. ಇವರಿಗೆ ನಾಚಿಕೆಯಾಗುವುದಿಲ್ಲವೇ? ರೇಪ್ ಮಾಡಿದವರು ಕೇಂದ್ರ ಸರ್ಕಾರದ ಸಚಿವರಾಗಿದ್ದರು. ನಾನು ಇಷ್ಟೇ ಹೇಳಬಯಸುತ್ತೇನೆ.

**ಶ್ರೀ ಅರುಣ್ ಶಹಾಪುರ್ :–** ಮಾನ್ಯ ಸಭಾಪತಿಯವರೆ, ಮಾನ್ಯ ಉಗ್ರಪ್ಪನವರು . . . .

**ಉಪ ಸಭಾಪತಿಯವರು:–** ಅರುಣ್ ಶಹಾಪುರ್ ಅವರೇ ತಾವು ಕುಳಿತುಕೊಳ್ಳಿ.

**(ಈ ಹಂತದಲ್ಲಿ ಆಡಳಿತ ಪಕ್ಷ ಮತ್ತು ವಿರೋಧಪಕ್ಷದ ಹಲವು ಸದಸ್ಯರು ಒಮ್ಮೆಗೆ ಎದ್ದುನಿಂತು ಮಾತನಾಡ ತೊಡಗಿದರು)**

**ಶ್ರೀ ಐವನ್ ಡಿ'ಸೋಜಾ:–** ನೀವು ಇದರ ಬಗ್ಗೆ ಮಾತನಾಡಿ. ಶ್ರೀ ದಿಗ್ವಿಜಯ ಸಿಂಗ್. . . . .

**ಶ್ರೀ ವಿ.ಎಸ್. ಉಗ್ರಪ್ಪ:–** ಇವರು ಏನೇ ತಿಪ್ಪರಲಾಗ ಹಾಕಿದರೂ ಕೂಡ ಈ ಸರ್ಕಾರದ ಮೇಲೆ ಅಂದರೆ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀ ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರ ನೆಲದ ಕಾನೂನನ್ನು ಎತ್ತಿ ಹಿಡಿಯತಕ್ಕಂತಹ ಸರ್ಕಾರವಾಗಿದೆ. ಇದು ಬದ್ಧತೆ ಮತ್ತು ಪ್ರಾಮಾಣಿಕತೆಯಿಂದ ಮೆರೆಯುತ್ತಿದೆ. ಈ ರಾಜ್ಯದ ಪೊಲೀಸರು ಕಾನೂನು ರೀತ್ಯಾ ಕ್ರಮ ಜರುಗಿಸತಕ್ಕಂತಹ ಹಿನ್ನೆಲೆಯಲ್ಲಿ ಯಾವುದೇ ಕಾರಣಕ್ಕೂ ಈ ಪ್ರಕರಣದ ತನಿಖೆಯನ್ನು ಸಿ.ಬಿ.ಐ.ಗೆ ಒಪ್ಪಿಸುವುದರಲ್ಲಿ ಅರ್ಥವಿಲ್ಲ. ಈ ರಾಜ್ಯ ಸರ್ಕಾರದ ಪೊಲೀಸರು ಈ ಪ್ರಕರಣದ ತನಿಖೆಯನ್ನು ಮಾಡಿ ಯಾರು ತಪ್ಪಿತಸ್ಥರಿರುತ್ತಾರೆ ಅವರಿಗೆ ಶಿಕ್ಷೆಯನ್ನು ಕೊಡಿಸುವಲ್ಲಿ, ಸಿ.ಐ.ಡಿ. ಮೂಲಕ ತನಿಖೆಯನ್ನು ಮಾಡುವುದಕ್ಕೆ ಅವರು ಕಾಂಪಿಟೆಂಟ್ ಇದ್ದಾರೆ. ಅವರೇ ತನಿಖೆಯನ್ನು ಮಾಡಿ ತಪ್ಪಿತಸ್ಥರಿಗೆ ಶಿಕ್ಷೆಯನ್ನು ಕೊಡಿಸತಕ್ಕಂಥದ್ದಕ್ಕೆ

ಸರ್ಕಾರ ಬದ್ಧವಾಗಿದೆ ಏನು ಈ ಮೋಷನ್ ಅನ್ನು ವಿರೋಧ ಪಕ್ಷದವರು ಮೂವ್ ಮಾಡಿದ್ದಾರೆ ಇದನ್ನು ರಿಜೆಕ್ಟ್ ಮಾಡಬೇಕೆಂದು ನಾನು ತಮ್ಮ ಮೂಲಕ ಈ ಸರ್ಕಾರವನ್ನು ಒತ್ತಾಯಿಸುತ್ತೇನೆ.

**ಶ್ರೀ ಕೆ.ಜೆ. ಜಾರ್ಜ್ (ಗೃಹ ಸಚಿವರು):–** ಮಾನ್ಯ ಸಭಾಪತಿಯವರೆ, ಈ ವಿಚಾರದ ಬಗ್ಗೆ ಸುಮಾರು ಎರಡೂವರೆ ಗಂಟೆಗಳ ಕಾಲ ಹಲವಾರು ಸದಸ್ಯರುಗಳು ಮಾತನಾಡಿದ್ದಾರೆ. ನಮ್ಮ ಸರ್ಕಾರದ ಸಮೇತ ಈ ಒಂದು ಘಟನೆ ಏನು ನಡೆದಿದೆ ಈ ವಿಚಾರದಲ್ಲಿ ನಿಮ್ಮೊಟ್ಟಿಗೆ ನಾವೂ ಇದ್ದೇವೆ. ಯಾರು ತಪ್ಪಿತಸ್ಥರು ಇದ್ದಾರೆ ಅವರಿಗೆ ಶಿಕ್ಷೆ ಕೊಡಿಸುವುದಕ್ಕೆ ನಾವು ನಮ್ಮ ಮುಖ್ಯಮಂತ್ರಿಗಳು, ನಮ್ಮ ಸರ್ಕಾರದವರು, ನಮ್ಮ ಪಕ್ಷದ ಸಮೇತ ನಾವು ತಯಾರಾಗಿದ್ದೇವೆ. ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆಯಾಗುತ್ತದೆ. ಅದರಲ್ಲಿ ಯಾವುದೇ ಸಂಶಯವಿಲ್ಲ. ಈ ಪ್ರಕರಣ ದಿನಾಂಕ 11–01–2015 ರಲ್ಲಿ ನಡೆದಿದೆ. ರೈಲ್ವೆ ಹಳಿಗಳ ಮೇಲೆ ಮೃತದೇಹ ಸಿಗುತ್ತದೆ. ರೈಲ್ವೆ ಪೊಲೀಸರು ಅದನ್ನು ತನಿಖೆ ಮಾಡುತ್ತಾರೆ. ನಂ.ಯು.ಡಿ.ಆರ್. 174 ಸಿ.ಆರ್.ಪಿ.ಸಿ.ಯಲ್ಲಿ ಕೇಸ್ ಅನ್ನು ದಾಖಲು ಮಾಡುತ್ತಾರೆ. ಇದು ಒಂದು un-natural death ಎಂದು ಕನ್ಸಿಡರ್ ಮಾಡುತ್ತಾರೆ. ದಿನಾಂಕ 18–02–2015 ನಲ್ಲಿ ಈ ಯಲ್ಲಾಲಿಂಗ ಅವರ ಸಹೋದರಿ ಶ್ರೀಮತಿ ಮಂಜುಳಾ ಎಂಬುವವರು ಒಂದು ದೂರನ್ನು ರೈಲ್ವೆ ಪೊಲೀಸ್ ಸ್ಟೇಷನ್ನಿನಲ್ಲಿ ನೀಡಿದ್ದು, ಇದು ಅಸಹಜ ಸಾವು. ಸಹಜ ಸಾವು ಅಲ್ಲ. ನನ್ನ ತಮ್ಮ ಯಲ್ಲಾಲಿಂಗನು ಆತ್ಮಹತ್ಯೆ ಮಾಡಿಕೊಂಡಿಲ್ಲ ಅವರ ಕೊಲೆಯಾಗಿದೆ ಎಂದು ಹೇಳಿದ್ದಾರೆ. ಈ ದೂರಿನಲ್ಲಿ ಅವರು ಏನು ಹೇಳುತ್ತಾರೆಂದರೆ, ನಮಗೆ ಸಂಶಯವಿದೆ ಎಂದು ಹೇಳುತ್ತಾ, ಬಾಲನಗೌಡ, ಪರಶುರಾಮ್, ಹನುಮಯ್ಯ ನಾಯಕ್ ಇವರ ಬಗ್ಗೆ ದೂರನ್ನು ದಾಖಲು ಮಾಡಿದ್ದಾರೆ. ಬಹುಶಃ ಈ ಪ್ರಕರಣದಲ್ಲಿ ಇನಿಷಿಯಲ್ ಸ್ಟೇಜ್‌ನಲ್ಲಿ ಸ್ವಲ್ಪ ನಿಧಾನವಾಗಿ ಇನ್‌ವೆಸ್ಟಿಗೇಷನ್ ಆಗಿದೆ. ಅದಾದ ಮೇಲೆ ರೈಲ್ವೆ ಪೊಲೀಸಿನವರು ಇದನ್ನು ನಮ್ಮ ಕೈಯ್ಯಲ್ಲಿ ಇನ್‌ವೆಸ್ಟಿಗೇಷನ್ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಇದರ ತನಿಖೆಯನ್ನು ದೊಡ್ಡ ಪ್ರಮಾಣದಲ್ಲಿ ಮಾಡಬೇಕಾಗುತ್ತದೆ ಎಂದು ಡಿ.ಜಿ.ಪಿ. ಅವರಿಗೆ ಪತ್ರ ಬರೆದಿದ್ದಾರೆ. ಅಂದರೆ ಈ ಪ್ರಕರಣದ ತನಿಖೆಯನ್ನು ರೆಗ್ಯುಲರ್ ಪೊಲೀಸಿನವರಿಗೆ ಕೊಡಿ ಎಂದು ತಿಳಿಸಿದಾಗ, ಇದನ್ನು ದಿನಾಂಕ 10–04–2015 ರಂದುರೆಗ್ಯುಲರ್ ಪೊಲೀಸಿನವರಿಗೆ ವರ್ಗಾವಣೆ ಮಾಡಲಾಗಿದೆ. ಈ ಪ್ರಕರಣದ ತನಿಖೆ ಕೊಪ್ಪ ಶಹರ್ ಪೊಲೀಸ್ ಸ್ಟೇಷನ್ನಿಗೆ ವರ್ಗಾವಣೆಯಾಗಿದೆ. ಅದಾದ ಮೇಲೆ ರೆಗ್ಯುಲರ್ ಪೋಲೀಸಿನವರು ಈ 9 ಜನ ಏನು ಆರೋಪಿಗಳಿದ್ದಾರೆ ಅವರಲ್ಲಿ ಪರಶುರಾಮ ಅವರನ್ನು ದಿನಾಂಕ 16–05–2015 ರಲ್ಲಿ, ಬಾಲನಗೌಡ ಅವರನ್ನು ದಿನಾಂಕ 19–05–2015 ರಲ್ಲಿ, ಮಹಂತೇಶ ಅವರನ್ನು ದಿನಾಂಕ 14–05–2015 ರಲ್ಲಿ, ದುರ್ಗಪ್ಪ ಅವರನ್ನು ದಿನಾಂಕ 14–05–2015 ರಲ್ಲಿ ಮತ್ತು ಮನೋಜ್ ಪಾಟೀಲ್ ಅವರನ್ನು ದಿನಾಂಕ 14–05–2015 ರಲ್ಲಿ ಬಂಧನ ಮಾಡಿದ್ದಾರೆ. ನಂತರ ಇಬ್ಬರು ಆರೋಪಿಗಳು ತಪ್ಪಿಸಿಕೊಂಡಿರುತ್ತಾರೆ. ಸಾಕಷ್ಟು

ಸಂಘ ಸಂಸ್ಥೆಗಳು ಮತ್ತು ರಾಜಕೀಯ ಸಂಘ ಸಂಸ್ಥೆಗಳು ಇವೆಲ್ಲವೂ ಈ ವಿಚಾರದಲ್ಲಿ ಈ ಪ್ರಕರಣದ ತನಿಖೆಯನ್ನು ಸರಿಯಾಗಿ ಮಾಡಬೇಕೆಂಬ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಯವರು ನೇರವಾಗಿ ಈ ಪ್ರಕರಣದ ತನಿಖೆಯನ್ನು ಸಿ.ಐ.ಡಿ.ಗೆ ವಹಿಸುತ್ತಾರೆ. ದಿನಾಂಕ 19–06–2015 ರಲ್ಲಿ ಈ ಪ್ರಕರಣದ ತನಿಖೆಯನ್ನು ಸಿ.ಐ.ಡಿ.ಗೆ ವಹಿಸಿದ್ದಾರೆ. ಸಿ.ಐ.ಡಿ. ಗೆ ಕೊಟ್ಟ ಎರಡು ದಿವಸಗಳಲ್ಲಿ ಹನುಮೇಶ್ ನಾಯಕ್ ಎಂಬ ಎಸ್.ಪಿ. ಅವರು ಏನು ಇದ್ದಾರೆ ಅವರನ್ನು ಸಹ ಸಿ.ಐ.ಡಿ. ಪೊಲೀಸಿನವರು ಬಂಧನ ಮಾಡುತ್ತಾರೆ. ಈ ಮಧ್ಯೆ ಒಂದು ಡೆತ್ ನೋಟ್ ಇದೆ ಎಂದು ಹೇಳುತ್ತಾರೆ. ಆದರೆ ಈ ರೈಲ್ವೆ ಪೊಲೀಸಿನವರಿಗೆ ಆ ಡೆತ್ ನೋಟ್ ಸಿಕ್ಕಿಲ್ಲ. ನಮ್ಮ ರೆಗ್ಯುಲರ್ ಪೊಲೀಸಿನವರಿಗೆ ಈ ಕೇಸ್ ಹಸ್ತಾಂತರವಾದ ಮೇಲೆ ಈ ಡೆತ್ ನೋಟ್ ದಿನಾಂಕ 12–04–2015 ರಲ್ಲಿ ಸಿಗುತ್ತದೆ. ಆದರೆ ರೈಲ್ವೆ ಪೊಲೀಸಿನವರು ಆ ಡೆತ್ ನೋಟ್ ಅನ್ನು ದಾಖಲೆ ಮಾಡಿರಲಿಲ್ಲ. ಒಬ್ಬರು ಪೊಲೀಸ್ ಕಾನ್ಸ್‌ಟೇಬಲ್ ಅವರ ಹತ್ತಿರ ಅದು ಇರುತ್ತದೆ. ಅದನ್ನು ನಮ್ಮ ಕೊಪ್ಪ ಶಹರ್ ಪೊಲೀಸಿನವರು ದಾಖಲು ಮಾಡಿದ್ದಾರೆ. ಆ ಡೆತ್ ನೋಟಿನಲ್ಲಿ ಇಬ್ಬರೇ ಇಬ್ಬರ ಹೆಸರು ಇರುತ್ತದೆ. ಹನುಮೇಶ್ ನಾಯಕ್ ಮತ್ತು ಬಾಲನಗೌಡ ಹಾಗೂ ಅವರ ಸಂಗಡಿಗರು 6 ಜನ ಎಂದು ಅದರಲ್ಲಿ ಇರುತ್ತದೆ. ತದ ನಂತರ ನಮ್ಮ ಪೊಲೀಸಿನವರು 9 ಜನರಲ್ಲಿ 6 ಜನರನ್ನು ಬಂಧನ ಮಾಡುತ್ತಾರೆ. ಸಿ.ಐ.ಡಿ.ಯವರು ಹನುಮೇಶ್ ನಾಯಕ್ ಅವರನ್ನು ಕೂಡ ಬಂಧನ ಮಾಡಿದ್ದಾರೆ. ಇನ್ನಿಬ್ಬರು ಕೋರ್ಟಿಗೆ ಶರಣಾಗಿದ್ದಾರೆ. ಈಗ ನಾವು ಅವರನ್ನು ಜಾಮೀನಿನ ಮೇಲೆ ಬಿಡುತ್ತಿಲ್ಲ. ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ಈಗಾಗಲೇ ನಮ್ಮ ಪೊಲೀಸ್ ಇಲಾಖೆಯವರು ಈ ಬಗ್ಗೆ ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈಗಾಗಲೇ ನಮ್ಮ ಪೊಲೀಸಿನವರು ಎಲ್ಲಾ ಆರೋಪಿಗಳನ್ನು ಬಂಧನ ಮಾಡಿದ್ದು ತಮ್ಮ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದಂತೆ ನಮ್ಮಲ್ಲಿ ಒಳ್ಳೆಯ ಪೊಲೀಸರು ಒಳ್ಳೆಯ ಎಸ್.ಪಿ.ಯವರು ಇದ್ದಾರೆ ನಾನು ಇಲ್ಲವೆಂದು ಹೇಳುವುದಿಲ್ಲ. ಈ ಮಾತುಗಳು ನಮ್ಮ ಪೊಲೀಸಿನವರ ಮನೋಧೈರ್ಯವನ್ನು ಹೆಚ್ಚಿಸುತ್ತದೆ. ನಾನು ಒಂದು ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತಿದ್ದೇನೆ. ಇಲ್ಲಿ ಯಾರನ್ನೂ ಕೂಡ ರಕ್ಷಣೆ ಮಾಡುವ ಉದ್ದೇಶ ಇಲ್ಲ. ಯಾರನ್ನು ಅಪರಾಧಿ ಎಂದು ಹೇಳಬೇಕಾದರೆ, ಮೊದಲಿಗೆ ಡೆತ್ ನೋಟ್‌ನಲ್ಲಿ ಅವರ ಹೆಸರು ಇಲ್ಲ. ಆ ಡೆತ್ ನೋಟ್‌ನಲ್ಲಿ ಇಲ್ಲದವರ ಹೆಸರನ್ನು ನಾನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಮತ್ತು ದೂರನ್ನು ಏನು ನೀಡಿದ್ದಾರೆ ಅದರಲ್ಲಿ ಕೂಡ ಅವರ ಹೆಸರು ಇಲ್ಲ. ಎಫ್.ಐ.ಆರ್. ನಲ್ಲಿ ಅವರ ಹೆಸರು ಇಲ್ಲದವರ ವಿಚಾರದಲ್ಲಿ ಮತ್ತು ಇಷ್ಟರವರೆಗಿನ ನಡೆದಂತಹ ತನಿಖೆಯ ವಿಚಾರದಲ್ಲಿ ಯಾರೇ ಪ್ರಭಾವೀ ವ್ಯಕ್ತಿಗಳು ಅಂದರೆ, ಬಹುಶಃ ಇಷ್ಟರವರೆಗೆ ನಮ್ಮ ಯಾರೇ ಸಚಿವರ ಹೆಸರುಗಳು ಅದರಲ್ಲಿ ಬಂದಿಲ್ಲ. ಮುಂದೆ ಅದರಲ್ಲಿ ಏನು ಬರುತ್ತದೆಯೋ ಅದನ್ನು ಹೇಳುವುದಕ್ಕೆ ಆಗುವುದಿಲ್ಲ. ಅದರ ಬಗ್ಗೆ ನಮ್ಮ

ಸಿ.ಐ.ಡಿ.ಯವರು ವಿಚಾರಣೆ ಮಾಡುತ್ತಾರೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ಹೇಳಬಯಸುತ್ತೇನೆ. ಈ ಪ್ರಕರಣದಲ್ಲಿ ಯಾರೇ ಪ್ರಭಾವೀ ವ್ಯಕ್ತಿಗಳು ಇರಲಿ, ನಮ್ಮ ಮುಖ್ಯಮಂತ್ರಿಗಳು ಆಗಲೇ ಅಂದರೆ ಆ ಸಮಯದಲ್ಲಿ ಒಂದು ವಿಚಾರವನ್ನು ಹೇಳಿದರು. ನೋಡಿ ಎಸ್.ಪಿ. ಅವರಿಗೆ ದೂರವಾಣಿ ಮಾಡಿ ಇದರಲ್ಲಿ ಯಾರದ್ದೇ ಹಸ್ತಕ್ಷೇಪ ಇದ್ದರೂ ಕೂಡ ಯಾರ ಮೇಲೇ ದೂರು ಇದ್ದರೂ ಕೂಡ ಅವರ ಮೇಲೆ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿದರು. ಅದರಂತೆ, ನಾನು ಕೂಡ ಈ ವಿಚಾರವನ್ನು ಎಸ್.ಪಿ. ಅವರಿಗೆ ತಿಳಿಸಿ ಕೂಲಂಕಷವಾಗಿ ತನಿಖೆಯನ್ನು ಮಾಡಿ ತಪ್ಪಿತಸ್ಥರ ವಿರುದ್ಧ ಕಠಿಣವಾದ ಕ್ರಮವನ್ನು ತೆಗೆದುಕೊಳ್ಳಿ ಎಂದು ಹೇಳಿದ್ದೇನೆ. ಮತ್ತು ಈ ವಿಚಾರದಲ್ಲಿ ಸಿ.ಐ.ಡಿ. ಅವರಿಗೆ free hand ಕೊಟ್ಟಿದ್ದೇವೆ. ಇಂತಹ ವಿಚಾರ ಏನು ನಡೆದಿದೆ ಇದು ಆಗಬಾರದಾಗಿತ್ತು. ಇನ್ನು ಮುಂದೆ ಕೂಡ ಆಗಬಾರದು. ತಮಗೆ ಗೊತ್ತಿದೆ. ಈ ಕೊಲೆಗಳು ಆಗಾಗ ಆಗುತ್ತಲೇ ಇರುತ್ತದೆ. ಇದರಲ್ಲಿ ಒಬ್ಬ ವಿದ್ಯಾರ್ಥಿ ಟಿ.ವಿ. ಗೆ ಸಂದರ್ಶನ ಕೊಡುವುದು ಬಹುಶ: ಅಲ್ಲಿನ ಸ್ಥಳೀಯರಿಗೆ ಅದು ಇಷ್ಟವಾಗದೇ ಇರಬಹುದು. ಇವೆಲ್ಲವೂ ಕೂಡ ಆಗಿದೆಯೋ ಇಲ್ಲವೋ ಈ ಎಲ್ಲಾ ಪ್ರತಿಯೊಂದು ವಿಚಾರದಲ್ಲೂ ಕೂಡ ಈ ತನಿಖೆಯಿಂದ ಸತ್ಯ ಸಂಗತಿಗಳು ಹೊರಗಡೆ ಬರುತ್ತದೆ. ಈ ಬಗ್ಗೆ ನಾನು ಇಲ್ಲಿ ಹೆಚ್ಚಿಗೆ ಮಾತನಾಡಬೇಕಾಗಿಲ್ಲ. ನಾನು ತಮ್ಮಲ್ಲಿ ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ. ಇಂತಹ ಯಾವುದೇ ವಿಚಾರದಲ್ಲೂ ಕೂಡ ಸರ್ಕಾರ ಯಾರನ್ನೂ ಕೂಡ ರಕ್ಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕಠಿಣವಾದ ಶಿಕ್ಷೆಯನ್ನು ಕೊಡುವುದಕ್ಕೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ನಿಮ್ಮೆಲ್ಲರ ಮತ್ತು ಈ ಭಾಗದವರ ಕಳಕಳಿ ಮತ್ತು ಕರ್ನಾಟಕದ ಜನತೆಯ ಕಳಕಳಿಯ ಸಮೇತ ಇಂತಹ ಪ್ರಕರಣ ಮತ್ತೆ ಮರುಕಳಿಸಬಾರದೆಂಬ ಉದ್ದೇಶದಿಂದ ಈ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ.

**(6.30 ಗಂಟೆ)**

ಮಾನ್ಯ ಸಭಾಪತಿಯವರೆ, ಸಿ.ಬಿ.ಐಗೆ ಕೊಟ್ಟರೆ ಏನಾಗುತ್ತದೆಂದು ನಮಗೆ ಈಗಾಗಲೇ ಗೊತ್ತಿದೆ. ನಾವು ಈಗಾಗಲೇ ಸಿ.ಬಿ.ಐ.ಗೆ ಆರು ಕೇಸ್‌ಗಳನ್ನು ಕೊಟ್ಟಿದ್ದೇವೆ. ಇತ್ತೀಚೆಗೆ ಲಾಟರಿ ಕೇಸ್ ಅನ್ನು ಸಿ.ಬಿ.ಐ.ನವರಿಗೆ ವಹಿಸಿದ್ದೇವೆ. ಆದರೆ ಅವರು ಇಲ್ಲಿಯವರೆಗೆ ಆ ಕೇಸ್ ಅನ್ನು ವಹಿಸಿಕೊಂಡಿಲ್ಲ. ನಾವು ಈಗ ಒಬ್ಬರನ್ನು ಅರೆಸ್ಟ್ ಮಾಡಿದ್ದೇವೆ. ಅವರಿಗೆ ಬೇಲ್ ಸಿಗದ ಹಾಗೆ ಅವರ ಮೇಲೆ ಪ್ರಿಲಿಮಿನರಿ ಚಾರ್ಜ್‌ಶೀಟ್ ಅನ್ನು ನಾವು ಫೈಲ್ ಮಾಡಬೇಕಾಗಿತ್ತು. ಸ್ವಲ್ಪ ತಡವಾಗುತ್ತಿದೆ. ಇದುವರೆಗೆ ಬಹುಶಃ ನಮ್ಮ ಸಿ.ಐ.ಡಿ.ಯವರು ಎನ್‌ಕ್ವಯರಿ ಮಾಡಿದರೆ ಈಗಾಗಲೇ ಸಾಕಷ್ಟು ಪ್ರಗತಿಯನ್ನು ಸಾಧನೆ ಮಾಡಬಹುದಾಗಿತ್ತು. ನಮ್ಮಲ್ಲಿ ಸಾಕಷ್ಟು ಒಳ್ಳೆಯ ಪೊಲೀಸರು ಇದ್ದಾರೆ. ಒಳ್ಳೆಯ ಅಧಿಕಾರಿಗಳಿದ್ದಾರೆ.

ಈಗಾಗಲೇ ಸಾಕಷ್ಟು ಕೇಸ್‌ಗಳನ್ನು ಭೇದಿಸಿದ್ದಾರೆ. ಅದೇ ರೀತಿಯಲ್ಲಿ ಈ ಕೇಸ್‌ಅನ್ನು ಕೂಡ ಆದಷ್ಟು ಬೇಗ ಭೇದಿಸುತ್ತೇವೆ. ಈಗಾಗಲೆ ಆರೋಪಿಗಳನ್ನು ಅರೆಸ್ಟ್ ಮಾಡಿದ್ದೇವೆ. ಅವರ ಮೇಲೆ ಚಾರ್ಜ್‌ಶೀಟ್ ಅನ್ನು ಫೈಲ್ ಮಾಡಬೇಕಾಗಿದೆ. ಅದನ್ನು ಆದಷ್ಟು ಬೇಗ ಮಾಡುತ್ತೇವೆ. ಅದರಲ್ಲಿ ಯಾವುದೇ ಸಂದೇಹವನ್ನು ಪಡಬೇಡಿ. ದಯಮಾಡಿ ಈ ಕೇಸ್‌ಅನ್ನು ನಮ್ಮ ಆಫೀಸರ್ಸ್ ತನಿಖೆ ಮಾಡಲಿ. ಎಲ್ಲಾ ವಿಷಯದಲ್ಲಿ ಸಿ.ಬಿ.ಐ ಅವಶ್ಯಕತೆ ಇಲ್ಲ. ನಮ್ಮ ಪೊಲೀಸ್ ಮೇಲೆ ನಂಬಿಕೆ ಇಡಿ. ನಮ್ಮ ಪೊಲೀಸರ ಮನೋಧೈರ್ಯವನ್ನು ಕುಗ್ಗಿಸುವಂಥ ಕೆಲಸವನ್ನು ನಾವು ನೀವು ಮಾಡುವುದು ಬೇಡ ಎಂದು ಹೇಳಬಯಸುತ್ತೇನೆ.

**ಶ್ರೀ ಕೆ.ಎಸ್. ಈಶ್ವರಪ್ಪ (ವಿರೋಧ ಪಕ್ಷದ ನಾಯಕರು):–** ಮಾನ್ಯ ಸಭಾಪತಿಯವರೆ, ನಾನು ಗೃಹಸಚಿವರ ಹೇಳಿಕೆಯನ್ನು ಖಂಡಿತ ಸ್ವಾಗತ ಮಾಡುತ್ತಿದ್ದೇನೆ. ನಾನು ಖಂಡಿತ ಇದರಲ್ಲಿ ರಾಜಕಾರಣ ಮಾಡಲು ಹೋಗುವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳೆ, ಅವರ ತಂಗಿ ಮಂಜುಳ ಕಂಪ್ಲೇಂಟ್ ಕೊಟ್ಟ ಮೇಲೆ ಬಹಳ ದಿನ ಕ್ರಮ ತೆಗೆದುಕೊಂಡಿಲ್ಲ. ಹನುಮೇಶ್ ನಾಯಕ ಓಡಾಡುತ್ತಲೇ ಇರುತ್ತಾನೆ. ನಿಮ್ಮ ಕೆ.ಪಿ.ಸಿ.ಸಿ. ಅಧ್ಯಕ್ಷರು ಕಾಂಗ್ರೆಸ್ ಪಕ್ಷದಿಂದ ಹನುಮೇಶ್ ನಾಯಕನನ್ನು ಸಸ್ಪೆಂಡ್ ಮಾಡಿದ್ದಾರೆ. ನಾನು ಅದನ್ನು ಸ್ವಾಗತ ಮಾಡಿದ್ದೇನೆ. ಕೊಲೆಯಾದ ನಂತರ ರೈಲ್ವೆ ಹಳಿಯಲ್ಲಿ ಆ ಶವವನ್ನು ಹಾಕಿದ ನಂತರ ಹೆಚ್ಚು ಕಡಿಮೆ ಕೇಸ್ ಅನ್ನು ಮುಚ್ಚಿ ಹಾಕಿದ್ದಾರೆ. ಹೇಗೆಂದರೆ ಆ ಶವವನ್ನು ತೆಗೆದುಕೊಂಡು ಬಂದು ತಾಯಿಯ ಮನೆಯ ಹತ್ತಿರ ಇಡುತ್ತಾರೆ. ಅಲ್ಲಿ ಸೀಮೆ ಎಣ್ಣೆ, ಪೆಟ್ರೋಲ್ ಎಲ್ಲಾ ತಯಾರಾಗಿ ತೆಗೆದುಕೊಂಡು ಬರುತ್ತಾರೆ. ಆಗ ಆ ತಾಯಿ ನಮ್ಮ ಪದ್ಧತಿಯಲ್ಲಿ ಶವವನ್ನು ಹೂಳುತ್ತೇವೆ. ಶವವನ್ನು ಸುಡುವುದಿಲ್ಲ ಎಂದು ಹೇಳುತ್ತಾಳೆ. ನಿಮ್ಮ ಕಾಲಿಗೆ ಬೀಳುತ್ತೇನೆ, ಈ ಶವವನ್ನು ಹೂಳೋಣ ಎಂದು ಹೇಳುತ್ತಾಳೆ. ಆದರೆ ಯಾರು ಅವಕಾಶ ಕೊಡುವುದಿಲ್ಲ. ಕೂಡಲೇ ತರಾತುರಿಯಲ್ಲಿ ಆ ಶವವನ್ನು ತೆಗೆದುಕೊಂಡು ಹೋಗಿ ಸುಟ್ಟು ಹಾಕುತ್ತಾರೆ.

**ಶ್ರೀ ಐವನ್ ಡಿ'ಸೋಜ:–** ಮಾನ್ಯ ಸಭಾಪತಿಯವರೆ, that means you are an eye witness. ನೀವು eye witness ಆಗಿ ಮಾತನಾಡಿದಿರಿ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇವರಿಗೆ ಏನಾಗಿದೆ? ಪ್ರತಿಯೊಂದಕ್ಕು ಏನಾದರೊಂದು ಹೇಳುತ್ತಾರಲ್ಲ. ಹಾಗಾದರೆ ಗೃಹ ಸಚಿವರು, ಮುಖ್ಯಮಂತ್ರಿಗಳು ಇನ್ನು ಮುಂದೆ ಯಾವುದೇ ಕೊಲೆಯ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಬೇಡಿ ಎಂದು ಹೇಳಿಬಿಡಲಿ. ಆಗ ನಾವು ಇಲ್ಲಿ ಪ್ರಸ್ತಾಪವನ್ನೆ ಮಾಡುವುದಿಲ್ಲ. ನೋಡಿ ಮುಖ್ಯಮಂತ್ರಿಗಳೆ ನಿಮ್ಮ ಎದುರುಗಡೆಯೇ ಹೀಗೆ ಮಾಡುತ್ತಾರೆ. ಇನ್ನು ನೀವು ಇಲ್ಲದಿದ್ದರೆ ನಮ್ಮಗತಿ ಏನಾಗಬೇಕು?

**(ಗೊಂದಲ)**

**ಶ್ರೀ ಹೆಚ್.ಎಂ. ರೇವಣ್ಣ:–** ಮಾನ್ಯ ಸಭಾಪತಿಯವರೆ, ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ಇಲ್ಲಿ ಬಂದ ಮೇಲೆ ಕಾನೂನೇ ಹೋಯಿತು.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ರೇವಣ್ಣನವರು ಪೂರ್ತಿ ಕಾನೂನನ್ನು ಅರಿದು ಕುಡಿದು ಬಿಟ್ಟಿದ್ದಾರೆ. ರೇವಣ್ಣನವರು ಸಂವಿಧಾನ ಶಿಲ್ಪಿಯಾಗಿದ್ದಾರೆ. ನಾನು ನೀವು ಹೆಚ್ಚು ಕಡಿಮೆ ಒಟ್ಟಿಗೆ ಬಂದಿದ್ದೇವೆ. ಇಲ್ಲಿ ನಾನು ನೀವು ಬಂದ ಮೇಲೆ ಗೌರವ ಜಾಸ್ತಿಯಾಗಿದೆ ಎಂದು ಜನ ಮಾತನಾಡುತ್ತಿದ್ದಾರೆ. ನೀವು ಬಂದ ಮೇಲೆ ಏನು ಎಂದು ತೀರ್ಮಾನ ಮಾಡಿ. ಮುಖ್ಯಮಂತ್ರಿಗಳೆ, ಇದರಲ್ಲಿ ಖಂಡಿತ ನಾನು ರಾಜಕಾರಣ ಬೆರೆಸುತ್ತಿಲ್ಲ. ಎಂತಹ ಪ್ರಭಾವಿ ವ್ಯಕ್ತಿಗಳಿದ್ದರು ಅವರನ್ನು ಬಿಡಬೇಡಿ ಎಂದು ತಾವು ಎಸ್‌ಪಿಯವರಿಗೆ ಹೇಳಿದ್ದನ್ನು ನಾನು ಸ್ವಾಗತ ಮಾಡಿ ನೀವು ಇಲ್ಲದೆ ಇರುವಂಥ ಸಂದರ್ಭದಲ್ಲಿ ಮಾತನಾಡಿದ್ದೇನೆ. ನಾನು ಹೇಳುವುದಕ್ಕೆ ಹೊರಟಿದ್ದೇನೆಂದರೆ ನಿಮ್ಮಎಸ್‌ಪಿ ತುಂಬಾ ಒಳ್ಳೆಯವರು. ಒಳ್ಳೆಯವರು ಎನ್ನುವುದಕ್ಕಿಂತ ಕಠಿಣ ವ್ಯಕ್ತಿ. ಅವರು ಬಂದ ಮೇಲೆ ಯಾವುದೇ ಪ್ರಭಾವಿ ವ್ಯಕ್ತಿಗಳಿಗೆ ಬಗ್ಗಲಿಲ್ಲ. ಅವರು ಬಂದ ಮೇಲೆ ಅರೆಸ್ಟ್‌ಗಳು ಪ್ರಾರಂಭವಾದವು. ಅಲ್ಲಿಯವರೆಗೆ ಅರೆಸ್ಟ್‌ಗಳು ಆಗಿರಲಿಲ್ಲ. ಏಕೆ ಆಗಲಿಲ್ಲ ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ? ಯಾವ ಪ್ರಭಾವಿ ವ್ಯಕ್ತಿಗಳು ಅವರನ್ನು ಉಳಿಸಿದರು ಎಂದು ಪ್ರಶ್ನೆ ಬರುತ್ತದೆ? ಕೊಲೆ ಮಾಡುವವರು ಬೆನ್ನು ಹತ್ತಿಕೊಂಡು ಬಂದಾಗ ಪೊಲೀಸ್ ಅಧಿಕಾರಿಗಳಿಗೆ ಫೋನ್ ಮಾಡುತ್ತಾನೆ, ಅದನ್ನು ಅವನು ವೀಡಿಯೋ ಚಿತ್ರೀಕರಣ ಮಾಡಿಕೊಂಡಿದ್ದಾನೆ. ನನ್ನ ಕಥೆ ಮುಗಿಯಿತು ಎಂದು ಟಿ.ವಿ.ಯವರಿಗೆ, ಪತ್ರಿಕೆಯವರಿಗೆ, ಜಿಲ್ಲಾಪರಿಷತ್ ಸದಸ್ಯರಿಗೆ, ಪೊಲೀಸ್ ಇಲಾಖೆಗೆ ಫೋನ್ ಮಾಡುತ್ತಾನೆ. ನಾನು ಫೋನ್ ನಂಬರ್ ಎಲ್ಲಾ ಹೇಳಿದ್ದೇನೆ. ಸಿ.ಐ.ಡಿ.ನವರು ಮುಚ್ಚಿ ಹಾಕುತ್ತಾರೆಂದು ನಾನು ಹೇಳಿಲ್ಲ.

**ಉಪ ಸಭಾಪತಿಯವರು:–** ಈಗ ಕ್ಲ್ಯಾರಿಫಿಕೇಶನ್ ಅನ್ನು ಬೇಗ ಮುಗಿಸಿ. ಎರಡು ಗಂಟೆಯಲ್ಲಿ ಮುಗಿಸುತ್ತೇವೆಂದು ನೀವು ತೀರ್ಮಾನ ಮಾಡಿದ್ದೀರಿ. ಬೇಗ ಕ್ಲ್ಯಾರಿಫಿಕೇಶನ್ ಅನ್ನು ಕೇಳಿ.

**ಶ್ರೀ ಆರ್.ವಿ. ವೆಂಕಟೇಶ್:–** ಮಾನ್ಯ ಸಭಾಪತಿಯವರೆ, ಎರಡು ಗಂಟೆಯಲ್ಲಿ ಮುಗಿಸುತ್ತೇವೆಂದು ಅವರೇ ತೀರ್ಮಾನ ಮಾಡಿದ್ದಾರೆ. ಈಗ ಮತ್ತೆ ಮತ್ತೆ ಅಲ್ಲಿಂದಲೇ ಪ್ರಾರಂಭ ಮಾಡುತ್ತಿದ್ದಾರೆ.

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಬಹಳ ಸಂತೋಷ, ಈ ಸರ್ಕಾರ ಯಾರು ಕೊಲೆಗಡುಕರಿದ್ದಾರೆ, ಕೊಲೆಗಡುಕರಿಗೆ ರಕ್ಷಣೆ ಮಾಡಿದಂಥ ಮಂತ್ರಿ ನಿಮ್ಮ ಸಚಿವ ಸಂಪುಟದಲ್ಲಿದ್ದಾರೆ. ಅವರನ್ನು ಕೂಡಲೇ ಸಚಿವ ಸಂಪುಟದಿಂದ ಕೈ ಬಿಡಬೇಕು ಮತ್ತು ಇದನ್ನು ಸಿ.ಬಿ.ಐ. ತನಿಖೆ ಮಾಡಬೇಕೆಂದು ಹೇಳಿ ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಮ್ಮ ಎರಡೇ ಎರಡು ಬೇಡಿಕೆಗಳಿವೆ. ಅದು ಆಗುತ್ತದೋ ಇಲ್ಲವೋ ಎನ್ನುವುದನ್ನು ಮಾತ್ರ ಅವರು ಹೇಳಲಿ. ಕೊಲೆಗಡುಕರಿಗೆ ರಕ್ಷಣೆ ಮಾಡುತ್ತಿರುವಂಥ ಮಂತ್ರಿ, ಅವರ ಮೇಲೆ ಕಂಪ್ಲೇಂಟ್ ಆದಮೇಲೆ ಅವರು ಕೂಡ ಕೊಲೆಗಡುಕರ ಗುಂಪಿಗೆ ಸೇರುತ್ತಾರೆ..

**(ಗೊಂದಲ)**

**ಶ್ರೀ ಕೆ.ಜೆ. ಜಾರ್ಜ್:–** ಮಾನ್ಯ ಸಭಾಪತಿಯವರೆ, ಇಷ್ಟು ಹೊತ್ತು ನಮ್ಮ ಪೋಲಿಸರು ಒಳ್ಳೆಯವರು, ಒಳ್ಳೆಯ ಕೆಲಸವನ್ನು ಮಾಡುತ್ತಾರೆಂದು ಹೇಳಿದ್ದಾರೆ. ಅವರ ಮೇಲೆ ನಿಮಗೆ ನಂಬಿಕೆ ಇಲ್ಲವೇ?

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಆದರೆ ಈ ಪ್ರಭಾವಿ ವ್ಯಕ್ತಿಗಳು ಎಲ್ಲಿಯವರೆಗೆ ಬಿಡುತ್ತಾರೋ ಗೊತ್ತಿಲ್ಲ. ಅದಕ್ಕಾಗಿ ಇದನ್ನು ಸಿ.ಬಿ.ಐ.ಗೆ ಕೊಡಬೇಕು ಮತ್ತು ಈ ಕೊಲೆಗಡುಕ ಮಂತ್ರಿಯನ್ನು, ರಕ್ಷಣೆ ಮಾಡುವಂಥ ಮಂತ್ರಿಯನ್ನು ಸಚಿವ ಸಂಪುಟದಿಂದ ಕೈಬಿಡಬೇಕು. ಕೊಲೆಗಡುಕರನ್ನು ರಕ್ಷಣೆ ಮಾಡುವಂಥ ಮಂತ್ರಿಯನ್ನು ಸಚಿವ ಸಂಪುಟದಿಂದ ಕೈಬಿಡಬೇಕು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಮಾನ್ಯ ಮುಖ್ಯಮಂತ್ರಿಗಳ ಪರಿಸ್ಥಿತಿಯೇ ಹೀಗೆ, ಇನ್ನು ನಮ್ಮ ಪರಿಸ್ಥಿತಿ ಹೇಗೆ?

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:–** ಮಾನ್ಯ ಸಭಾಪತಿಯವರೆ, ಆ ಕಾಲದಲ್ಲಿ ಅವರ ಕಡೆಯವರು ಕೂಡ ಅದನ್ನೆ ಮಾಡುತ್ತಿದ್ದರು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ನಮ್ಮ ಕಡೆಯವರು ಯಾರು ಹೀಗೆ ಮಾಡಿಲ್ಲ. ಅವರು ಕುಳಿತಿರುವ ಕಡೆ ಹಾಗೆ ಕುಳಿತಿರುವವರು.

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:–** ಮಾನ್ಯ ಸಭಾಪತಿಯವರೆ, ನಾನು ವಿಧಾನ ಸಭೆಯಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದೆ ಆಗ ಇವರು ಇದೇ ಕೆಲಸ ಮಾಡುತ್ತಿದ್ದರು.

**(ಗೊಂದಲ)**

**ಶ್ರೀ ಎಸ್.ಆರ್. ಪಾಟೀಲ್:–** ಮಾನ್ಯ ಸಭಾಪತಿಯವರೆ, ಅವರ ಕಾಲದಲ್ಲಿ ಅವರು ಸದನಕ್ಕೆ ಬರುತ್ತಿರಲಿಲ್ಲ. ಯಾವಾಗಲೂ ರೆಸಾರ್ಟ್‌ನಲ್ಲಿಯೇ ಇರುತ್ತಿದ್ದರು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅವರ ಮಂತ್ರಿಗಳಲ್ಲಿ ಒಬ್ಬರಿಗಿಂತ ಒಬ್ಬರು ಮುಖ್ಯಮಂತ್ರಿಗಳ ಹೇಳಿಕೆಗೆ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಏಕೆ ಸುಮ್ಮನೆ ಮಾತನಾಡುತ್ತಿದ್ದೀರಿ. ಎಸ್.ಆರ್. ಪಾಟೀಲರೆ ತಾವು ದೊಡ್ಡವರು ಇದ್ದೀರಿ. ಏಕೆ ಹೀಗೆ ಮಾತನಾಡುತ್ತೀರಿ?

**(ಗೊಂದಲ)**

**ಶ್ರೀ ಕೆ. ಅಭಯಚಂದ್ರ:–** ಮಾನ್ಯ ಸಭಾಪತಿಯವರೆ, ನಿಮ್ಮವರು ಕೂಡ ಅದೇ ಮಾಡುತ್ತಿದ್ದರು.

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಅದಕ್ಕಾಗಿಯೇ ನಮ್ಮವರು ಹಾಳಾಗಿ ಹೋಗಿದ್ದಾರೆ ಅದಕ್ಕಾಗಿ ನಾವು ಇಲ್ಲಿ ಬಂದು ಕುಳಿತಿದ್ದೇವೆಂದು ಹತ್ತು ಬಾರಿ ಹೇಳಿದ್ದೇನೆ. ನಾನೇನು ಅದನ್ನು ಡಿಫೆಂಡ್ ಮಾಡಿಕೊಳ್ಳುತ್ತಿಲ್ಲ. ಮತ್ತೆ ಮತ್ತೆ ಅದನ್ನೆ ಏಕೆ ಹೇಳುತ್ತಿದ್ದೀರಿ. ಕುರುಡು ಕಣ್ಣಿಗಿಂತ ಮೆಳ್ಳಗಣ್ಣು ಮೇಲು ಎಂದು ಹೇಳಿಕೊಳ್ಳುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳೆ, ನನಗೆ ನಿಮ್ಮ ಬಗ್ಗೆ ಗೌರವ ಇದೆ.

**(ಗೊಂದಲ)**

**ಶ್ರೀ ಕೆ. ಅಭಯಚಂದ್ರ:–** ಓಹೋ..

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಏನಾಗಿದೆ ಇವರಿಗೆ. ಏನಿದು ಓಹೋ. ನಿಮಗೆ ಗೌರವ ಇಲ್ಲವೇ?

**(ಗೊಂದಲ)**

**ಶ್ರೀ ಸಿದ್ಧರಾಮಯ್ಯ:–** ಮಾನ್ಯ ಸಭಾಪತಿಯವರೆ, ಈಶ್ವರಪ್ಪನವರು ಈ ಕಡೆ ಮಾತನಾಡಲಿ. ಆ ಕಡೆ ಏಕೆ ಮಾತನಾಡುತ್ತಾರೆ...

**(ಗೊಂದಲ)**

**ಶ್ರೀ ಕೆ.ಎಸ್. ಈಶ್ವರಪ್ಪ:–** ಮಾನ್ಯ ಸಭಾಪತಿಯವರೆ, ಇಲ್ಲಿ ಅವರು ಒಳ್ಳೆಯ ಪೊಲೀಸ್ ಅಧಿಕಾರಿಯನ್ನು ಹಾಕಿದ್ದಾರೆ. ಅವರ ತಾಯಿಯವರ ಆಸೆ ಏನೆಂದರೆ, ಅವರ ತಾಯಿಯವರು ಹೇಳಿಕೆ ಕೊಟ್ಟಿರುವುದೇನೆಂದರೆ ಇದರ ಸತ್ಯ ಸಿ.ಐ.ಡಿ. ತನಿಖೆಯಿಂದ ಹೊರಗೆ ಬರುವುದಿಲ್ಲ. ಇದು ಪತ್ರಿಕೆಯಲ್ಲಿ ಕೂಡ ಬಂದಿದೆ. ಕೊಲೆ ಮಾಡಿದವರ ಹೆಸರು ಹೊರಗಡೆ ಬರಬೇಕೆಂದು ಅವರ ತಾಯಿ ಹೇಳಿದ್ದಾರೆ. ಅವರಿಗೆ ಇದರ ಬಗ್ಗೆ ನಂಬಿಕೆ ಇಲ್ಲ. ಇನ್ನು ಅಲ್ಲಿ ಜಾತಿ ಮೆರವಣಿಗೆಗಳು ನಡೆಯುತ್ತಿವೆ. ಜಾತಿ ಜಾತಿಗೆ ಸಂಘರ್ಷಗಳು ತರುತ್ತಿದ್ದಾರೆ. ಅಲ್ಲಿನ ಜನ ಕೂಡ ಇವರ ಪರವಾಗಿ ಹೇಳಬೇಕಾಗಿತ್ತು. ನಿಮ್ಮ ಊರಿನಲ್ಲಿ ಸಿದ್ಧರಾಮಯ್ಯನವರಿಗೆ ಏನಾದರು ಅಂದರೆ ಜನ ಹೇಗೆ ಹೇಳುತ್ತಾರೆ? ಇಲ್ಲಿ ಹಾಗೆ ಆಗಿಲ್ಲ, ಯಾರಾದರು ಹಾಗೆ ಹೇಳಿದರೆ, ಇವರ ವಿರುದ್ಧ ಎದ್ದರೆ, ಸ್ವಾಭಾವಿಕವಾಗಿ ಜನ ತಂಗಡಗಿ ಅಂಥವರಲ್ಲ ಎಂದು ಹೇಳಬೇಕಾಗಿತ್ತು. ನೀವು ಹೇಗೆ ಹೇಳುತ್ತೀರೆಂದು ಇಡೀ ಸಮಾಜ ಹೇಳಬೇಕಾಗಿತ್ತು. ರಾಜ್ಯದಿಂದ ಜಾತಿಯವರನ್ನು ಕರೆಸುತ್ತಾರೆ. ಇವರು ನಮ್ಮ ಸಚಿವ ಸಂಪುಟದಲ್ಲಿ ಇದ್ದದ್ದಕ್ಕೂ ನನಗೂ ಸಂಬಂಧವಿಲ್ಲ. ಆದ್ದರಿಂದ ಅವರು ನಿಮ್ಮ ಸಚಿವ ಸಂಪುಟದಲ್ಲಿ ಇರುವುದಕ್ಕೂ ಬಿಡುವುದಕ್ಕೂ ನನಗೆ ಸಂಬಂಧ ಇಲ್ಲ. ನಾನು ಪತ್ರಿಕೆಯಲ್ಲಿ ಬಂದಿರುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ನಿಮ್ಮ ಸಚಿವ ಸಂಪುಟದಲ್ಲಿ ಕೊಲೆ ಮಾಡಿಸಿದಂಥ ವ್ಯಕ್ತಿಗೆ ತಂಗಡಗಿಯವರು ರಕ್ಷಣೆ ಕೊಟ್ಟಿದ್ದಾರೆಂದು ಬಂದಿದೆ. ಆದ್ದರಿಂದ ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕು ಮತ್ತು ಅವರ ತಾಯಿಯವರ ಭಾವನೆ ಏನಿದೆ ಎಂದರೆ ಈ ಪ್ರಕರಣ ಈ ಸಿ.ಐ.ಡಿ.ಯಿಂದ ತನಿಖೆಯಾಗುವುದಿಲ್ಲ ಅದು ಸಿ.ಬಿ.ಐ. ಮುಖಾಂತರ ತನಿಖೆಯಾಗಬೇಕೆಂದು ಎಲ್ಲರ ಅಪೇಕ್ಷೆ ಇದೆ ಆದ್ದರಿಂದ ನಾನು ನಿಮ್ಮ ಅಭಿಪ್ರಾಯವನ್ನು ಕೇಳುತ್ತೇನೆ.

**ಶ್ರೀ ಸಿದ್ಧರಾಮಯ್ಯ:–** ಮಾನ್ಯ ಸಭಾಪತಿಯವರೆ, ಈ ಪ್ರಕರಣವನ್ನು ಸಿ.ಐ.ಡಿ.ಗೆ ಕೊಡಬೇಕೆಂದ ತಕ್ಷಣ ನಾವು ಜೂನ್ 19ನೇ ತಾರೀಖು 2015ರಂದು ಸಿ.ಐ.ಡಿ.ಗೆ ಕೊಟ್ಟಿದ್ದೇವೆ. ಅವರಿಗೆ ಕೊಟ್ಟ ತಕ್ಷಣ ಎರಡು ದಿನಗಳಲ್ಲಿ ಅಂದರೆ ದಿನಾಂಕ 21ನೇ ತಾರೀಖು ಹನುಮೇಶ್ ನಾಯಕ್ ಎನ್ನುವವರನ್ನು ಅರೆಸ್ಟ್ ಮಾಡಿದ್ದಾರೆ. ಅವನೂ ಕೂಡ ಈಗ judicial custody ಗೆ ಹೋಗಿದ್ದಾನೆ. ಈಗ ಕೊಲೆಯಾದರು ಎಂದು ಆರೋಪ ಏನಿದೆ ಆ ಯಲ್ಲಾಲಿಂಗ ಯಾರು ಇದ್ದಾರೆ ಅವರ ತಂಗಿ ಕಂಪ್ಲೇಂಟ್ ಕೊಡುತ್ತಾರೆ. ಮೃತ ಯಲ್ಲಾಲಿಂಗನ ತಂಗಿಯವರು ದೂರನ್ನು ಕೊಟ್ಟಿರುತ್ತಾರೆ. ಆ ದೂರಿನಲ್ಲಿ ಕೊಟ್ಟಿರತಕ್ಕಂತಹ ಎಲ್ಲಾ ಆರೋಪಿಗಳನ್ನು 3+6 ಜನ ಒಟ್ಟು 9 ಜನರನ್ನು ಪೊಲೀಸ್‌ನವರು ಅರೆಸ್ಟ್ ಮಾಡಿದ್ದಾರೆ. ಮತ್ತು ಅಷ್ಟು ಜನರಿಗೆ prosecution side ನಿಂದ ವಿರೋಧ ಮಾಡಿ, ಬೇಲ್ ಕೊಡದೇ ಇರುವ ರೀತಿಯಲ್ಲಿ ನೋಡಿಕೊಂಡಿದ್ದಾರೆ. ಬೇಲ್ ಕೊಡಕೂಡದು ಎಂದು ಮಾಡಲಾಗಿದೆ. ದೂರಿನಲ್ಲಿ ಯಾರ್‍ಯಾರು ಆರೋಪಿಗಳೆಂದು ಹೆಸರು ಇತ್ತು ಅಷ್ಟು ಜನರನ್ನು ಅಂದರೆ ಒಟ್ಟು 9 ಜನರನ್ನು ಬಂಧಿಸಿದ್ದಾರೆ. ಹನುಮೇಶ್ ನಾಯಕ್‌ನನ್ನು ಕೂಡ ಸಿಐಡಿ ಗೆ ಈ ಕೇಸ್ ಅನ್ನು ಕೊಟ್ಟ ಮೇಲೆ ಅವನನ್ನು ಕೂಡ ಬಂಧಿಸಲಾಗಿದೆ. ಅವನು ಕೂಡ 9 ಜನರಲ್ಲಿ ಒಬ್ಬ ಆರೋಪಿಯಾಗಿದ್ದಾನೆ. ಇಲ್ಲಿ ಯಾರನ್ನಾದರು ರಕ್ಷಣೆ ಮಾಡಬೇಕಾದಂತಹ ಉದ್ದೇಶದ ಪ್ರಶ್ನೆ ಎಲ್ಲಿದೆ? ಮತ್ತೆ ನಾವು ಪೊಲೀಸ್‌ನವರ ಮೇಲೆ ನಾವೇ ನಂಬಿಕೆಯನ್ನು ಕಳೆದುಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಕರ್ನಾಟಕ ರಾಜ್ಯದಲ್ಲಿ ಒಂದು ಲಕ್ಷ ಪೊಲೀಸ್‌ನವರಿದ್ದಾರೆ. Law and order is a state subject. ನಾವೇ ಅದನ್ನು ಮಾಡಬೇಕಾಗುತ್ತದೆ. ಅದನ್ನು ಬಿಟ್ಟು ಎಲ್ಲವನ್ನೂ ಕೂಡ ಸಿಬಿಐ ಗೆ ಕೊಡಿ ಎಂದು ಹೇಳಿದರೆ ಕೊಡುವುದಕ್ಕಾಗುವುದಿಲ್ಲ. ಅಗತ್ಯವಿದ್ದಾಗ ಮಾತ್ರ ಸಿಬಿಐ ಗೆ ಕೊಡಬೇಕಾಗುತ್ತದೆ. ಶ್ರೀ ವಿ.ಎಸ್. ಉಗ್ರಪ್ಪನವರು ಪ್ರಸ್ತಾಪ ಮಾಡಿದಾಗ ವಿರೋಧ ಪಕ್ಷದ ನಾಯಕರು ಸದನದಲ್ಲಿ ಇರಲಿಲ್ಲ. ಹೊರಗಡೆ ಹೋಗಿದ್ದರು. ಹಿಂದೆ ಪದ್ಮಪ್ರಿಯ ಪ್ರಕರಣ ಬಂದಿತ್ತು. ನಾವೆಲ್ಲರೂ ಅದನ್ನು ಸಿಬಿಐ ಗೆ ಕೊಡಬೇಕೆಂದು ಒತ್ತಾಯ ಮಾಡಿದ್ದೋ. ಅದನ್ನು ಆಗಿನ ಸರ್ಕಾರದವರು ಸಿಬಿಐ ಗೆ ಕೊಟ್ರಾ?

**ಶ್ರೀ ಐವನ್ ಡಿ'ಸೋಜಾ:–** ಮಾನ್ಯ ಸಭಾಪತಿಯವರೇ, ಅದರಲ್ಲಿ inter-state ramification ಇತ್ತು.

**ಶ್ರೀ ಸಿದ್ದರಾಮಯ್ಯ:–** ಅದರಲ್ಲಿ inter-state ramification ಇತ್ತು. ಬಿಜೆಪಿ ಸರ್ಕಾರ ಇದ್ದಾಗ ಯಾವುದಾದರು ಪ್ರಕರಣವನ್ನು ಸಿಬಿಐ ಗೆ ಕೊಡಲಾಯಿತಾ? ಯಾವುದೇ ಹಗರಣದ ಮೇಲೆ ಪ್ರಸ್ತಾಪ ಮಾಡಿದರೂ ಕೂಡ ಅದನ್ನು ಸಿಬಿಐ ಗೆ ಕೊಡಲಿಲ್ಲ. ಆಯಿತು. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಆರು ಪ್ರಕರಣಗಳನ್ನು ಸಿಬಿಐ ಗೆ ಕೊಟ್ಟಿದ್ದೇವೆ. It shows that our Government is totally

transparent. ಅದರ ಬಗ್ಗೆ ಯಾರೂ ಕೂಡ ಸಂಶಯವನ್ನು ಪಡಬೇಕಾದಂತಹ ಅಗತ್ಯವಿಲ್ಲ. ನಾವು ಯಾರನ್ನೋ ರಕ್ಷಣೆ ಮಾಡಬೇಕಾದರೆ, ಇದನ್ನು ಏಕೆ ಸಿಐಡಿ ಕೊಡುತ್ತಿದ್ದೋ? ಕಾನೂನಿನ ಚೌಕಟ್ಟಿನಿಂದ ಯಾರನ್ನು ರಕ್ಷಣೆ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಮತ್ತೆ ಆ ಕೇಸನ್ನು ನಾವು ಪ್ರೆಸ್ಟೀಜ್ ಅಗಿ ಕೂಡ ಮಾಡಿಕೊಳ್ಳುವುದಕ್ಕೆ ಹೋಗಿಲ್ಲ. ನನಗೆ ಗೊತ್ತಿದೆ. ಹಿಂದೆ ನಾವೆಲ್ಲರೂ ವಿರೋಧ ಪಕ್ಷದಲ್ಲಿದ್ದಾಗ ಯಾವುದಾದರು ಪ್ರಕರಣವನ್ನು ಸಿಬಿಐ ಗೆ ಕೊಡಿ ಎಂದಾಗ ಯಾರ್‍ಯಾರು ಏನೇನು ಮಾತನಾಡಿದ್ದಾರೆಂದು ನಾವು ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. Congress Bureau of Investigation, Corruption Bureau of Investigation, ಚೋರ್ ಬಚಾವೋ ಇನ್‌ಸ್ಟಿಟ್ಯೂಷನ್ ಎಂದು ಹೇಳಿದಂಥದ್ದು ಎಲ್ಲಾ ದಾಖಲಾತಿಗಳಿದೆ. ಅದೆಲ್ಲಾ ಇದೆ. ಆದರೂ ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ.

ಶ್ರೀ **ಗೋ. ಮಧುಸೂದನ್:–** ಮಾನ್ಯ ಸಭಾಪತಿಯವರೆ, ಅದಕ್ಕೆ ಇವತ್ತು ಇನ್ನೊಂದು ಹೊಸ ಹೆಸರು ಬಂದಿದೆ. ಅದನ್ನು ಹೇಳಿಬಿಡುತ್ತೇನೆ. **'ಕಾಂಗ್ರೆಸ್ ಬಚಾವೊ'** ಎಂದು ಇದ್ದಿದ್ದು **'ಕಾಂಗ್ರೆಸ್ ಬಗಾವೋ'** ಎಂದು ಆಗಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಸಿಬಿಐ ಕೂಡ ಒಂದು ತನಿಖಾ ಸಂಸ್ಥೆ. ಕೇಂದ್ರ ಸರ್ಕಾರದಲ್ಲಿರುವಂತಹ ಸ್ವತಂತ್ರ ತನಿಖಾ ಸಂಸ್ಥೆ. ಸಿಐಡಿ ಗೆ ಈ ತನಿಖೆಯನ್ನು ವಹಿಸಿದ್ದೇವೆ. ಸಿಐಡಿ ಯವರು ಈಗಾಗಲೇ ಇದರ ಕೆಲಸವನ್ನು ಮಾಡುತ್ತಿದ್ದಾರೆ. ಈಗಾಗಲೇ ಚಾರ್ಜ್‌ಶೀಟ್ ಹಾಕುವಂತಹ ಹಂತಕ್ಕೆ ಬಂದಿದೆ. ಮಾಡುತ್ತಿದ್ದಾರೆ. ನಮ್ಮ ಪೊಲೀಸ್‌ನವರ ಮೇಲೆ ಕೂಡ ನಾವು ಮತ್ತು ವಿರೋಧ ಪಕ್ಷದವರು ವಿಶ್ವಾಸವನ್ನು ಇಡಬೇಕಾಗುತ್ತದೆ. ನಮ್ಮ ಪೊಲೀಸ್‌ನವರಿಗೂ ಕೂಡ ಆತ್ಮಸ್ಥೈರ್ಯ ಇರಬೇಕಲ್ಲವೇ? ನಾವು ನಮ್ಮ ಪೊಲೀಸ್‌ನವರ ಮೇಲೆ ವಿಶ್ವಾಸವನ್ನು ಇಡದಿದ್ದರೆ ಮತ್ತೆ ಯಾರು ಇಡುತ್ತಾರೆ? ವಿರೋಧ ಪಕ್ಷದವರು ಒಂದು ಕಡೆ ಒಳ್ಳೆಯ ಪೊಲೀಸ್ ಅಧಿಕಾರಿಯನ್ನು ಹಾಕಿದ್ದಾರೆಂದು ಹೇಳುತ್ತಾರೆ. ನಮ್ಮ ರಾಜ್ಯದ ಪೊಲೀಸ್‌ನವರು ಒಳ್ಳೆಯ ಕೆಲಸವನ್ನು ಮಾಡುತ್ತಾರೆಂದು ಹೇಳುತ್ತಾರೆ. ಇನ್ನೊಂದು ಕಡೆ ಇವರು ಬೇಡ ಈ ಕೇಸ್ ಅನ್ನು ಸಿಬಿಐ ನವರಿಗೆ ಕೊಡಿ ಎಂದು ಹೇಳುತ್ತಾರೆ. ಈ ರೀತಿಯ ದ್ವಂದ್ವ ನೀತಿ ಬೇಕಾಗಿಲ್ಲ. ನಾನು ಇಷ್ಟು ಮಾತ್ರ ಹೇಳುವುದೇನೆಂದರೆ, ಮೃತ ಕುಟುಂಬದವರಿಗೆ ನ್ಯಾಯ ಸಿಗಬೇಕು. ಸತ್ತಿರುವಂತವರು ಏಕೆ ಸತ್ತರು ಎನ್ನುವಂತಹ ಸತ್ಯಾಂಶ ಹೊರಗಡೆ ಬರಬೇಕು. ಅದನ್ನು ಮಾಡಿಸತಕ್ಕಂತಹ ಕೆಲಸವನ್ನು ನಾವು ಯಾವುದೇ, ಯಾರದೇ ಪ್ರಭಾವ ಇರಲಿ ಅದಕ್ಕೆ ಮಣೆ ಹಾಕುವುದಿಲ್ಲ.

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, ಅದಕ್ಕೆ ಯಾರು ಕಾರಣಿಭೂತರಾಗಿದ್ದಾರೆ ಅವರಿಗೂ ಕೂಡ ಶಿಕ್ಷೆಯಾಗಬೇಕು.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಯಾರು ಕಾರಣಿಭೂತರಿದ್ದಾರೆ? ಹಾಗಾದರೆ ಎಲ್ಲಾ ಮರ್ಡರ್ ಕೇಸ್‌ನಲ್ಲಿಯೂ ಕೂಡ ಒಬ್ಬೊಬ್ಬರು ಕಾರಣಿಭೂತರಿರುತ್ತಾರೆಯೇ?

**ಶ್ರೀ ಕೆ.ಬಿ. ಶಾಣಪ್ಪ:–** ಮಾನ್ಯ ಸಭಾಪತಿಯವರೆ, there are certain things which we have asked.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಹಾಗಾದರೆ ಎಲ್ಲಾ ಮರ್ಡರ್ ಕೇಸ್‌ನಲ್ಲಿಯೂ ಕೂಡ ಒಬ್ಬೊಬ್ಬರು ಮಂತ್ರಿಗಳು ಕಾರಣಿಭೂತರಿದ್ದಾರೆ. ಇನ್ಯಾರು ಇದ್ದಾರೆಂದು ಹೇಳುತ್ತೀರಾ?

**ಶ್ರೀ ಸೋಮಣ್ಣ ಮ. ಬೇವಿನಮರದ:–** ಮಾನ್ಯ ಸಭಾಪತಿಯವರೆ, ಎಲ್ಲಾ ಪತ್ರಿಕೆಗಳಲ್ಲಿಯೂ ಕೂಡ ಬಂದಿದೆ.

**ಶ್ರೀ ಸಿದ್ದರಾಮಯ್ಯ:–** ಮಾನ್ಯ ಸಭಾಪತಿಯವರೆ, ಎಲ್ಲದರಲ್ಲಿಯೂ ರಾಜಕಾರಣ ಮಾಡುವಂಥದ್ದಲ್ಲ. ಪತ್ರಿಕೆಗಳಲ್ಲಿ ಬಂದಿದ್ದ ಮೇಲೆ ಎಲ್ಲಾ ಮಾತನಾಡುವುದಕ್ಕಾಗುವುದಿಲ್ಲ. ಪತ್ರಿಕೆಗಳಲ್ಲಿ ಬಂದಂತೆ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಮೊದಲು ಜನಗಳದು ಬೇಡಿಕೆ ಏನಿತ್ತೆಂದರೆ, ಈ ಕೇಸ್ ಅನ್ನು ಸಿಐಡಿ ತನಿಖೆಗೆಕೊಡಿ ಎಂದು. ಸಿಐಡಿ ಗೆ ತನಿಖೆಗೆ ಕೊಟ್ಟ ಮೇಲೆ ಈಗ ಮಂತ್ರಿಗಳ ಪ್ರಭಾವ ಇದೆ ಎನ್ನುವುದು, ಇದು ರಾಜಕಾರಣ. ರಾಜಕಾರಣಕ್ಕೋಸ್ಕರವಾಗಿ ನಾವು ಕಾನೂನನ್ನು ತಿರುಚುವುದಕ್ಕೆ ಸಾಧ್ಯವಾಗುವುದಿಲ್ಲ. ಕಾನೂನಿನ ರೀತ್ಯಾ ಯಾರಿಗೂ ಕೂಡ ರಕ್ಷಣೆಯನ್ನು ಕೊಡದೇ ನಾವು ತನಿಖೆಯನ್ನು ಮಾಡಿಸುತ್ತೇವೆ.

**ಉಪ ಸಭಾಪತಿಯವರು:–** ಈಗ ಈ ವಿಷಯದ ಮೇಲೆ ಚರ್ಚೆ ಮುಗಿದಿದೆ. ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡಲಾಗಿದೆ.

**(ಸದನವು ಸಂಜೆ 6 ಗಂಟೆ 44 ನಿಮಿಷಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ 2ನೇ ಜುಲೈ ಮಾಹೆ 2015 ರಂದು ಗುರುವಾರ ಬೆಳಿಗ್ಗೆ 11 ಗಂಟೆಗೆ ಸಭೆ ಸೇರಲು ನಿಶ್ಚಯಿಸಿತು)**